ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 14 ಸೋಮವಾರ 2023

ಸಂಪುಟ: 44 | ಸಂಚಿಕೆ: 120 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹಳೆಯ ಡಿಸಿ ಕಚೇರಿಯಲ್ಲಿ ವಾರ್ ಮ್ಯೂಸಿಯಂ ಪ್ರಸ್ತಾವನೆ

ರಕ್ಷಣಾ ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸುವ ಯೋಜನೆ; ಸಿಎಂ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ ಪ್ರಸ್ತಾವನೆಗೆ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ

■ ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಆ.13–ದೇಶದಾದ್ಯಂತ 76ನೇ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ಮನೆ ಮಾಡಿರುವ ಬೆನ್ನಲ್ಲೇ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು 'ವಾರ್ ಮ್ಯೂಸಿಯಂ' ಆಗಿ ಪರಿವರ್ತಿಸುವ ಬೇಡಿಕೆ ವ್ಯಕ್ತವಾಗುತ್ತಿದ್ದು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ವಾರ್ ಮ್ಯೂಸಿಯಂ' ಸ್ಥಾಪನೆಯ ಪ್ರಸ್ತಾವನೆ ಸಲ್ಲಿಸಲಾಗಿದೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯ ನೂತನ ಸಂಕೀರ್ಣಕ್ಕೆ 'ಹಳೆ ಜಿಲ್ಲಾಧಿಕಾರಿ ಕಚೇರಿ'ಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿವಿಧ ಇಲಾಖೆಗಳ ಕಚೇರಿ ಸ್ಥಳಾಂತರಗೊಂಡಿದ್ದು, ಇದೀಗ ಹಳೆ ಜಿಲ್ಲಾಧಿಕಾರಿ ಕಟ್ಟಡ ಬಹುತೇಕ ಖಾಲಿಯಾಗಿದೆ. ಪಕ್ಕದ ಎನ್‌ಸಿಸಿ ಮೈದಾನದಲ್ಲಿ 'ಯುದ್ಧ ಸ್ಮಾರಕ' ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಸ್ಮಾರಕದ ಕಾಂಕ್ರೀಟ್ ಕಾಮಗಾರಿ ಹಾಗೂ ಬೇಸ್ಮೆಂಟ್ ಕಾಮಗಾರಿ ಪೂರ್ಣಗೊಂಡಿದೆ. ಸ್ಮಾರಕಕ್ಕೆ ಬಳಸುವ ಶಿಲೆ(ಕಲ್ಲುಗಳ ಸ್ಲಾಬ್)ಗೆ ಪಾಲಿಶ್ ಮಾಡುವ ಕಾರ್ಯ ಬಾಕಿ ಇದೆ. ಅದಕ್ಕಾಗಿ ಟೆಂಡರ್ ಪ್ರಕ್ರಿಯೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿಯೇ ವಾರ್ ಮ್ಯೂಸಿಯಂ ಪ್ರಸ್ತಾಪ ಮುನ್ನೆಲೆಗೆ ಬಂದಿದೆ. ಹಳೆ ಮೈಸೂರು ಭಾಗದಲ್ಲಿಯೇ ಮೊಟ್ಟ ಮೊದಲ ಯುದ್ಧ ಸ್ಮಾರಕ ಮೈಸೂರಲ್ಲೇ ನಿರ್ಮಿಸಲಾಗುತ್ತಿದ್ದು, ಈ ಸ್ಮಾರಕದಲ್ಲಿ ಭಾರತೀಯ ಸೇನೆಯ ಮೂರು ವಿಭಾಗವನ್ನು ಪ್ರತಿನಿಧಿಸುವ ಟ್ಯಾಂಕರ್, ವಿವಿಧ ಗನ್ ಸೇರಿದಂತೆ ಭಾರತೀಯ ಸೇನೆ ಬಳಸುತ್ತಿದ್ದ ಶಸ್ತ್ರಾಸ್ತ್ರಗಳನ್ನು ಪ್ರದರ್ಶನಕ್ಕಿಡಲಾಗುತ್ತದೆ. ಇದರೊಂದಿಗೆ ಖಾಲಿಯಾಗಿರುವ ಜಿಲ್ಲಾಧಿಕಾರಿಗಳ ಹಳೆ ಕಟ್ಟಡವನ್ನು ವಾರ್ ಮ್ಯೂಸಿಯಂ ಆಗಿ ಪರಿವರ್ತಿಸಿದರೆ ಯುದ್ಧ ಸ್ಮಾರಕದ ಮಹತ್ವ ಇಮ್ಮಡಿಗೊಳ್ಳಲಿದ್ದು, ಮೈಸೂರು ಭಾಗದ ಶಾಲಾ–ಕಾಲೇಜಿನ ವಿದ್ಯಾರ್ಥಿಗಳಾದಿಯಾಗಿ, ಯುವ ಜನತೆ ಸೇರಿದಂತೆ ಸಾರ್ವಜನಿಕರಲ್ಲಿ ಭಾರತೀಯ ಸೇನೆಯ ಬಗ್ಗೆ ಮಾಹಿತಿ ನೀಡುವುದರೊಂದಿಗೆ ದೇಶಭಕ್ತಿ ಮೂಡಿಸುವ ತಾಣವಾಗಿ ರೂಪುಗೊಳ್ಳಲಿದೆ. ಅಲ್ಲದೆ, ಭಾರತೀಯ ಸೇನೆ ಸೇರಬಯಸುವವರಿಗೂ ಮಾರ್ಗದರ್ಶನ ನೀಡುವ ಹಾಗೂ ಸ್ಫೂರ್ತಿ ಕೇಂದ್ರವಾಗಿ ವಾರ್ ಮ್ಯೂಸಿಯಂ ಕಾರ್ಯನಿರ್ವಹಿಸುವ ಉದ್ದೇಶ ಹೊಂದಿದೆ. ಅದಕ್ಕಾಗಿ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ: ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ವಾರ್ ಮ್ಯೂಸಿಯಂ ಮಾಡುವ ಸಂಬಂಧ ಪ್ರಸ್ತಾವನೆಯೊಂದನ್ನು ಸಿದ್ಧಪಡಿಸಲಾಗಿದೆ. ● 8ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಮೇಲೆ ಹೆಚ್ಚಿದ ನಿರೀಕ್ಷೆ

" 2013ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಪೆರೇಡ್ ಮೈದಾನದ 4.27 ಎಕರೆ ಭೂಮಿಯನ್ನು ಮಂಜೂರು ಮಾಡಿದ್ದರು. ಅಲ್ಲದೆ, ಸ್ಮಾರಕ ನಿರ್ಮಾಣಕ್ಕೆ 1.5 ಕೋಟಿ ರೂ. ಬಿಡುಗಡೆ ಮಾಡಿದ್ದರು. ಇದೀಗ ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು, ವಾರ್ ಮ್ಯೂಸಿಯಂ ಹಾಗೂ ವಾರ್ ಲೈಬ್ರರಿ ಮತ್ತು ಸಂಶೋಧನಾ ಕೇಂದ್ರಕ್ಕಾಗಿ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ಒದಗಿಸುವ ನಿರೀಕ್ಷೆ ಇದೆ. ತವರು ಜಿಲ್ಲೆ ಮೈಸೂರಲ್ಲಿ ವಾರ್ ಮ್ಯೂಸಿಯಂ ಸ್ಥಾಪನೆ ಮಾಡುವುದು ಮೈಸೂರಿಗೆ ಹೆಮ್ಮೆಯ ಸಂಗತಿಯಾಗಿದ್ದು, ಅದಕ್ಕೆ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಇದರಿಂದ ಸಿಎಂ ಸಿದ್ದರಾಮಯ್ಯ ಅವರು ಕೈಗೊಳ್ಳುವ ನಿರ್ಧಾರದ ಮೇಲೆ 'ವಾರ್ ಮ್ಯೂಸಿಯಂ' ಸ್ಥಾಪನೆ ನಿಂತಿದೆ.



ಖಾಸಗಿ ಸಂಸ್ಥೆಗಳ ಮೂಲಕ 500 ಚಾಲಕರ ನೇಮಕಕ್ಕೆ

ಕೆಎಸ್‌ಆರ್‌ಟಿಸಿ ಚಿಂತನೆ

ಬೆಂಗಳೂರು, ಆ.13–ಸರ್ಕಾರಿ ಸಾರಿಗೆ ನಿಗಮಗಳಲ್ಲಿ ಚಾಲಕರ ಕೊರತೆ ಎದುರಾಗಿರುವ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಗಳ ಮೂಲಕ 500 ಚಾಲಕರನ್ನು ನೇಮಕ ಮಾಡಿಕೊಳ್ಳಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 15,000ಕ್ಕೂ ಹೆಚ್ಚು ಸಿಬ್ಬಂದಿ ಕೊರತೆಯಿದೆ ಎಂದು ಬಸ್ ನಿಗಮದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಾರಿಗೆ ನಿಗಮಗಳಲ್ಲಿ ಚಾಲಕರು ಸೇರಿದಂತೆ ಇತರೆ ಸಿಬ್ಬಂದಿ ಕೊರತೆಗಳಿದ್ದು, ಇದರಿಂದಾಗಿ ಜೂನ್ ತಿಂಗಳಿನಿಂದ ಶಕ್ತಿ ಯೋಜನೆ ಪ್ರಾರಂಭವಾದ ನಂತರ ಪರಿಣಾಮಕಾರಿಯಾಗಿ ಸೇವೆಗಳ



ತಲುಪಿಸುವುದು ಕಷ್ಟಕರವಾಗಿದೆ. ಸಿಬ್ಬಂದಿ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಂಪೂರ್ಣ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಒಂದು ವರ್ಷ ಬೇಕಾಗುತ್ತದೆ. ಹಾಗಾಗಿ ನಿಗಮಕ್ಕೆ (ಕೆಎಸ್‌ಆರ್‌ಟಿಸಿ) ಕೂಡಲೇ ಚಾಲಕರು ಬೇಕಾಗಿದ್ದು, ಇ–ಟೆಂಡರ್ ಪ್ರಕ್ರಿಯೆ ಮೂಲಕ ಖಾಸಗಿ ಏಜೆನ್ಸಿ ಮೂಲಕ ಚಾಲಕರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಏಜೆನ್ಸಿ ಮೂಲಕ ನೇಮಕಗೊಂಡ ಚಾಲಕರಿಗೆ ಯಾವುದೇ ಪ್ರೋತ್ಸಾಹ ಧನ ನೀಡಲಾಗುವುದಿಲ್ಲ ಎಂದು ತಿಳಿಸಿದ್ದಾರೆ. ನೇಮಕಗೊಂಡ ಚಾಲಕರನ್ನು ಕೂಡಲೇ ಬಸ್ ಚಲಾಯಿಸಲು ಅನುಮತಿ ನೀಡುವುದಿಲ್ಲ. ಅವರಿಗೆ ಹಲವಾರು ಸುತ್ತಿನ ಪರೀಕ್ಷೆ ನೀಡಲಾಗುತ್ತದೆ. ತರಬೇತಿಗಳೂ ಇರಲಿದೆ. ಈ ತರಬೇತಿಗಳು ಎರಡು ತಿಂಗಳ ಕಾಲ ನಡೆಯಲಿದೆ. ನಂತರ ರಾಜ್ಯಾದ್ಯಂತ ಇರುವ ಕೊರತೆಯ ಆಧಾರದ ಮೇಲೆ ಅವರನ್ನು ಮಂಗಳೂರು ಮತ್ತು ರಾಮನಗರದಂತಹ ವಿವಿಧ ವಿಭಾಗಗಳಿಗೆ ನಿಯೋಜಿಸಲಾಗುವುದು. 11 ತಿಂಗಳ ಅವಧಿಗೆ ಸುಮಾರು 500 ಚಾಲಕರನ್ನು ನೇಮಿಸಿಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಒಂದೇ ರಾತ್ರಿ ಎರಡು ಕಡೆ ದರೋಡೆ

ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು, ಶ್ರೀರಂಗಪಟ್ಟಣ ಬಳಿ ದುಷ್ಕೃತ್ಯ



ಶ್ರೀರಂಗಪಟ್ಟಣ, ಆ.13– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರಯಾಣಿಕರನ್ನು ಬೆದರಿಸಿ ದರೋಡೆ ಮಾಡುವ ಪ್ರಕರಣಗಳು ಮುಂದುವರೆದಿದ್ದು, ಒಂದೇ ರಾತ್ರಿ ಎರಡು ಕಡೆ ದರೋಡೆ ನಡೆದಿದೆ.

ತಾಲ್ಲೂಕಿನ ನಗುವನಹಳ್ಳಿ ಗೇಟ್ ಮತ್ತು ಗೌರಿಪುರ ಬಳಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದವರ ಬೆದರಿಸಿ ದುಷ್ಕರ್ಮಿಗಳು ಚಿನ್ನಾಭರಣ ದೋಚಿದ್ದಾರೆ. ಶನಿವಾರ ತಡರಾತ್ರಿ ಹೆದ್ದಾರಿಯಲ್ಲಿ ಬೈಕ್‌ನಲ್ಲಿ ಹೆಲ್ಮೆಟ್ ಧರಿಸಿ ಬಂದಿದ್ದ ಇಬ್ಬರು ದರೋಡೆ ಮಾಡಿ ಪರಾರಿಯಾಗಿದ್ದು, ರಾತ್ರಿ ವೇಳೆ ಪ್ರಯಾಣಿಸುವವರನ್ನು ದರೋಡೆಕೋರರು ಗುರಿಯಾಗಿಸಿ ಸುಲಿಗೆ ಮಾಡಿದ್ದಾರೆ.

ನಗುವನಹಳ್ಳಿ ಗೇಟ್ ಬಳಿಯ ಭಾರತ್ ಬೆಂಚ್ ಕಂಪೆನಿ ಎದುರು ಉಡುಪಿಯ ಶಿವಪ್ರಸಾದ್–ಸುಮಾ ದಂಪತಿ ಕಾರು ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದ ಸಮಯದಲ್ಲಿ ಇಬ್ಬರು ದುಷ್ಕರ್ಮಿಗಳು ದಂಪತಿಯನ್ನು ಬೆದರಿಸಿ 30 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಇದಾದ ಕೆಲ ಹೊತ್ತಿನಲ್ಲಿ ಗೌರಿಪುರ ಬಳಿ ದುಷ್ಕರ್ಮಿಗಳು ಕೋಲಾರ ಜಿಲ್ಲೆ ಮಾಲೂರಿನ ಡಾ.ರಕ್ಷಿತ್‌ರೆಡ್ಡಿ ಮತ್ತು ಡಾ.ಮಾನಸ ದಂಪತಿಯನ್ನು ಬೆದರಿಸಿ 40 ಗ್ರಾಂ ಚಿನ್ನಾಭರಣ ಕಸಿದು ಪರಾರಿಯಾಗಿದ್ದಾರೆ. ಮೈಸೂರಿಗೆ ತೆರಳುತ್ತಿದ್ದ ವೇಳೆ ಡಾ.ರಕ್ಷಿತ್ ರೆಡ್ಡಿ ಅವರ ಕಾರು ಪಂಕ್ಚರ್ ಆಗಿದ್ದು, ಚಕ್ರ ಬದಲಿಸುತ್ತಿದ್ದಾಗ ದುಷ್ಕರ್ಮಿಗಳು ದರೋಡೆ ಮಾಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಎರಡು ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

PFI ಪಿತೂರಿ ಪ್ರಕರಣ: ಕರ್ನಾಟಕ ಸೇರಿ ಐದು ರಾಜ್ಯಗಳಲ್ಲಿ NIA ದಾಳಿ

ನವದೆಹಲಿ, ಆ.13–ಜನರಲ್ಲಿ ಕೋಮು ಭಾವನೆಗಳನ್ನು ಹುಟ್ಟುಹಾಕುವ ಮೂಲಕ ಶಾಂತಿ ಕದಡುವ ಮತ್ತು ದೇಶವನ್ನು ಅಸ್ಥಿರಗೊಳಿಸುವ 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ' (PFI) ಪಿತೂರಿಯನ್ನು ವಿಫಲಗೊಳಿಸುವ ತನ್ನ ನಿರಂತರ ಪ್ರಯತ್ನದಲ್ಲಿ ಎನ್‌ಐಎ ಐದು ರಾಜ್ಯಗಳಲ್ಲಿ ದಾಳಿ ನಡೆಸಿದೆ. ಫೆಡರಲ್ ಏಜೆನ್ಸಿಯ ವಕ್ತಾರರು ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಬಿಹಾರದ 14 ಸ್ಥಳಗಳಲ್ಲಿ ಶೋಧ ನಡೆಸಲಾಗಿದ್ದು, ಹಲವಾರು ಡಿಜಿಟಲ್ ಸಾಧನಗಳು ಮತ್ತು ದೋಷಾರೋಪಣೆಯ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದರು. ಕೇರಳದ ಕಣ್ಣೂರು ಮತ್ತು ಮಲಪ್ಪುರಂ ಜಿಲ್ಲೆಗಳು, ಕರ್ನಾಟಕದ ದಕ್ಷಿಣ ಕನ್ನಡ, ಮಹಾರಾಷ್ಟ್ರದ ನಾಸಿಕ್ ಮತ್ತು ಕೊಲ್ಹಾಪುರ, ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಮತ್ತು ● 8ನೇ ಪುಟಕ್ಕೆ

ಟೊಮೆಟೊ ಬಳಿಕ ಇದೀಗ ಈರುಳ್ಳಿ ಸರದಿ




ಬೆಂಗಳೂರು, ಆ.13–ಗಗನಕ್ಕೇರಿದ್ದ ಟೊಮ್ಯಾಟೋ ಬೆಲೆ ಇಳಿಮುಖವಾಗುತ್ತಿದೆ ಎಂದು ಸಮಾಧಾನಪಡುವಷ್ಟರಲ್ಲಿ ಈರುಳ್ಳಿ ಬೆಲೆ ಗಗನಕ್ಕೇರುತ್ತಿದ್ದು, ಈ ಬೆಳವಣಿಗೆ ಇದೀಗ ಆತಂಕ ಸೃಷ್ಟಿಸುತ್ತಿದೆ.

ಕಳೆದ ವಾರ ಚಿಲ್ಲರೆ ಅಂಗಡಿಗಳಲ್ಲಿ ಕೆಜಿಗೆ 25 ರೂ.ಗಳಷ್ಟಿದ್ದ ಈರುಳ್ಳಿ ಬೆಲೆ, ಗುಣಮಟ್ಟಕ್ಕೆ ಅನುಗುಣವಾಗಿ 35–40 ರೂ.ಗೆ ತಲುಪಿದೆ, ಟಾಪ್ ಎಂಡ್ ಸೂಪರ್ ಮಾರ್ಕೆಟ್‌ಗಳಲ್ಲಿ ಕೆಜಿಗೆ 45 ರೂಗಳಂತೆ ಮಾರಾಟ ಮಾಡಲಾಗುತ್ತಿದೆ. ಬೆಂಗಳೂರಿನಾದ್ಯಂತ ಚಿಲ್ಲರೆ ಅಂಗಡಿಗಳು ಮತ್ತು ಸೂಪರ್

ಬೆಲೆ ಏರಿಕೆ ನಿಯಂತ್ರಣಕ್ಕೆ ಸರ್ಕಾರ ಯತ್ನ

ಮಾರ್ಕೆಟ್‌ಗಳಲ್ಲಿ ಕಳೆದ ಒಂದು ವಾರದಿಂದ ಈರುಳ್ಳಿ ಬೆಲೆಯಲ್ಲಿ ಕೆಜಿಗೆ ಸುಮಾರು 12–15 ರೂ ರಷ್ಟು ಏರಿಕೆಯಾಗಿದೆ. ಈ ನಡುವೆ 5 ರಾಜ್ಯಗಳಲ್ಲಿ ಚುನಾವಣೆ ಇರುವ ಪರಿಣಾಮ ಬೆಲೆ ಏರಿಕೆ ಜನರ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಈ ಹಿನ್ನೆಲೆಯಲ್ಲಿ ಬೆಲೆ ಏರಿಕೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕ್ರಮಕೈಗೊಳ್ಳಲು ಮುಂದಾಗಿದೆ ಎಂದು ತಿಳಿದುಬಂದಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ಅಧಿಕಾರಿಗಳು ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ ಮತ್ತು ರಾಷ್ಟ್ರೀಯ ಸಹಕಾರಿ ಗ್ರಾಹಕ ಒಕ್ಕೂಟದೊಂದಿಗೆ ಸರಣಿ ಸಭೆಗಳನ್ನು ನಡೆಸಿದ್ದಾರೆ. ಸಭೆಯಲ್ಲಿ ಬೆಲೆಗಳನ್ನು ಇಳಿಕೆ ಮಾಡಲು ರಾಜ್ಯಗಳು ಮತ್ತು ಮಾರುಕಟ್ಟೆಗಳಲ್ಲಿ ಸಂಗ್ರಹವಾಗಿರುವ 3 ಲಕ್ಷ ಮೆಟ್ರಿಕ್ ಟನ್ ಬಫರ್ ಸ್ಟಾಕ್ ಅನ್ನು ಬಳಸಲು ನಿರ್ಧಾರ ಕೈಗೊಳ್ಳಲಾಯಿತು. ರಾಜ್ಯ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಮಾತನಾಡಿ, ಸಮಸ್ಯೆಯನ್ನು ● 8ನೇ ಪುಟಕ್ಕೆ

ಮೈಸೂರಲ್ಲಿ 76ನೇ ಸ್ವಾತಂತ್ರ್ಯ ದಿನಾಚರಣೆ ಕವಾಯತಿಗೆ ತಾಲೀಮು





ಪೋಷಕರ ಆತಂಕ

" ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುವ ವಿವಿಧ ಶಾಲಾ ಮಕ್ಕಳನ್ನು ಪಂಜಿನ ಕವಾಯತು ಮೈದಾನಕ್ಕೆ ಕರೆತಲು ವಾಹನದ ವ್ಯವಸ್ಥೆ ಮಾಡಬೇಕು. ಪ್ರತೀ ವರ್ಷದಂತೆ ನೃತ್ಯ ಪ್ರದರ್ಶಿಸಿದ ಮಕ್ಕಳಿಗೆ ಸಿಹಿ ವಿತರಿಸಬೇಕು. ಅಲ್ಲದೇ ಉತ್ತಮವಾಗಿ ಪ್ರದರ್ಶನ ನೀಡಿದ ತಂಡಕ್ಕೆ ಬಹುಮಾನ ನೀಡಬೇಕು. ತಾಲೀಮಿನ ವೇಳೆ ಮಕ್ಕಳನ್ನು ಕರೆತರಲು ಈ ಬಾರಿ ವಾಹನದ ವ್ಯವಸ್ಥೆ ಮಾಡಿಲ್ಲದ ಕಾರಣ ಪೋಷಕರು ತಮ್ಮ ಮಕ್ಕಳನ್ನು ಕರೆತರಬೇಕಾದ ಅನಿವಾರ್ಯತೆ ಎದುರಾಗಿದೆ. ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಮಕ್ಕಳ ಹಿತ ಕಾಯಲು ಕ್ರಮ ಕೈಗೊಳ್ಳಬೇಕೆಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪೋಷಕರು ಮನವಿ ಮಾಡಿದ್ದಾರೆ.

ಮೈಸೂರು, ಆ.13(ಎಂಟಿವೈ)–ಸ್ವಾತಂತ್ರ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ಆ.15ರಂದು ನಡೆಯುವ ಕವಾಯತಿನ ಅಂತಿಮ ತಾಲೀಮನ್ನು ಭಾನುವಾರ ಮೈಸೂರಿನ ಪಂಜಿನ ಕವಾಯತು ಮೈದಾನದಲ್ಲಿ ನಡೆಸಲಾಯಿತು. ಆ.15(ಮಂಗಳವಾರ) ಬನ್ನಿಮಂಟಪದ ಕವಾಯತು ಮೈದಾನದಲ್ಲಿ ಧ್ವಜಾರೋಹಣ ನೆರವೇರಲಿದ್ದು, ಅದಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಧ್ವಜಾರೋಹಣದ ಬಳಿಕ ಆಕರ್ಷಕ ಪಥ ಸಂಚಲನ ಹಾಗೂ ಶಾಲಾ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ಜರುಗಲಿದ್ದು, ಕಾರ್ಯಕ್ರಮದ ಯಶಸ್ವಿಗಾಗಿ ಕಳೆದ ಎರಡು ದಿನಗಳಿಂದ ತಾಲೀಮು ನಡೆಸಲಾಗುತ್ತಿದೆ. ಇದರೊಂದಿಗೆ ಪಂಜಿನ ಕವಾಯತು ಮೈದಾನದಲ್ಲಿ ಸ್ವಾತಂತ್ರ್ಯೋತ್ಸವ ದಿನದ ಆಚರಣೆಗೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದ್ದು, ಭಾನುವಾರ ಪಥ ಸಂಚಲನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ತಾಲೀಮನ್ನು ಡಿಸಿಪಿ ಮುತ್ತುರಾಜ್ ಅವರ ನೇತೃತ್ವದಲ್ಲಿ ನಡೆಸಲಾಯಿತು.

23 ತುಕಡಿಗಳು: ಮೈಸೂರಿನಲ್ಲಿ ಆ.15ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಈ ಬಾರಿ 23 ತುಕಡಿಗಳು ಪಥ ಸಂಚಲನ ನಡೆಸಲಿವೆ. ನಗರ ಪೊಲೀಸ್, ● 8ನೇ ಪುಟಕ್ಕೆ

ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ನೇತ್ರ ತಪಾಸಣೆ ಮಾಡಬೇಕು

ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್



ಮೈಸೂರು, ಆ.13(ಎಂಟಿವೈ)– ಮಕ್ಕಳಲ್ಲಿ ಕಣ್ಣಿನ ಸಮಸ್ಯೆ ಹೆಚ್ಚಾಗುತ್ತಿದ್ದು, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ನೇತ್ರ ತಪಾಸಣೆ ಮಾಡಿಸಬೇಕು ಎಂದು ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ. ವೆಂಕಟೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀಯೋಗಿನಾರಯಣ ಬಣಜಿಗ (ಬಲಿಜ) ಸಂಘದಲ್ಲಿ ವಾಸನ್ ಐ ಕೇರ್ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೊರಗಿನ ಸುಂದರ ಜಗತ್ತಿನ ಆಂತರಿಕ ವಿಶ್ಲೇಷಣೆಗೆ, ಆನಂದಿಸುವಿಕೆ, ಗ್ರಹಿಕೆಗೆ ಕಣ್ಣಿನ ಅವಶ್ಯಕತೆ ಹೆಚ್ಚಾಗಿದೆ. ಕಣ್ಣು ಹೇಗೆ ಅತಿ ಸುಂದಾರವಾದದ್ದನ್ನು ಗ್ರಹಿಸಿ ಮೆದುಳಿಗೆ ಸಂವಹಿಸುತ್ತದೆಯೋ, ಹಾಗೆ ಸೂಕ್ಷ್ಮ ಅಂಗಾಂಗಗಳು ಕಾರ್ಯನಿರ್ವಹಿಸುತ್ತದೆ. ಹೊರಗಿನ ದೃಶ್ಯವನ್ನು ಚಿತ್ರೀಕರಿಸಿ ನೋಡುವ ಭರದಲ್ಲಿ ಕಣ್ಣಿನ ಮೇಲೆ ಬೇಡದ ವಿಕಿರಣ ಬೀಳುತ್ತಿರುವುದರಿಂದ ಕಣ್ಣಿನ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದರಿಂದ ಕಣ್ಣಿನ ಕಾರ್ಯಕ್ಷಮತೆಯನ್ನು ಕ್ಷೀಣಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಗೂ ದೃಷ್ಟಿ ದೋಷದ ಸಮಸ್ಯೆ ಕಾಡಲಾರಂಭಿಸಿದೆ. ಇದರ ಪರಿಣಾಮ ಮಕ್ಕಳು ಕನ್ನಡಕ ಧರಿಸುವಂತಾಗಿದೆ. ಇದರಿಂದ ಸಂಘ ಸಂಸ್ಥೆಗಳು ನೇತ್ರ ತಪಾಸಣಾ ಶಿಬಿರ ಆಯೋಜಿಸಿ ಬಡವರಿಗೆ ಉಚಿತ ಚಿಕಿತ್ಸೆಗೆ ನೆರವು ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಲಿಜ ಸಂಘದ ಅಧ್ಯಕ್ಷ ಎಂ.ನಾರಾಯಣ, ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗೋಪಾಲ ಕೃಷ್ಣ ನೇತ್ರ ತಜ್ಞೆ ಡಾ.ಸಾನಿಯಾ ಫಾತಿಮಾ, ಟೆಕ್ನಿಕಲ್ ಅಸಿಸ್ಟೆಂಟ್ ಶಿವಪ್ರಸಾದ್ ಕಾರ್ಯ ಕ್ರಮ ಸಂಯೋಜಕ ಡಾ.ಟಿ.ರಮೇಶ, ನಿರ್ದೇಶಕರಾದ ಕುರಟ್ಟಿ ಗೋಪಾಲಕೃಷ್ಣ, ಬಿ.ಕೆ. ಸುರೇಶ್, ಪಾರ್ಥಸಾರತಿ, ನಿಲಯದ ಮೇಲ್ವಿಚಾರಕ ಹೆಚ್.ಆರ್.ವೆಂಕಟೇಶ್, ನಿಲಯಪಾಲಕ ಎಂ.ಸಿ.ರಘುಶೆಟ್ಟಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದೊಡ್ಡಟ್ಟಿಹುಂಡಿಯಲ್ಲಿ ಸ್ವಚ್ಛತಾ ಜಾಗೃತಿ ಸಪ್ತಾಹ



ಮೈಸೂರು, ಆ.13(ಎಸ್‌ಪಿಎನ್)– ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ದೊಡ್ಡಟ್ಟಿ ಹುಂಡಿಯಲ್ಲಿ ಮೈಸೂರು ಶ್ರೀ ಕಾಗಿನೆಲೆ ಬಿ.ಇಡಿ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ನೀರು ಮತ್ತು ನೈರ್ಮಲ್ಯ ಸ್ವಚ್ಛತಾ ಜಾಗೃತಿ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಕಾಗಿನೆಲೆ ಬಿಇಡಿ ಕಾಲೇಜಿ ಪ್ರಾಂಶುಪಾಲರಾದ ಡಾ.ಕೆ.ಕೆ.ವಿಶಾಲಾಕ್ಷಿ ಮಾತನಾಡಿ, ವಿದ್ಯಾರ್ಥಿಗಳು, ತಮ್ಮ ಮನೆಗಳ ಸುತ್ತಮುತ್ತ ಸ್ವಚ್ಛತೆಗೆ ಆದ್ಯತೆ ನೀಡಬೇಕು ಮತ್ತು ಕುಡಿಯುವ ನೀರು ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು. ಪರಿಸರವನ್ನು ಕಲುಷಿತಗೊಳಿಸುವ ಸಾರ್ವಜನಿಕರಿಗೆ ತಿಳಿಹೇಳಿ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಮನವಿ ಮಾಡಿದರು. ನಂತರ ವಿದ್ಯಾರ್ಥಿಗಳು ಗ್ರಾಮದಲ್ಲಿ ಶ್ರಮದಾನ ಮಾಡಿದರು. ಈ ವೇಳೆ ಪಿಡಿಓ ರುಕ್ಮಾಂಗದ, ಕಾರ್ಯದರ್ಶಿ ಎಸ್.ಸೌಮ್ಯ, ಅಧ್ಯಕ್ಷೆ ಸುಮಿತ್ರ, ಸಹಾಯಕ ಪ್ರಾಧ್ಯಾಪಕ ಡಾ.ಶರತ್‌ಕುಮಾರ್, ಸಣ್ಣರಾಮೇಗೌಡ, ನಾಗೇಶ್ ಮತ್ತಿತರರು ಹಾಜರಿದ್ದರು.

ಸ್ವಾತಂತ್ರ್ಯ ದಿನ: ಬೈಕ್ ಸಾಹಸ ಕಾರ್ಯಕ್ರಮ



ಮೈಸೂರು, ಆ.13(ಜಿಎ)–ಸ್ವಾತಂತ್ರ್ಯೋತ್ಸವದ ಅಂಗವಾಗಿ ನಮ್ಮ ಮೈಸೂರು ಬೈಕರ್ಸ್ ಕಮ್ಯುನಿಟಿ ಸಂಸ್ಥೆ ವತಿಯಿಂದ ಆ.15ರಂದು ಬೈಕ್ ಸವಾರರಿಗಾಗಿ ವಿವಿಧ ಸಾಹಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಪ್ರಣಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಡಕೊಳದ ಕೆಐಎಡಿಬಿ ಪ್ರದೇಶದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಲಿದ್ದಾರೆ. ಬೈಕ್ ಸವಾರರ ಸಾಹಸ, ಸುರಕ್ಷಿತ ಬೈಕ್ ಸವಾರಿ ಅರಿವು, ದೂರದ ಬೈಕ್ ಪ್ರಯಾಣ ವೇಳೆ ಅನುಸರಿಸಬೇಕಾದ ಎಚ್ಚರಿಕೆಯ ಕ್ರಮ, ಇದಕ್ಕೆ ಅಗತ್ಯವಾದ ಪರಿಕರ ರಿಯಾಯಿತಿ ದರದಲ್ಲಿ ಮಾರಾಟ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಅಂದು ಬೆಳಗ್ಗೆ 8ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಪ್ರವೇಶ ಶುಲ್ಕ 399 ರೂ. ನಿಗದಿಪಡಿಸಲಾಗಿದೆ. ಸ್ಟಾಲ್ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮ, ಫಿಗರ್ ಆಫ್ ಏಯ್ಟ್, ಅಡ್ವೆಂಚರ್ ಟ್ರಾಕ್ ಸ್ಪರ್ಧೆ, ಬೈಕರ್ಸ್ ಫ್ಯಾಷನ್ ಶೋ, ಸ್ಟಂಟ್ ರೈಡಿಂಗ್ ಇರಲಿವೆ. ವೀಕ್ಷಿಸಲು ಬರುವವರಿಗೆ 199 ರೂ. ಶುಲ್ಕವಿದೆ. ಸ್ಟಂಟ್ ರೈಡಿಂಗ್‌ನಲ್ಲಿ ಖ್ಯಾತ ವೃತ್ತಿಪರರು ಪಾಲ್ಗೊಳ್ಳುತ್ತಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ. 95358 06223 ಅನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಚಿನ್, ನಿಖಿಲ್, ಶಶಾಂಕ್, ಅಮಿತ್ ಉಪಸ್ಥಿತರಿದ್ದರು.

ಸೈನಿಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಲು ಅರ್ಜಿ ಆಹ್ವಾನ

ಮೈಸೂರು,ಆ.13–ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ಮಾಜಿ ಸೈನಿಕರು ಜಿಲ್ಲಾ ಸೈನಿಕ ಮಂಡಳಿಯಲ್ಲಿ ವೇತನ–ಭತ್ಯೆ ರಹಿತವಾಗಿ ಸ್ವ–ಇಚ್ಛೆಯಿಂದ ಕಾರ್ಯ ನಿರ್ವಹಿಸಲು ಆಸಕ್ತಿಯುಳ್ಳವರು ಆ.21 ರೊಳಗಾಗಿ ಸ್ವವಿವರಗಳನ್ನೊಳಗೊಂಡ ಅರ್ಜಿಯನ್ನು ಉಪನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ದೂ.ಸಂ. 0821–2425240 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಪಿಕೆಟಿಬಿ, ಸಿಡಿ ಆಸ್ಪತ್ರೆಯ ನಿವೃತ್ತ ವೈದ್ಯಕೀಯ ಅಧೀಕ್ಷಕ ಡಾ. ಎಂ. ಸದಾದೇವ್ ನಿಧನ



ಮೈಸೂರು,ಆ.13–ಮೈಸೂರಿನ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಡಾ. ಎಂ.ಸದಾದೇವ್(79) ಅವರು ಭಾನುವಾರ ಗೋಕುಲಂನಲ್ಲಿರುವ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ದಿವಂಗತರು ಇಬ್ಬರು ಪುತ್ರಿಯರು, ಸಹೋದರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಡಾ.ಸದಾದೇವ್ ಅವರ 50 ವರ್ಷಗಳ ಕಾಲ ಕ್ಷಯರೋಗಿಗಳ ಸೇವೆ ಸ್ಮರಣೀಯ. ನಿವೃತ್ತಿಯ ನಂತರ ಮಂಗಳೂರಿನ ಕೆ.ಎಸ್.ಹೆಗ್ಗಡೆ ವೈದ್ಯಕೀಯ ವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ ಪ್ರತಿವಾರ ಬೈಲುಕುಪ್ಪೆ, ಗುರುಪುರ ಟಿಬೇಟಿಯನ್ ಕಾಲೋನಿಗೆ ಭೇಟಿ ನೀಡಿ ಚಿಕಿತ್ಸೆ ನೀಡುತ್ತಿದ್ದರು. ಈ ಸೇವೆಗೆ ದಲೈಲಾಮ ಅವರು ಸನ್ಮಾನಿಸಿದ್ದರು.

ಸೋಮವಾರ ಮಧ್ಯಾಹ್ನ 12.30 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಡಾ.ಸದಾದೇವ್ ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ನೀಡಲಿ. ಇವರ ಅಗಲಿಕೆಯಿಂದ ವೈದ್ಯಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಮತ್ತು ಡಾ.ಸಾಯಿನಾಥ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್‌ನಿಂದ ವಾಹನ ಚಾಲಕರಿಗೆ ಕಿಟ್ ವಿತರಣೆ



ಮೈಸೂರು, ಆ.13(ಬಿಎಲ್‌ಯು)– ಮೈಸೂರಿನ ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್‌ನವರು ಟ್ರಕ್, ಬಸ್, ಟಂಪೊ ಸೇರಿದಂತೆ ಇತರೆ ವಾಹನ ಚಾಲಕರಿಗೆ ಭಾನುವಾರ ಕಿಟ್‌ಗಳನ್ನು ವಿತರಿಸಿದರು.

ಮೈಸೂರಿನ ಅರಮನೆ ಉತ್ತರ ದ್ವಾರದ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಾಹನ ಚಾಲಕರಿಗೆ ಸಾಂಕೇತಿಕವಾಗಿ ಕಿಟ್‌ಗಳನ್ನು ವಿತರಿಸಿದರು.

ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್‌ನಿಂದ ಕಿಟ್ ನೀಡುತ್ತಿರುವುದರಿಂದ ವಾಹನ ಚಾಲಕರಿಗೆ ಬಹಳಷ್ಟು ಅನುಕೂಲವಾಗುತ್ತದೆ. ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಇತ್ತೀಚಿಗೆ ಹೆಚ್ಚು ಅಪಘಾತಗಳು ಸಂಭವಿಸುತ್ತಿದೆ. ಚಾಲಕರು ನಿಧಾನವಾಗಿ ವಾಹನ ಚಾಲನೆ ಮಾಡಬೇಕು. ಈ ಮೂಲಕ ಅಪಘಾತದಿಂದ ಮುಕ್ತವಾಗಬೇಕು ಎಂದು ಯದುವೀರ್ ಇದೇ ವೇಳೆ ಸಲಹೆ ನೀಡಿದರು.

ವಾಹನದ ಟೂಲ್ಸ್ ಬಾಕ್ಸ್, ಜರ್ಕಿನ್, ಪ್ರಥಮ ಚಿಕಿತ್ಸಾ ಕಿಟ್, ಚಾಕೋಲೇಟ್, ಸಿಹಿತಿಂಡಿ ಸೇರಿದಂತೆ ಹಲವು ವಸ್ತುಗಳಿರುವ 1008 ಕಿಟ್‌ಗಳನ್ನು ವಾಹನ ಚಾಲಕರಿಗೆ ವಿತರಣೆ ಮಾಡಲಾಗುತ್ತಿದೆ.

ಯದುವೀರ್ ಒಡೆಯರ್ ಪತ್ನಿ ತ್ರಿಷಿಕಾ ಕುಮಾರಿ, ಆರ್ಗನೈಸೇಷನ್‌ನ ಅಧ್ಯಕ್ಷ ಕಾಂತಿಲಾಲ್, ಕಾರ್ಯದರ್ಶಿ ಗೌತಮ್ ಸಲೇಚಾ, ಸಂಚಾಲಕ ರಾಜನ್ ಬಾಗ್ಮಾರ್, ಅಶೋಕ್ ಸಲೇಚಾ, ದಿಲೀಪ್ ಜೈನ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜೈನ ಆಚಾರ್ಯ ಶ್ರೀ ತೀರ್ಥ ಭದ್ರಸೂರಿಜಿ, ಪ್ರಗಳಜ್ವ ಸಾಗರಜೀ ಮಹಾರಾಜ್ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದರು.

ಮೈಸೂರು ದಸರಾ ಸರಳ ಇಲ್ಲವೇ ಅದ್ದೂರಿಯಾಗಿ ಆಚರಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು

ರಾಜವಂಶಸ್ಥ ಯದುವೀರ್ ಒಡೆಯರ್ ಅಭಿಮತ

ಮೈಸೂರು, ಆ.13 (ಬಿಎಲ್‌ಯು)– ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಿದರೂ ಸಂತೋಷ, ಸರಳವಾಗಿ ಆಚರಣೆ ಮಾಡಿದರೂ ಸಂತೋಷ ಎಂದು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಭಾನುವರ ಪತ್ರಕರ್ತರ ಜೊತೆ ಮಾತನಾಡಿದ ಅವರು, ದಸರಾ ಮಹೋತ್ಸವವನ್ನು ಸರಳ ಅಥವ ಅದ್ದೂರಿಯಾಗಿ ಮಾಡುವ ವಿವೇಚನೆ ಸರ್ಕಾರಕ್ಕೆ ಬಿಟ್ಟಿದೆ. ಆದರೆ ಮೈಸೂರು ಅರಮನೆ ಒಳಗೆ ರಾಜವಂಶಸ್ಥರು ನಡೆಸುವ ದಸರಾ ಧಾರ್ಮಿಕ ಹಾಗೂ ಸಾಂಪ್ರದಾಯಿಕ ವಿಧಿ ವಿಧಾನಗಳಂತೆ ನಡೆಯುತ್ತದೆ. ನವರಾತ್ರಿ ಆರಂಭ, ನವಮಿ ಹಾಗೂ ದಶಮಿ ಸೇರಿದಂತೆ ಎಲ್ಲಾ ಕಾರ್ಯಗಳು ಸಂಪ್ರದಾಯದಂತೆ ಚಾಚೂ ತಪ್ಪದೆ ನಡೆಯುತ್ತದೆ. ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ದಸರಾ ಆಚರಣೆಗೆ ಇನ್ನು ಬಹಳಷ್ಟು ದಿನಗಳು ಇರುವ ಕಾರಣ ಸರ್ಕಾರದಿಂದ ಇನ್ನು ನಮಗೆ ಆಹ್ವಾನ ಬಂದಿಲ್ಲ. ಆದರೆ ಈಗ ದಸರಾ ಆನೆಗಳ ಆಯ್ಕೆ ಪ್ರಕ್ರಿಯೆ ಸೇರಿದಂತೆ ಹಲವು ಸಿದ್ಧತೆಗಳು ನಡೆಯುತ್ತಿದೆ ಎಂದರು.

ಈ ವರ್ಷ ಮಳೆಯ ಪ್ರಮಾಣ ಕಡಿಮೆಯಾಗಿದೆ. ಹೆಚ್ಚು ಮಳೆಯೂ ಇಲ್ಲದೆ, ಕಡಿಮೆ ಮಳೆಯೂ ಇಲ್ಲದೆ ಹದವಾಗಿ ಮಳೆ ಬರಬೇಕು. ಈ ಹಿನ್ನೆಲೆಯಲ್ಲಿ ಉತ್ತಮ ಮಳೆಯಾಗಲಿ ಎಂದು ದೇವರನ್ನು ಬೇಡುತ್ತೇನೆ ಎಂದು ಯದುವೀರ್ ತಿಳಿಸಿದರು.

ರಾಜಕೀಯದ ಬಗ್ಗೆ ನನಗೆ ಆಸಕ್ತಿ ಇಲ್ಲ. ಈ ವಿಚಾರವನ್ನು ಬಹಳಷ್ಟು ಬಾರಿ ಸ್ಪಷ್ಟಪಡಿಸಿದ್ದೇನೆ. ರಾಜಕೀಯಕ್ಕೆ ಪಾದಾರ್ಪಣೆ ಮಾಡಿಯೇ ಸಮಾಜ ಸೇವಾ ಕಾರ್ಯಗಳನ್ನು ಮಾಡಬೇಕು ಎಂಬ ನಿಯಮವಿಲ್ಲ. ರಾಜಕೀಯ ಕ್ಷೇತ್ರದಿಂದ ಹೊರಗಿದ್ದು ಕೂಡ ಸಾರ್ವಜನಿಕ ಕಾರ್ಯಗಳನ್ನು ಮಾಡಬಹುದು. ಈ ಹಾದಿಯಲ್ಲಿ ನಾನು ಸಾಗುತ್ತೇನೆ ಎಂದು ಯದುವೀರ್ ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ಈಗಾಗಲೇ ಆರಂಭವಾಗಿರುವ ಸೈಬರ್ ತರಬೇತಿ ಕೇಂದ್ರ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೂಡ ಸ್ಥಾಪನೆ ಆಗಬೇಕು. ಮೈಸೂರಿನ ಸೈಬರ್ ತರಬೇತಿ ಕೇಂದ್ರ ಚೆನ್ನಾಗಿ ನಡೆಯುತ್ತಿದೆ. ಸೈಬರ್ ಭದ್ರತೆ ಕೇಂದ್ರವಾಗುವ ಉದ್ದೇಶದಿಂದ ಆರಂಭವಾಗುವ ಈ ಕೇಂದ್ರದಲ್ಲಿ ಸೈಬರ್ ಫಾರ್ ಎಕ್ಸಲೆನ್ಸ್ ಸೇರಿದಂತೆ ಹಲವು ರೀತಿಯ ತರಬೇತಿಗಳು ನಡೆಯಬೇಕು. ಸೈಬರ್ ಭದ್ರತಾ ತಜ್ಞರಿಗೆ ಒಳ್ಳೆಯ ತರಬೇತಿ ದೊರೆಯಬೇಕು ಎಂದು ಯದುವೀರ್ ಆಶಿಸಿದರು.

ಹಳೆಯ ಸುಮಧುರ ಗೀತೆ ಕಾರ್ಯಕ್ರಮ



ಮೈಸೂರು, ಆ.13(ಜಿಎ)– ಸ್ವಾತಂತ್ರ್ಯೋತ್ಸವದ ಅಂಗವಾಗಿ ಮೈಸೂರಿನ ಭೂಮಿಕಾ ಅಸೋಸಿಯೇಟ್ಸ್ ಮತ್ತು ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗದ ವತಿಯಿಂದ ಆ. 15 ರಂದು ಹಳೆಯ ಸುಮಧುರ ಕನ್ನಡ ಮತ್ತು ಹಿಂದಿ ಚಲನ ಚಿತ್ರ ಗೀತೆಗಳ ಸಂಗಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಲಾವಿದ ಮಂಜನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ನಗರದ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಚಲನಚಿತ್ರಗಳಲ್ಲಿನ ದೇಶಭಕ್ತಿ ಗೀತೆ ಹಾಗೂ ಇನ್ನಿತರ ಜನಪ್ರಿಯ ಹಳೆಯ ಸುಮಧುರ ಗೀತೆಗಳನ್ನು ಗಾಯಕರು ಪ್ರಸ್ತುತಪಡಿಸಲಿದ್ದಾರೆ. ಖ್ಯಾತ ರಿದಮ್ ಪ್ಯಾಡ್ ಕಲಾವಿದ ವಿನಯ್ ರಂಗಧೋಳ್ ಸಾರಥ್ಯದಲ್ಲಿ ಟಿವಿ ವಾಹಿನಿ ಕಲಾವಿದರು, ಹಾಸ್ಯ ಕಲಾವಿದ ಮೈಸೂರು ಆನಂದ್ ಮೊದಲಾದವರಿಂದ ಹಾಸ್ಯ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಅಶ್ವತ್ಥ್ ನಾರಾಯಣ್, ಆನಂದ್, ಸುರೇಶ್, ವಾಸು ಉಪಸ್ಥಿತರಿದ್ದರು.

ಮೈಸೂರು ವಿವಿ ಹಂಗಾಮಿ ಕುಲಪತಿ ನೇಮಕ ಮಾಡಲು ಆಗ್ರಹ




ಮೈಸೂರು, ಆ.13(ಜಿಎ)–ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಂಗಾಮಿ ಕುಲಪತಿಯನ್ನು ಒಂದು ವಾರದೊಳಗೆ ನೇಮಕ ಮಾಡದಿದ್ದಲ್ಲಿ ವಿವಿಯ ಕ್ರಾಫರ್ಡ್ ಭವನದ ಎದುರು ಅಹೋರಾತ್ರಿ ಧರಣಿ, ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ವಿವಿಯ ಸಂಶೋಧಕರ ಸಂಘ ಆಗ್ರಹಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯಾಧ್ಯಕ್ಷ ಕುಮಾರ್ ಕಲ್ಲಳ್ಳಿ ಮಾತನಾಡಿ, ಹಾಲಿ ಕುಲಪತಿ ನೇಮಕಾತಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿ 53 ದಿನ ಕಳೆದಿದೆ. ಹೀಗಾಗಿ ಹಂಗಾಮಿ ಕುಲಪತಿ ನೇಮಕಕ್ಕೆ ಯಾವುದೇ ಅಡ್ಡಿಯಿಲ್ಲ. ಆದರೆ ಈ ರೀತಿ ಮಾಡದ ಹಿನ್ನೆಲೆಯಲ್ಲಿ ವಿವಿಯ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಿದೆ ಎಂದರು.

ವಿವಿಯ ಘಟಿಕೋತ್ಸವ ಇನ್ನೂ ನಡೆದಿಲ್ಲ. ವಿವಿಗೆ ಒಳಪಡುವ ಎಲ್ಲ ವಿದ್ಯಾರ್ಥಿಗಳಿಗೆ ಮೂಲಸೌಕರ್ಯ ಕೊರತೆಯುಂಟಾಗಿದ್ದು, 2 ವರ್ಷಗಳಾದರೂ ಪಿಎಚ್.ಡಿ ಪ್ರವೇಶ ಪರೀಕ್ಷೆ, ಕೆ–ಸೆಟ್ ಪ್ರವೇಶ ಪರೀಕ್ಷೆ ನಡೆಯದ ಕಾರಣ ಅವಕಾಶ ವಂಚಿತರಾಗುತ್ತಿದ್ದಾರೆ. ಪಿಎಚ್.ಡಿ ಮಹಾ ಪ್ರಬಂಧಗಳ ಮೌಲ್ಯಮಾಪನ ನಡೆಯದೇ ಸಂಶೋಧನೆ ಮುಗಿಸಿರುವ ಸಂಶೋಧಕರಿಗೆ ಸಮಸ್ಯೆ ಎದುರಾಗಿದೆ. ಹಿರಿಯ ಡೀನ್‌ಗಳಿಗೆ ಇರುವ ಹಂಗಾಮಿ ಕುಲಪತಿಯಾಗುವ ಅವಕಾಶ ತಪ್ಪುತ್ತಿದೆ. ಹೀಗಾಗಿ ಕೂಡಲೇ ಸರ್ಕಾರ ಹಂಗಾಮಿ ಕುಲಪತಿ ನೇಮಕ ಮಾಡ ಬೇಕು. ಇಲ್ಲದಿದ್ದಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಗೋಷ್ಠಿಯಲ್ಲಿ ಅಧ್ಯಕ್ಷ ಮಹೇಶ್, ಆನಂದ್, ಲಿಂಗರಾಜು ಉಪಸ್ಥಿತರಿದ್ದರು.

ಶ್ರೀರಾಮನ ಗುಣಗಳನ್ನು ಅಳವಡಿಸಿಕೊಂಡು ಸದ್ಗುಣರಾಗಬೇಕು

ಚಾತುರ್ಮಾಸ್ಯ ಪ್ರವಚನದಲ್ಲಿ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ



ಮೈಸೂರು,ಆ.13(ಸಿಎನ್)–ಭಗವಂತ ಶ್ರೀರಾಮನ ಗುಣಗಳನ್ನು ಅರಿತು, ಅಳವಡಿಸಿಕೊಳ್ಳಬೇಕು. ಅವರ ತಾಳ್ಮೆ, ಅಪಾರ ಜ್ಞಾನ, ನಿಗರ್ವಿತನ, ಧರ್ಮಜ್ಞಾನ, ಕರ್ತವ್ಯ ಬದ್ಧತೆಯಂತಹ ರಜೋಗುಣಗಳ ಬಗ್ಗೆ ಮನನ ಮಾಡುವ ಮೂಲಕ ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಸದ್ಗುಣದಿಂದ ದೇವರಿಗೆ ಹತ್ತಿರವಾದರೆ, ದುರ್ಗುಣಗಳಿಂದ ಭಗವಂತನಿಂದ ದೂರಾಗುತ್ತೇವೆ ಎಂದು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ಸಂಕಲ್ಪವಾಗಿ ಆಯೋಜಿಸಲಾಗಿದ್ದ 'ಶ್ರೀಮದ್ರಾಮಾಯಣ'ಯ ಅಯೋಧ್ಯಾಕಾಂಡ ಪ್ರವಚನ ವೇಳೆ ಮಾತನಾಡಿದರು.

ಶ್ರೀರಾಮನ ಗುಣಗಳ ಬಗ್ಗೆ ಪ್ರವಚನ ನೀಡಿದ ಅವರು, ದಶರಥ ಮಹಾರಾಜರಿಗೆ ನಾಲ್ವರು ಪುತ್ರರಿದ್ದರು. ಅವರೆಲ್ಲರ ಮೇಲೂ ದಶರಥರು ಬಹಳ ಪ್ರೀತಿ ಹೊಂದಿದ್ದರು. ಆದರೆ ಸಾಕ್ಷಾತ್ ಮಹಾ ವಿಷ್ಣುವಿನ ಅವತಾರವಾದ ಶ್ರೀರಾಮನನ್ನು ಕಂಡರೆ ಮಾತ್ರ ಅವರಿಗೆ ವಿಶೇಷ ಪ್ರೀತಿ, ಕಾಳಜಿ ಇತ್ತು. ರಾಮನ ಗುಣಗಳನ್ನು ಎಷ್ಟು ಹೊಗಳಿದರು ಸಾಲದು. ಸ್ಪುರದ್ರೂಪಿ, ಸಹನಾಶೀಲ ಮೂರ್ತಿ, ಸದಾ ಮಂದಹಾಸ ಇದರಿಂದಲೇ ಪ್ರಜೆಗಳಿಗೆ ಅತ್ಯಂತ ಪ್ರಿಯವಾಗಿದ್ದರು. ಅತಿ ಹೆಚ್ಚು ತಾಳ್ಮೆ ಇತ್ತು. ಶ್ರೀರಾಮನಿಗೆ ಅಪಾರ ಪಾಂಡಿತ್ಯ, ಧನ ಸಂಪತ್ತು, ವಿವೇಕ ಎಲ್ಲವೂ ಇತ್ತು. ಆದರೆ ಅವರು ಎಂದಿಗೂ ಅಹಂಕಾರಕ್ಕೆ ಪಟ್ಟವರಲ್ಲ ಎಂದರು. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬಂತೆ ಉತ್ತಮರ ಸಹವಾಸ ಮಾಡಬೇಕು. ಭಗವಂತ ಸ್ವತಂತ್ರರಾದರೆ ನಾವು ಪರತಂತ್ರರಾಗಿದ್ದೇವೆ. ನಮ್ಮ ಬಗ್ಗೆ ಯಾರು ಮಾತನಾಡಬಾರದು ಎಂದು ಬಯಸುವ ನಾವು, ಎಲ್ಲರ ಬಗ್ಗೆಯೂ ಮಾತನಾಡುತ್ತೇವೆ. ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯನ್ನು ಬಿಡು ನಾಲಿಗೆ' ಎಂಬಂತೆ ನಮ್ಮ ವರ್ತನೆ ಬದಲಾಗಬೇಕಿದೆ ಎಂದರು. ಶ್ರೀರಾಮ ಇಂತಹ ಗುಣಗಳಿಂದಲೇ ಯಾರು ಎಷ್ಟೇ ಹೇಳಿದರು ದಶರಥ ಮಹಾರಾಜರಿಗೆ ಅವರ ನಂತರದ ಸ್ಥಾನದಲ್ಲಿ ಶ್ರೀರಾಮನ ಚಿತ್ರಣ ಬಿಟ್ಟರೆ ಬೇರೆ ಯಾರನ್ನು ಕಲ್ಪಿಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕು ಎಂದುಕೊಂಡರು ಎಂದು ಸಂಕ್ಷಿಪ್ತವಾಗಿ ವಿವರಿಸಿದರು.

ಖ್ಯಾತ ಗಾಯಕಿಯರಿಂದ ಶಾಸ್ತ್ರೀಯ ಸಂಗೀತ



ಪ್ರವಚನ ಬಳಿಕ ಖ್ಯಾತ ಗಾಯಕಿಯರಾದ ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್ ಸಹೋದರಿಯರು ಪುರಂದರ ದಾಸರು ಸೇರಿದಂತೆ ಇನ್ನಿತರ ಹಾಡುಗಳನ್ನು ಭಾವಪೂರ್ಣವಾಗಿ ಹಾಡಿ ರಂಜಿಸಿದರು. 'ಗಜವದನ ಬೇಡುವೆ ಗೌರಿ ತನಯ' ಹಾಗೂ ಪುರಂದರದಾಸರ 'ಏನು ಆನಂದವಾಗಿದೆ ಶ್ರೀ ಹರಿಯ ನಾಮ' ಎಂಬ ಗೀತೆಗಳು ಪ್ರೇಕ್ಷಕರ ತಲೆದೂಗಿಸಿದವು. ಇನ್ನು ತಬಲಾ ವಾದಕರಾಗಿ ಕೇಶವ ದತ್, ಪಿಟೀಲು ವಾದನ ವೀಣಾ ಸುರೇಶ್, ಘಟ ವಾದನ ಶರತ್ ಕೌಶಿಕ್ ಉತ್ತಮ ಸಾಥ್ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.8.2023 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 7.30ರಿಂದ 9ರವರೆಗೆ

■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ :** ತಿಲಕ್‌ನಗರ ವಲಯದ ಒಂಬತ್ತು ಒಕ್ಕೂಟಗಳ ಪದಾಧಿಕಾರಿಗಳ ಮತ್ತು ಸರ್ವ ಸದಸ್ಯರ ಸಹಯೋಗ, ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಆಶೀರ್ವಾದದೊಂದಿಗೆ ಒಕ್ಕೂಟದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಮತ್ತು ಬೀದಿ ಬದಿ ವ್ಯಾಪಾರಿಗಳ ಸಂಘ ಉದ್ಘಾಟನಾ ಕಾರ್ಯಕ್ರಮ, ದಿವ್ಯ ಸಾನಿಧ್ಯ: ಬೇಬಿ ಮಠ ಮತ್ತು ಚಂದ್ರವನ ಆಶ್ರಯದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ: ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಜೆ.ಕೆ. ಗ್ರೌಂಡ್‌ನ ಸಭಾ ಭವನ, ರೇಲ್ವೆ ನಿಲ್ದಾಣದ ಎದುರು, ಬೆಳಗ್ಗೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು :** 76ನೇ ಸ್ವಾತಂತ್ರ್ಯೋತ್ಸವದ ಅರಿವು ಜಾಗೃತಿ ಜಾಥಾ, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು, ಜಾಥಾ ಉದ್ಘಾಟನೆ: ಕೆ.ಆರ್. ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಎಸ್.ಇ. ಗಂಗಾಧರಸ್ವಾಮಿ, ಉಪಸ್ಥಿತಿ: ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ಆವರಣ, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್‌ಹಾತ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ :** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಅಖಿಲ ಭಾರತ ದಲಿತರ ಹಕ್ಕುಗಳ ಆಂದೋಲನ :** ಎಸ್‌ಸಿಎಸ್‌ಪಿಟಿಎಸ್‌ಪಿಗಾಗಿ ಮೀಸಲಿಟ್ಟಿರುವ ಹಣವನ್ನು ರಾಜ್ಯ ಸರ್ಕಾರದ ಗ್ಯಾರಂಟಿಗಳಿಗೆ ಬಳಸುವುದನ್ನು ವಿರೋಧಿಸಿ ಪ್ರತಿಭಟನೆ, ಸ್ಥಳ: ಜಿಲ್ಲಾಧಿಕಾರಿಗಳ ನೂತನ ಕಚೇರಿ ಮುಂಭಾಗ, ಬೆಳಗ್ಗೆ 11.30ಕ್ಕೆ.

■ **ಒಡವರ ಬಂಧು ಕನ್ನಡ ಗೆಳೆಯರ ಬಳಗ :** ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ ಬಡ ವಿದ್ಯಾರ್ಥಿಗಳಿಗೆ ನೋಟ್‌ಬುಕ್, ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನ ಆದೇಶ ಪ್ರತಿ ವಿತರಣಾ ಸಮಾರಂಭ, ಅಧ್ಯಕ್ಷತೆ: ಕೆಪಿಸಿಸಿ ಅಸಂಘಟಿತ, ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಪಾಲ್, ಕ್ಷೇತ್ರ ಶಿಕ್ಷಣಾಧಿಕಾರಿ (ಉತ್ತರ ವಲಯ) ಕೃಷ್ಣ, ಮುಖ್ಯ ಅತಿಥಿಗಳು: ಕಾರ್ಪೊರೇಟರ್ ಭಾಗ್ಯ ಮಾದೇಶ್, ಗಿರೀಶ್‌ಗೌಡ, ದಿನೇಶ್, ಕೃಷ್ಣಮೂರ್ತಿ, ಮಹೇಶ್, ಸ್ಥಳ: ಸುಬ್ಬುಲಕ್ಷ್ಮಿ ಸಭಾಂಗಣ, ಮಹಾಜನ ಪ್ರೌಢಶಾಲೆ, ಮಧ್ಯಾಹ್ನ 3 ಗಂಟೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪಂಡಿತ್ ಶ್ರೀ ಆದ್ಯ ಗೋವಿಂದಾಚಾರ್ಯ ಅವರಿಂದ 'ಭಾಗವತ ಸಪ್ತಾಹ' ಕಾರ್ಯಕ್ರಮ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 4.45ರಿಂದ 5.45ರವರೆಗೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಶ್ರೀನಿವಾಸಾಚಾರ್ಯ ಕೊರ್ಲಹಳ್ಳಿ ಅವರಿಂದ ಯುದ್ಧಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **36ನೇ ಚಾತುರ್ಮಾಸ್ಯ ಸಮಿತಿ :** ಪರಮ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಕಲಾವಿದರಿಂದ ಸಾಂಸ್ಕೃತಿಕ ಹಬ್ಬ, ಸುಗಮ ಸಂಗೀತ ಹಾಗೂ ಚಲನಚಿತ್ರ ಹಿನ್ನೆಲೆ ಗಾಯಕರಾದ ರವಿ ಮತ್ತು ಮಂಗಳಾ ರವಿ ಅವರಿಂದ ಭಕ್ತಿಗೀತೆಗಳು, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ಗಂಟೆಗೆ.

■ **ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಟೋ ಚಾಲಕರ, ಮಾಲೀಕರ ಸಂಘ :** 76ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ನಿವೃತ್ತ ಯೋಧ ಶ್ರೀನಿವಾಸ್ ಅವರಿಂದ, ಸ್ಥಳ: ಹಳೇ ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ, ರಾಮಾನುಜ ರಸ್ತೆ, ಮಧ್ಯರಾತ್ರಿ 12ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಸಿ.ಪಿ.ರವಿಕುಮಾರ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 9.05 ವಸುಧೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: 1. ಸ್ವಾತಂತ್ರ್ಯದ ಚೇತನ ಗಾಂಧೀಜಿ ಕುರಿತು ಮಾತಾಡಿರುವವರು ಅಗರಂ ರಂಗಯ್ಯ, 2. ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದವರಾದ ನಿವೃತ್ತ ಶಿಕ್ಷಕಿ, ಆಕಾಶವಾಣಿಯ ಹಿರಿಯ ಕಲಾವಿದೆ ಎಂ.ಎನ್. ಪಾರ್ವತಮ್ಮ ಅವರ ಬಾನುಲಿ ಒಡನಾಟ ಕುರಿತು ಮಂಜುಳಾ ಪುರಾಣಿಕ್ ಅವರು ನಡೆಸಿರುವ ಸಂವಾದ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ–ಸಿ.ಎಸ್.ಲಕ್ಷ್ಮಿ, 12.45 ನಮ್ಮ ಆರೋಗ್ಯ: ಆಹಾರ ಸುರಕ್ಷಾ ಗುಣಮಟ್ಟ ಕಾಯ್ದೆ ಕುರಿತು ಡಾ.ಪ್ರಸಾದ್ ಪಿ.ಎಂ. ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಎನ್.ಇಂದಿರಾ ಜಗದೀಶ್, 3.00 ಆರ್.ಸಿ.ವಿಜೇಶ್–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ– ಕೀಲು ನೋವಿಗೆ ಕಾರಣ ಹಾಗೂ ಪರಿಹಾರ, ಭಾಗವಹಿಸುವವರು ಡಾ.ಚೈತ್ರಾ, 4.45 ಹಿಂದಿ ಪಾಠ: ಡಾ. ಜಯಂತ್ರಿ ಪ್ರಸಾದ್ ನೌಟಿಯಾಲ್, 6.50 ದೇಶಭಕ್ತಿಗೀತೆಗಳು. **ರಾತ್ರಿ:** 7.00 ಸ್ವಾತಂತ್ರ್ಯೋತ್ಸವದ ಮುನ್ನಾ ದಿನದಂದು ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರವನ್ನುದ್ದೇಶಿ ಮಾಡುವ ಪ್ರಸಾರ ಭಾಷಣದ ನೇರ ಪ್ರಸಾರ, 9.30 ಸ್ವಾತಂತ್ರ್ಯೋತ್ಸವದ ಮುನ್ನಾ ದಿನದಂದು ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರವನ್ನುದ್ದೇಶಿ ಮಾಡುವ ಪ್ರಸಾರ ಭಾಷಣದ ಕನ್ನಡ ಅನುವಾದ.

ಮೈಸೂರು ಮಿತ್ರ

ನಯಾ ಪೈಸೆ ಖರ್ಚಿಲ್ಲದೆ ವಿಶ್ವ ಪರ್ಯಟನೆ ಮಾಡುತ್ತಿರುವ ವಿದೇಶಿ ಪ್ರಜೆ!

ಮೈಸೂರು,ಆ.13(ಬಿಎಲ್‌ಯು)– ವಿದೇಶ ಪ್ರವಾಸ ಮಾಡಲು ಲಕ್ಷಾಂತರ ರೂಪಾಯಿ ಹಣ ಬೇಕು. ಆದರೆ ಇಲ್ಲೊಬ್ಬ ವಿದೇಶಿ ಪ್ರಜೆ ಪ್ರಯಾಣಕ್ಕೆ ನಯಾ ಪೈಸೆ ಹಣ ಖರ್ಚು ಮಾಡದೆ ವಿಶ್ವ ಪರ್ಯಟನೆ ಮಾಡುತ್ತಿದ್ದಾನೆ. ಹಲವು ದೇಶ ಸುತ್ತಿ ಭಾರತಕ್ಕೆ ಬಂದಿರುವ ಈತ ಸಾಂಸ್ಕೃತಿಕ ನಗರಿ ಮೈಸೂರಿಗೂ ಭೇಟಿ ನೀಡಿದ್ದನು.

ಇವನ ಹೆಸರು ಲುಕಾಸ್ ವೆನ್ನಾರ್. ಈತ ಫ್ರಾನ್ಸ್ ದೇಶದ ಪ್ರಜೆ. ಇವನಿಗೆ 23 ವರ್ಷ ವಯಸ್ಸು ಅಷ್ಟೆ. 'ಜ್ಞಾನಾರ್ಜನೆಗೆ ದೇಶ ಸುತ್ತು, ಇಲ್ಲವೆ ಕೋಶ ಓದು' ಎಂಬ ಮಾತಿನಂತೆ ಈತ ವಿಶ್ವ ಪರ್ಯಟನೆ ಮಾಡಲು ಆರಂಭಿಸಿದ್ದಾನೆ. ದೇಶ ಸುತ್ತುವುದನ್ನು ಲುಕಾಸ್ ವೆನ್ನಾರ್ ಹವ್ಯಾಸ ಮಾಡಿಕೊಂಡಿದ್ದಾನೆ. ಈಗಾಗಲೇ ಹಲವು ದೇಶ ಸುತ್ತಿರುವ ಲುಕಾಸ್ ವೆನ್ನಾರ್ ಲಿಫ್ಟ್ ಮೂಲಕ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ್ತಾನೆ. ಈ ಮೂಲಕ ಒಂದು ರೂಪಾಯಿ ಖರ್ಚು ಮಾಡದೆ ಪ್ರವಾಸಿ ತಾಣಗಳ ವೀಕ್ಷಣೆ ಮಾಡುತ್ತಿದ್ದಾನೆ.

ಪಾಸ್ ಪೋರ್ಟ್ ಹೊಂದಿರುವ ಈತ ಯಾವುದಾದರೂ ದೇಶಕ್ಕೆ ಹೋಗಬೇಕಾದಾಗ ವೀಸಾ ಪಡೆಯುತ್ತಾನೆ. ವಿಮಾನ ಬದಲು ಹಡಗಿನಲ್ಲಿ



ಲಿಫ್ಟ್ ಪಡೆದು ಮೈಸೂರಿಗೆ ಬಂದಿದ್ದ ಯುವಕ

ಪ್ರಯಾಣ ಮಾಡುತ್ತಾನೆ. ಹಡಗಿನ ಕ್ಯಾಪ್ಟನ್ ಬಳಿ ತನ್ನ ಮನದಾಸೆ ಹೇಳಿಕೊಂಡು ಉಚಿತ ಪ್ರಯಾಣ ಮಾಡಿದ್ದಾನೆ. ಫೆಬ್ರವರಿ 4ರಂದು ಫ್ರಾನ್ಸ್ ನಿಂದ ಹೊರಟಿರುವ ಈತ ಪ್ರಯಾಣ ಮಾಡಲು ಇಲ್ಲಿವರೆಗೆ ಟಿಕೆಟ್ ಖರೀದಿ ಮಾಡಿಲ್ಲ. ಹಡಗು, ಕಾರು, ಬೈಕ್, ಟ್ರಕ್‌ಗಳ ಮೂಲಕ ಲಿಫ್ಟ್ ತೆಗೆದುಕೊಂಡು ಒಂದು ದೇಶದಿಂದ ಮತ್ತೊಂದು ದೇಶಕ್ಕೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರವಾಸ ಮಾಡಿದ್ದಾನೆ. ಈಗಾಗಲೇ ಟಿಬೆಟ್, ಅಫ್ಘಾನಿಸ್ತಾನ, ಬಾಂಗ್ಲಾದೇಶ, ಆಫ್ರಿಕಾ ಸೇರಿದಂತೆ 14 ದೇಶ ಸುತ್ತಿರುವ ಲುಕಾಸ್ ವೆನ್ನಾರ್ ಈಗ ಮೈಸೂರಿಗೆ ಬಂದಿದ್ದಾನೆ. ಬೆಂಗಳೂರು ನಂತರ ಕೆಆರ್‌ಎಸ್‌ಗೆ ಬಂದಿದ್ದ ಲುಕಾಸ್ ವೆನ್ನಾರ್‌ಗೆ ಅಪರಿಚಿತ ವ್ಯಕ್ತಿಯೊಬ್ಬ ಮೈಸೂರಿಗೆ ಡ್ರಾಪ್ ಕೊಟ್ಟಿದ್ದಾನೆ. ಮೈಸೂರು ಅರಮನೆ ನೋಡಿ ಸಂತಸ ವ್ಯಕ್ತಪಡಿಸಿರುವ ಲುಕಾಸ್ ವೆನ್ನಾರ್, ಭಾರತದ ಪ್ರವಾಸಿ ತಾಣಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ. ಅನಿವಾರ್ಯ ಪರಿಸ್ಥಿತಿ ಬಂದಾಗ ಮಾತ್ರ ಕಡಿಮೆ ಖರ್ಚಿನಲ್ಲಿ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡುತ್ತಾನೆ. ಇಲ್ಲದಿದ್ದರೆ ಕೆಲವು ಸ್ಥಳಗಳಲ್ಲಿ ಮಲಗಿ ಸಾರ್ವಜನಿಕ ಶೌಚಾಲಯದಲ್ಲಿ ನಿತ್ಯ ವಿಧಿ, ಸ್ನಾನ ಮುಗಿಸಿ ಬೇರೊಂದು ಸ್ಥಳಕ್ಕೆ ಹೋಗುತ್ತಿದ್ದಾನೆ. ಊಟ, ತಿಂಡಿಗೆ ಮಾತ್ರ ತನ್ನ ಜೇಬಿನಿಂದ ಖರ್ಚು ಮಾಡಿರುವ ಲುಕಾಸ್ ವೆನ್ನಾರ್‌ಗೆ ಕೆಲವು ಕಡೆ ಆತಿಥ್ಯ ಕೂಡ ದೊರೆತಿದೆ. ಮೈಸೂರಿನಿಂದ ತಮಿಳುನಾಡಿನತ್ತ ಹೊರಟಿರುವ ಲುಕಾಸ್ ವೆನ್ನಾರ್ ಈಗ ಶ್ರೀಲಂಕಾಗೆ ಹೋಗಲು ಯೋಜನೆ ರೂಪಿಸಿಕೊಂಡಿದ್ದಾನೆ.

ಗುತ್ತಿಗೆದಾರರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಚುನಾವಣೆ

ಮಹಾಲಿಂಗಂ ನೇತೃತ್ವದ ತಂಡ ಜಯಭೇರಿ



ಮೈಸೂರು,ಆ.13(ಎಸ್‌ಬಿಡಿ)– ಮೈಸೂರಿನ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷರಾಗಿದ್ದ ಮಹಾಲಿಂಗಂ ನೇತೃತ್ವದ ತಂಡ ಜಯಭೇರಿ ಭಾರಿಸಿದೆ. 2023–28ನೇ ಸಾಲಿನ ಆಡಳಿತ ಮಂಡಳಿಗೆ ಅವಿರೋಧ ಆಯ್ಕೆಯಾಗಿರುವ ಮೂರು ಸ್ಥಾನಗಳ ಹೊರತಾಗಿ ಇನ್ನುಳಿದ 14 ನಿರ್ದೇಶಕರ ಆಯ್ಕೆಗೆ ಸಿದ್ಧಾರ್ಥನಗರದ ಸಿಐಟಿಬಿ ಛತ್ರದಲ್ಲಿ ಭಾನುವಾರ ಚುನಾವಣೆ ನಡೆಯಿತು. ಮಹಾಲಿಂಗಂ ತಂಡದ ಒಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲರೂ ಅತ್ಯಧಿಕ ಮತಗಳೊಂದಿಗೆ ಚುನಾಯಿತರಾದರು.

ಆಯ್ಕೆಯಾದವರು: ಕೇಂದ್ರ ಕಚೇರಿ ಕ್ಷೇತ್ರ, ಸಾಮಾನ್ಯ ವರ್ಗದಿಂದ ಶ್ರೀರಾಂಪುರ 2ನೇ ಹಂತದ ಮಹಾಲಿಂಗಂ (599 ಮತ), ಜಯಲಕ್ಷ್ಮಿಪುರಂ 3ನೇ ಬ್ಲಾಕ್‌ನ ಜಿ.ಅಶೋಕ್(560), ಸಿದ್ಧಾರ್ಥನಗರದ ಸಿ.ಡಿ.ಕೃಷ್ಣ(466), ರಾಮಕೃಷ್ಣನಗರದ ವಿ.ಕುಮಾರ(458), ಚಿಕ್ಕನಹಳ್ಳಿಯ ದೇವೇಂದ್ರ(444), ವಿಜಯನಗರ 3ನೇ ಹಂತದ ಎಂ.ಎಸ್.ರೇವಣ್ಣ(442), ನಿವೇದಿತನಗರದ ಕೆ.ರವಿ (438), ಆಲನಹಳ್ಳಿಯ ಸಿ.ವೆಂಕಟಪ್ಪ (433), ಹೊಸಹುಂಡಿಯ ಕೆ.ನಾಗರಾಜು (415) ಹಾಗೂ ಚಾಮರಾಜ ಮೊಹಲ್ಲಾದ ಕೆ.ದಶರಥ್ (347), ಮಹಿಳಾ ಸದಸ್ಯ ಸ್ಥಾನಕ್ಕೆ ವಿಜಯನಗರ 3ನೇ ಹಂತದ ಟಿ.ಅನಸೂಯ (427) ಹಾಗೂ ಗುರುಕಾರಪುರದ ಜಯಲಕ್ಷ್ಮಿ(387), ಪರಿಶಿಷ್ಟ ಜಾತಿ ಸ್ಥಾನಕ್ಕೆ ವಿಜಯನಗರ 3ನೇ ಹಂತದ ಕೆ.ವಿ.ಚಿನ್ನಯ್ಯ(408), ಪರಿಶಿಷ್ಟ ಪಂಗಡ ಸ್ಥಾನಕ್ಕೆ ಯಾಚೇ ಗೌಡನಹಳ್ಳಿಯ ರೇವನಾಯಕ(307) ಆಯ್ಕೆಯಾದರು.

ಅವಿರೋಧ ಆಯ್ಕೆ: ಹಿಂದುಳಿದ ವರ್ಗ–ಬಿ ಸ್ಥಾನಕ್ಕೆ ಗೋಕುಲಂ ಮೂರನೇ ಹಂತದ ಎ.ಕುಮಾರ, ತಿ.ನರಸೀಪುರ ಶಾಖೆ ಕ್ಷೇತ್ರ ಸಾಮಾನ್ಯ ವರ್ಗದಡಿ ಹಿರಿಯೂರಿನ ಪರಶಿವಮೂರ್ತಿ, ಹಿಂದುಳಿದ ವರ್ಗ–ಎ ಅಡಿಯಲ್ಲಿ ತಿ.ನರಸೀಪುರ ವಿವೇಕಾನಂದನಗರದ ರಾಚೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ದಿನೇಶ್ ಕೋಚಿಂಗ್ ಸೆಂಟರ್‌ನಿಂದ ಕನ್ನಡ ಚರ್ಚಾ ಸ್ಪರ್ಧೆ





ಮೈಸೂರು, ಆ.13(ಎಸ್‌ಬಿಡಿ)– ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್‌ನ ವತಿಯಿಂದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಕನ್ನಡ ಚರ್ಚಾಸ್ಪರ್ಧೆ ಏರ್ಪಡಿಸಲಾಗಿತ್ತು.

ನಗರದ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಭಾನುವಾರ ನಡೆದ ಸ್ಪರ್ಧೆಯಲ್ಲಿ 'ರಾಷ್ಟ್ರ ಪ್ರಗತಿ ಹೊಂದಲು ರಾಜಕಾರಣಿಗಳಿಗೆ ಕನಿಷ್ಟ ವಿದ್ಯಾರ್ಹತೆ ನಿಗದಿಪಡಿಸುವುದು ಅನಿವಾರ್ಯ' ವಿಷಯ ಕುರಿತು 25ಕ್ಕೂ ಹೆಚ್ಚು ಶಾಲೆಯ ಸುಮಾರು 50 ವಿದ್ಯಾರ್ಥಿಗಳು ಪರ–ವಿರೋಧ ವಾದ ಮಂಡಿಸಿದರು. ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ(5 ಸಾವಿರ ನಗದು)ವನ್ನು ವಿಜಯ ವಿಠಲ ವಿದ್ಯಾಶಾಲೆಯ ಪಿ.ಎಸ್.ಸ್ಮೃತಿ, ದ್ವಿತೀಯ ಬಹುಮಾನ (4 ಸಾವಿರ)ವನ್ನು ಶಾರದಾ ಪಬ್ಲಿಕ್ ಶಾಲೆಯ ಜಿ.ಅನುಷಾ, ತೃತೀಯ ಬಹುಮಾನ(3 ಸಾವಿರ)ವನ್ನು ವಿಜಯ ವಿಠಲ ವಿದ್ಯಾಶಾಲೆಯ ಕೆ.ವಿ.ಅದ್ವೈತ್ ಪಡೆದುಕೊಂಡರು. ನವ್ಕಿಸ್ ಶಾಲೆಯ ನಿಧಿ ಕುಸುಮ ಹಾಗೂ ಸುತ್ತೂರು ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯ ಚಕ್ರವರ್ತಿ ಕೆ.ಗೌಡ ಸಮಾಧಾನಕರ ಬಹುಮಾನ ಪಡೆದುಕೊಂಡರು. ಹೆಚ್ಚು ಬಹುಮಾನ ಪಡೆದ ವಿಜಯ ವಿಠಲ ವಿದ್ಯಾಶಾಲೆ ಸಮಗ್ರ ಪಾರಿತೋಷಕವನ್ನು ತನ್ನದಾಗಿಸಿಕೊಂಡಿತು. ಚರ್ಚಾ ಸ್ಪರ್ಧೆಯನ್ನು ಉದ್ಘಾಟಿಸಿದ ಕಾಮಾಕ್ಷಿ ಆಸ್ಪತ್ರೆಯ ಪ್ರಧಾನ ವ್ಯವಸ್ಥಾಪಕ ಎಸ್.ವಿ.ಪ್ರಸನ್ನಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯ ಅವಕಾಶಗಳನ್ನು ಕೈಚೆಲ್ಲಬಾರದು. ಎಲ್ಲಾ ಅವಕಾಶಗಳನ್ನೂ ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಮುನ್ನುಗ್ಗುವ ಮೂಲಕ ಸಾಧನೆ ಮಾಡಬೇಕು. ಪ್ರೋತ್ಸಾಹಿಸುವ ಉದ್ದೇಶದಿಂದ ಬಹುಮಾನ ನೀಡಲಾಗುತ್ತದೆ. ಆದರೆ ಸ್ಪರ್ಧೆಯಲ್ಲಿ ಭಾಗವಹಿಸುವುದು ಬಹಳ ಮುಖ್ಯ. ಸ್ಪರ್ಧೆ ಮನೋವಿಕಾಸಕ್ಕೆ ಸಹಕಾರಿಯಾಗಿದೆ ಎಂದು ಕಿವಿಮಾತು ಹೇಳಿದರು. ದಿನೇಶ್ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಎನ್.ವಿ.ದಿನೇಶ್, ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಶಾಂತ್ ರಾಜ್ ಕಾರ್ಯಕ್ರಮ ನಿರೂಪಿಸಿದರು.

ಭಾರತದ ನ್ಯಾಯಾಲಯಗಳಲ್ಲಿ 5 ಕೋಟಿ ವ್ಯಾಜ್ಯಗಳು ಬಾಕಿ

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಬೇಸರ

● ಭಾರತದಲ್ಲಿ 25 ಸಾವಿರ ನ್ಯಾಯಾಧೀಶರಿದ್ದಾರೆ ● 10 ಲಕ್ಷ ವಕೀಲರು, 5 ಲಕ್ಷ ನ್ಯಾಯಾಂಗ ಸಿಬ್ಬಂದಿಗಳಿದ್ದಾರೆ ● 10 ಲಕ್ಷ ಜನಸಂಖ್ಯೆಗೆ 21 ನ್ಯಾಯಾಧೀಶರಿದ್ದಾರೆ ● ನ್ಯಾಯಾಂಗ ಮಾತ್ರ ನಂಬಿಕೆ ಉಳಿಸಿಕೊಂಡಿದೆ



ಮೈಸೂರು, ಆ.13(ಬಿಎಲ್‌ಯು)– ನ್ಯಾಯಾಧೀಶರ ಕೊರತೆ ಸೇರಿದಂತೆ ಹಲವು ಕಾರಣಗಳಿಂದ ಭಾರತದ ನ್ಯಾಯಾಲಯಗಳಲ್ಲಿ 5 ಕೋಟಿ ವ್ಯಾಜ್ಯಗಳು ಇತ್ಯರ್ಥವಾಗದೆ ಬಾಕಿ ಉಳಿದಿದೆ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ತಿಳಿಸಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆದ ವಕೀಲರ ರಾಜ್ಯಮಟ್ಟದ 10ನೇ ಸಮ್ಮೇಳನದಲ್ಲಿ 'ಕಿರಿಯ ವಕೀಲರ ಮುಂದಿರುವ ಸವಾಲುಗಳು ಹಾಗೂ ತೊಂದರೆಗಳು' ಕುರಿತಂತೆ ಉಪನ್ಯಾಸ ನೀಡಿ ಮಾತನಾಡಿದ ಅವರು, ಇಷ್ಟೊಂದು ದೊಡ್ಡ ಪ್ರಮಾಣದ ವ್ಯಾಜ್ಯಗಳು ಯಾವಾಗ ಇತ್ಯರ್ಥವಾಗುತ್ತದೆ ಎಂಬ ಪ್ರಶ್ನೆ ಎದುರಾಗಿದೆ ಎಂದರು. ಭಾರತದಲ್ಲಿ 25 ಸಾವಿರ ನ್ಯಾಯಾಧೀಶರಿದ್ದಾರೆ, 10 ಲಕ್ಷ ವಕೀಲರಿದ್ದಾರೆ, 5 ಲಕ್ಷ ನ್ಯಾಯಾಂಗ ಸಿಬ್ಬಂದಿಗಳಿದ್ದಾರೆ. 142 ಕೋಟಿ ಜನಸಂಖ್ಯೆಯ ಭಾರತದಲ್ಲಿ ನ್ಯಾಯಾಧೀಶರ ಸಂಖ್ಯೆ ಬಹಳ ಕಡಿಮೆ ಇದೆ. ಆದರೂ ಒಂದು ವರ್ಷದ ಅವಧಿಯಲ್ಲಿ ಸುಪ್ರೀಂಕೋರ್ಟ್‌ನಲ್ಲಿ 60 ರಿಂದ 70 ಸಾವಿರ ವ್ಯಾಜ್ಯಗಳು, ಹೈಕೋರ್ಟ್‌ನಲ್ಲಿ 25 ಲಕ್ಷ ವ್ಯಾಜ್ಯಗಳು, ಜಿಲ್ಲಾ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿ 1.60 ಕೋಟಿ ವ್ಯಾಜ್ಯಗಳು ಇತ್ಯರ್ಥವಾಗಿವೆ. ಇಷ್ಟೊಂದು ದೊಡ್ಡ ಪ್ರಮಾಣದ ವ್ಯಾಜ್ಯಗಳು ಭಾರತ ಬಿಟ್ಟು ಇಡೀ ವಿಶ್ವದ ಯಾವ ದೇಶದಲ್ಲೂ ಇತ್ಯರ್ಥವಾಗಿಲ್ಲ ಎಂದು ನಾಗಮೋಹನ ದಾಸ್ ಅಂಕಿ–ಅಂಶಗಳ ವಿವರ ನೀಡಿದರು.

ಅಮೇರಿಕಾದಲ್ಲಿ 10 ಲಕ್ಷ ಜನಸಂಖ್ಯೆಗೆ ಸೀಮಿತವಾಗಿ ವ್ಯಾಜ್ಯಗಳ ಇತ್ಯರ್ಥಕ್ಕೆ 122 ನ್ಯಾಯಾಧೀಶರಿದ್ದಾರೆ. ಆದರೆ ಭಾರತದಲ್ಲಿ 10 ಲಕ್ಷ ಜನಸಂಖ್ಯೆಗೆ ಕೇವಲ 21 ನ್ಯಾಯಾಧೀಶರಿದ್ದಾರೆ. ಈ ಹಿನ್ನೆಲೆಯಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳಿಗೆ ಶೀಘ್ರ ನೇಮಕಾತಿ ಮಾಡಿಕೊಳ್ಳಬೇಕು. ಈ ಮೂಲಕ ಶೀಘ್ರ ವ್ಯಾಜ್ಯ ಇತ್ಯರ್ಥ ಮಾಡಬೇಕು. ಆಗ ಜನರಿಗೆ ಹಾಗೂ ನ್ಯಾಯಾಂಗ ವ್ಯವಸ್ಥೆಗೆ ಒತ್ತಡ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ನಂತರ ಪಾಳೆಗಾರಿಕೆಯಿಂದ ಮುಕ್ತ ಮಾಡಿ ಪ್ರಜಾಪ್ರಭುತ್ವ ಸ್ಥಾಪನೆ ಮಾಡಲಾಗಿದೆ. ಜನರ ಸರ್ಕಾರ ರಚನೆಯಾಗಿದೆ. ನ್ಯಾಯಾಂಗ ವ್ಯವಸ್ಥೆ ಕಟ್ಟಲಾಗಿದೆ. ಸಂವಿಧಾನದ ಅಡಿಯಲ್ಲಿ ಬಹಳಷ್ಟು ಸಾಧನಾ ಕಾರ್ಯಗಳಾಗಿವೆ. ಆದರೂ ಈಗಿನ ಪರಿಸ್ಥಿತಿಯಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗ ನಂಬಿಕೆ ಕಳೆದುಕೊಂಡಿದೆ. ಆದರೆ ನ್ಯಾಯಾಂಗ ವ್ಯವಸ್ಥೆ ಮಾತ್ರ ಜನರಲ್ಲಿ ನಂಬಿಕೆ ಉಳಿಸಿಕೊಂಡಿದೆ, ವಿಶ್ವಾಸ ಹೆಚ್ಚು ಮಾಡಿಕೊಂಡಿದೆ ಎಂದು ನಾಗಮೋಹನ ದಾಸ್ ಪ್ರಶಂಸೆ ವ್ಯಕ್ತಪಡಿಸಿದರು.

> ಯಾವುದೇ ವಿಚಾರವಾದರೂ ಸರಿ, ಸರ್ಕಾರದ ಕಾನೂನು ಆದರೂ ಸರಿ, ಸಂವಿಧಾನಕ್ಕೆ ವಿರುದ್ಧವಾಗಿದ್ದರೆ ಅದನ್ನು ರದ್ದು ಮಾಡುವ ಅಧಿಕಾರ ನ್ಯಾಯಾಂಗಕ್ಕೆ ಮಾತ್ರ ಇದೆ. ತಪ್ಪಿತಸ್ಥ ವ್ಯಕ್ತಿಯನ್ನು ಜೈಲಿಗೆ ಕಳುಹಿಸುವ, ದಂಡ ವಿಧಿಸುವ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ನ್ಯಾಯಾಂಗಕ್ಕೆ ಮಾತ್ರ ಇದೆ. ಈ ಮೂಲಕ ಸಂವಿಧಾನದ ಆಶಯಗಳನ್ನು ಸಂರಕ್ಷಣೆ ಮಾಡುವ ಅಧಿಕಾರ ನ್ಯಾಯಂಗ ಪಡೆದುಕೊಂಡಿದೆ. ಈ ಹಿನ್ನೆಲೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೆಲಸ ಮಾಡುವ ನಾವು ಹೆಮ್ಮೆ ಪಡಬೇಕು. ಕಳೆದ 70 ವರ್ಷದ ಹಿಂದೆ ಅಮೇರಿಕಾ ಹಾಗೂ ಬ್ರಿಟನ್ ನ್ಯಾಯಾಂಗ ವ್ಯವಸ್ಥೆಯನ್ನು ಆದರ್ಶವಾಗಿ ಇಟ್ಟುಕೊಂಡು ಕಾನೂನು ರೂಪಿಸಲಾಯಿತು. ಆದರೆ ಈಗ ಅಮೇರಿಕಾ, ಬ್ರಿಟನ್ ಸೇರಿದಂತೆ ವಿಶ್ವದ ಹಲವು ದೇಶಗಳ ನ್ಯಾಯಾಲಯಗಳು ಭಾರತದ ಸುಪ್ರೀಂಕೋರ್ಟ್‌ನ ತೀರ್ಪನ್ನು ಆದರ್ಶವಾಗಿ ಇಟ್ಟುಕೊಂಡಿವೆ. ಜೊತೆಗೆ ತಾವು ಕೊಡುವ ತೀರ್ಪಿನಲ್ಲಿ ಭಾರತದ ಸುಪ್ರೀಂಕೋರ್ಟ್ ತೀರ್ಪನ್ನು ಉಲ್ಲೇಖಿಸುತ್ತಿವೆ. ಇದು ಭಾರತೀಯರು ಹೆಮ್ಮೆಪಡುವ ವಿಚಾರ.
> **–ನಾಗಮೋಹನದಾಸ್, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ**

ಭಾರತದಲ್ಲಿ 1947ರ ವೇಳೆಯಲ್ಲಿ ಶೇಕಡ 16ರಷ್ಟು ಅಕ್ಷರಸ್ಥರು ಇದ್ದರು. ಆದರೆ ಈಗ ಶೇಕಡ 80ರಷ್ಟು ಅಕ್ಷರಸ್ಥರು ಇದ್ದಾರೆ. ಈ ಹಿನ್ನೆಲೆ ನ್ಯಾಯಾಂಗ ವ್ಯವಸ್ಥೆ ಮತ್ತು ಕಾನೂನು ಬಗ್ಗೆ ಜನರಲ್ಲಿ ಪರಿಣಾಮಕಾರಿಯಾಗಿ ಅರಿವು ಮೂಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ದೇಶದಲ್ಲಿ ದೊಡ್ಡ ಮಟ್ಟದ ಜಾಗೃತಿ ಕಾರ್ಯಕ್ರಮಗಳು ನಡೆಯಬೇಕು ಎಂದು ಸಲಹೆ ನೀಡಿದರು.

ಇದರ ಮಧ್ಯೆ ಭಾರತದ ನ್ಯಾಯಾಂಗ ವ್ಯವಸ್ಥೆ ಮೇಲೆ ದೊಡ್ಡ ಗದಾ ಪ್ರಹಾರ ನಡೆಯುತ್ತಿದೆ. ನಿವೃತ್ತಿಯಾದ ಕೆಲವು ನ್ಯಾಯಾಧೀಶರನ್ನು ರಾಜ್ಯಸಭಾ ಸದಸ್ಯರಾಗಿ ಸರ್ಕಾರ ಆಯ್ಕೆ ಮಾಡುತ್ತಿದೆ. ರಾಜ್ಯಪಾಲರಾಗಿ ನೇಮಕ ಮಾಡುತ್ತಿದೆ. ಮಣಿಪುರದಲ್ಲಿ ಕಳೆದ 100 ದಿನದಿಂದ ಇಂಟರ್‌ನೆಟ್ ಸಂಪರ್ಕವಿಲ್ಲ, ನೂರಾರು ಜನರ ಸಾವುಗಳಾಗಿದೆ. ಇಷ್ಟಾದರೂ ಮೌನವಾಗಿದ್ದೇವೆ ಎಂದು ನಾಗಮೋಹನ ದಾಸ್ ಅಸಮಾಧಾನ ವ್ಯಕ್ತಪಡಿಸಿದರು.

ಆಕ್ಷೇಪಾರ್ಹ ಹೇಳಿಕೆ: ನಟ ಉಪೇಂದ್ರ ವಿರುದ್ಧ ಅಟ್ರಾಸಿಟಿ ಕೇಸ್



ಬೆಂಗಳೂರು, ಆ.13– ನಟ, ಉತ್ತಮ ಪ್ರಜಾಕೀಯ ಪಕ್ಷ ಸಂಸ್ಥಾಪಕ ಉಪೇಂದ್ರ ಅವರ ಹೇಳಿಕೆ ಇದೀಗ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದು ಈ ಹೇಳಿಕೆ ಖಂಡಿಸಿ ದಲಿತಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದು ಸಮಾಜ ಕಲ್ಯಾಣ ಇಲಾಖೆ ಉಪೇಂದ್ರ ವಿರುದ್ಧ ಅಟ್ರಾಸಿಟಿ ದೂರು ದಾಖಲಿಸಿದ್ದಾರೆ.

UPP ಸ್ಥಾಪನೆಯಾಗಿ ನಾಲ್ಕು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 'ಪ್ರಜಾಕೀಯ ದಿನ' ಆಚರಣೆ ಪ್ರಯುಕ್ತ ಫೇಸ್‌ಬುಕ್‌ನಲ್ಲಿ ಲೈವ್ ಬಂದಿದ್ದ ಉಪೇಂದ್ರ ಮಾತಿನ ನಡುವೆ ಬಳಸಿದ ಗಾದೆ ಮಾತಿಗೆ ಇದೀಗ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಕಳೆದ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳು ಇತರೆ ಕೆಲವು ರಾಜಕೀಯ ಪಕ್ಷಗಳಿಗಿಂತಲೂ ಹೆಚ್ಚು ಮತಗಳನ್ನು ಯಾವುದೇ ಪ್ರಚಾರವಿಲ್ಲದೆ ಪಡೆದಿದ್ದಾರೆ ಎಂದು ಹೆಮ್ಮೆಯಿಂದ ಹೇಳಲು ಬಯಸುತ್ತೇನೆ ಎಂದ ಅವರು, ನಂತರ ಮಾತು ಮುಂದುವರೆಸಿ ಯಾವುದೋ ಮಾತಿಗೆ ಆಕ್ಷೇಪಾರ್ಹ ಪದ ಬಳಸಿದ್ದು ಇದೀಗ ಆಕ್ರೋಶ ವ್ಯಕ್ತವಾಗುತ್ತಿದೆ.

ಈ ಹೇಳಿಕೆಯನ್ನು ಖಂಡಿಸಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಧುಸೂದನ್ ಅವರು ಸಿಕೆ ಅಚ್ಚುಕಟ್ಟು ಪ್ರದೇಶ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಉಪೇಂದ್ರರ ಈ ಹೇಳಿಕೆಯನ್ನು ವಿರೋಧಿಸಿ ರಾಮನಗರದಲ್ಲಿ ದಲಿತಪರ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಸಮತಾ ಸೈನಿಕ ದಳ ಮತ್ತು ದಲಿತಪರ ಒಕ್ಕೂಟದ ಸದಸ್ಯರು ರಾಮನಗರದ ಹಾರೋಹಳ್ಳಿಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ್ದು ಇದೇ ವೇಳೆ ಉಪೇಂದ್ರ ಅವರ ಪ್ರತಿಕೃತಿ ದಹಿಸಿ ಧಿಕ್ಕಾರ ಕೂಗಿದರು. ಸಾಮಾಜಿಕ ಜಾಲತಾಣದಲ್ಲಿಯೂ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

> ಜಾತಿ ನಿಂದನೆ ಆರೋಪದಡಿ ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಈ ಬಗ್ಗೆ ಟ್ವೀಟ್ ಮಾಡಿ ಕ್ಷಮೆ ಯಾಚಿಸಿರುವ ಉಪೇಂದ್ರ, 50 ವರ್ಷಗಳ ಹಿಂದೆ ನಾನು ಎಂತಹ ಪರಿಸರದಲ್ಲಿ ಬೆಳೆದೆ. ಆ ಬಾಲ್ಯದಲ್ಲಿ ನಾನು ಕಂಡ ಆ ಕ್ರೂರ ಬಡತನ, ನನ್ನ ಕಣ್ಣ ಮುಂದೆಯೇ ಬೆಂಕಿ ಹಚ್ಚಿಕೊಂಡು ಆದ ಆತ್ಮಹತ್ಯೆಗಳು, ಹಸಿವು, ಅಪಮಾನ, ತುಳಿತ ಇದನ್ನು ಅನುಭವಿಸಿ ಬೆಳೆದ ನಾನು ಇಂದು ಒಂದು ವರ್ಗದ ಜನರ ಬಗ್ಗೆ ಅವಮಾನಕಾರಿಯಾಗಿ ಮಾತನಾಡುತ್ತೇನೆಯೇ, ನನಗೆ ಹುಚ್ಚೇ, ಅದಕ್ಕೆ ಕಾರಣವಾದರೂ ಏನು? ಅದರಿಂದ ನನಗೆ ಸಿಗುವ ಲಾಭವಾದರೂ ಏನು, ಇಷ್ಟಕ್ಕೂ ಕ್ಷಮೆಯನ್ನು ಸ್ವೀಕರಿಸುವ ದೊಡ್ಡತನವೂ ಇಲ್ಲವೇ, ಯಾಕೆ ಇಷ್ಟೊಂದು ದ್ವೇಷ ಎಂದು ಪ್ರಶ್ನಿಸಿದ್ದಾರೆ.


ಗೃಹಲಕ್ಷ್ಮಿ ಉದ್ಘಾಟನೆ: ಲಕ್ಷಕ್ಕೂ ಅಧಿಕ ಮಂದಿ ಭಾಗಿ



ಬೆಳಗಾವಿ,ಆ.13–ಗೃಹಲಕ್ಷ್ಮಿ ಯೋಜನೆಗೆ ಬೆಳಗಾವಿಯಲ್ಲಿ ಆ.28 ಅಥವಾ 30 ಚಾಲನೆ ನೀಡಲಾಗುತ್ತಿದೆ. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಹಿಸಿಕೊಂಡಿದ್ದು, ಕಾರ್ಯಕ್ರಮದಲ್ಲಿ ಬೆಳಗಾವಿ ವಿಭಾಗೀಯ ಮಟ್ಟದ 7 ಜಿಲ್ಲೆಗಳಿಂದ 1 ಲಕ್ಷ ಜನರು ಭಾಗವಹಿಸಲಿದ್ದಾರೆಂದು ತಿಳಿದುಬಂದಿದೆ.

ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಭಾಗವಹಿಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಬೆಳಗಾವಿ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಿದ್ಧತೆಗಳನ್ನು ಪರಿಶಿಲೀನೆ ನಡೆಸಿದರು. ಗೃಹಲಕ್ಷ್ಮಿ ಯೋಜನೆಗಾಗಿ, ರಾಜ್ಯದಲ್ಲಿ ಅದರ ಪ್ರಯೋಜನಗಳನ್ನು ಪಡೆಯಲು ಇದುವರೆಗೆ 1.6 ಕೋಟಿಗೂ ಹೆಚ್ಚು ಮಹಿಳೆಯರು ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ ಮತ್ತು ನೋಂದಣಿ ಪ್ರಕ್ರಿಯೆಯನ್ನು ನಿಯಮಿತ ಮಧ್ಯಂತರದಲ್ಲಿ ಉಚಿತವಾಗಿ ಮಾಡಲಾಗುತ್ತಿದೆ. ಈ ಹಿಂದೆ ಸರ್ಕಾರವು ಬೆಳಗಾವಿಯ ಸಿಪಿಇಡ್ ಮೈದಾನದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಲು ಮುಂದಾಗಿತ್ತು. ಆದರೆ, ವಿವಿಧ ಕಾರಣಗಳಿಂದಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಿತು ಎಂದು ಮೂಲಗಳು ತಿಳಿಸಿವೆ. ಕಾರ್ಯಕ್ರಮದ ಕುರಿತು ಮಾತನಾಡಿದ ಲಕ್ಷ್ಮೀ ಹೆಬ್ಬಾಳ್ಕರ್, ಸರ್ಕಾರವು ಆಯೋಜಿಸುವ ಅತಿದೊಡ್ಡ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಗೃಹಲಕ್ಷ್ಮಿ ಯೋಜನೆಗೆ ಮಹಿಳೆಯರಿಂದ ಅಪಾರ ಸ್ಪಂದನೆ ದೊರೆತಿದ್ದು, ಯೋಜನೆಯು ಬಡ ಮಹಿಳೆಯರ ಜೀವನ ಸುಧಾರಿಸಲು ಸಹಾಯ ಮಾಡುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಈ ನಡುವೆ ಯೋಜನೆಗೆ ಇದೂವರೆಗೆ 1.6 ಕೋಟಿಗೂ ಹೆಚ್ಚು ಜನರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹುಟ್ಟುಹಬ್ಬದ ಅಂಗವಾಗಿ ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಹಿಂದುಳಿದ ವರ್ಗದ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ಕಾಂಗ್ರೆಸ್ ಮುಖಂಡ ವರುಣ ಮಹೇಶ್, ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ ಮತ್ತಿತರರಿದ್ದರು.

ಸಿದ್ಧಗಂಗಾ ಮಠದ ನೀರು ತುಂಬಿದ ಗೋಕಟ್ಟೆಗೆ ಬಿದ್ದು ನಾಲ್ವರು ಸಾವು


ತುಮಕೂರು, ಆ.13– ತುಮಕೂರಿನ ಸಿದ್ಧಗಂಗಾ ಮಠದ ಹಿಂಭಾಗದಲ್ಲಿ ಭಾನುವಾರ ಗೋಕಟ್ಟೆಯಲ್ಲಿ (ಕೃಷಿ ಹೊಂಡದ ರೀತಿಯ ಹೊಂಡ) ಬಿದ್ದು ನಾಲ್ವರು ಮೃತಪಟ್ಟಿದ್ದಾರೆ. ಬೆಂಗಳೂರಿನ ಬಾಗಲಗುಂಟೆಯ ಲಕ್ಷ್ಮಿ(33), ಯಾದಗಿರಿ ಜಿಲ್ಲೆಯ ಅಜಲಪುರದ ಮಹದೇವಪ್ಪ (44), ರಾಮನಗರದ ಹರ್ಷಿತ್ (12), ಚಿಕ್ಕಬಳ್ಳಾಪುರದ ಶಂಕರ್ (12) ಮೃತರು.

ರಂಜಿತ್, ಶಂಕರ್, ಹರ್ಷಿತ್ ಮಠದಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದರು. ರಂಜಿತ್ ತಾಯಿ ಲಕ್ಷ್ಮಿ ಮಗನನ್ನು ಭೇಟಿಯಾಗಲು ಮಠಕ್ಕೆ ಬಂದಿದ್ದರು. ರಂಜಿತ್ ಮತ್ತು ಇಬ್ಬರು ಸ್ನೇಹಿತರ ಜತೆ ಊಟ ಮಾಡಲು ಗೋಕಟ್ಟೆಯ ಬಳಿಗೆ ತೆರಳಿದ್ದರು. ಈ ವೇಳೆ ರಂಜಿತ್ ಕೈ ತೊಳೆಯಲು ಹೋಗಿ ಕಾಲು ಜಾರಿ ಬಿದ್ದಿದ್ದು, ಆತನನ್ನು ಕಾಪಾಡಲು ಹೋಗಿ ಶಂಕರ್ ಮತ್ತು ಹರ್ಷಿತ್ ನೀರು ಪಾಲಾಗಿದ್ದಾರೆ.

ರಂಜಿತ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ನೀರಲ್ಲಿ ಮುಳುಗಿದ ಮತ್ತಿಬ್ಬರನ್ನು ರಕ್ಷಿಸಲು ಮುಂದಾದ ಲಕ್ಷ್ಮಿ, ಮಹದೇವಪ್ಪ ಸಾವನ್ನಪ್ಪಿದ್ದಾರೆ. ಲಕ್ಷ್ಮಿ, ಹರ್ಷಿತ್ ಮೃತದೇಹಗಳನ್ನು ಹೊರತೆಗೆದಿದ್ದು, ಇನ್ನಿಬ್ಬರಿಗಾಗಿ ಶೋಧ ನಡೆಯುತ್ತಿದೆ. ಕ್ಯಾತ್ಸಂದ್ರ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಸಿದ್ದರಾಮಯ್ಯರಿಗೆ ದೇಶದ ಪ್ರಧಾನಿ ಆಗುವ ಅರ್ಹತೆ ಇದೆ

ಸಿಎಂ ಹುಟ್ಟುಹಬ್ಬ ಆಚರಣೆಯಲ್ಲಿ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ





ಮೈಸೂರು, ಆ.13– ಮುಖ್ಯಮಂತ್ರಿ ಸಿದ್ದರಾಮಯ್ಯರವರು ಈ ದೇಶ ಕಂಡ ಅಪರೂಪದ ರಾಜಕಾರಣಿಯಾಗಿದ್ದು, ಪ್ರಧಾನಿ ನರೇಂದ್ರ ಮೋದಿಯವರಿಗೆ ಸರಿಸಾಟಿಯಾಗಿ ನಿಲ್ಲಬಹುದಾದಂತಹ ಈ ದೇಶದ ಪ್ರಧಾನಿಯಾಗುವ ಅರ್ಹತೆ ಇರುವ ನಾಯಕರಾಗಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಮೈಸೂರು ತಾಲೂಕು, ಕಡಕೊಳದಲ್ಲಿ ಶ್ರೀ ಕಾಳಿಬೀರೇಶ್ವರ ಟ್ರಸ್ಟ್‌ನ ಅಧ್ಯಕ್ಷ ಬಿ.ನಾಗರಾಜ್ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರ 76ನೇ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ. 76 ಅಡಿ ಸಿದ್ದರಾಮಯ್ಯರವರ ಕಟೌಟ್ ಮುಂದೆ 76 ಕೆ.ಜಿ. ತೂಕದ ಕೇಕ್ ಕತ್ತರಿಸಿ, ಮಾತನಾಡಿದ ಅವರು, ಸಿದ್ದರಾಮಯ್ಯರವರು 40 ವರ್ಷಗಳ ಅಧಿಕಾರದ ಅವಧಿಯಲ್ಲಿ ಸಮಾಜದ ಬಗ್ಗೆ ಅತ್ಯಂತ ಕಾಳಜಿ ಇರುವಂತಹ ಏಕೈಕ ನಾಯಕರಾಗಿದ್ದು, ಸಾಮಾಜಿಕ ನ್ಯಾಯವನ್ನು ಎಲ್ಲಾ ಸಮಾಜದವರಿಗೆ ಒದಗಿಸುವುದರಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದಾರೆ. 2013ರಿಂದ 2018ರ ಅವಧಿಯಲ್ಲಿ ರಾಜ್ಯದ ಜನರಿಗೆ ಕೊಟ್ಟಂತಹ 158 ಭರವಸೆಗಳನ್ನು ಈಡೇರಿಸಿದ್ದಾರೆ. 2023ರ ಚುನಾವಣೆಯಲ್ಲಿ ಸಿದ್ದರಾಮಯ್ಯರ ಮೇಲೆ 6 ಕೋಟಿ ಜನರು ಇಟ್ಟಿರುವ ಅಭಿಮಾನ, ಪ್ರೀತಿಯಿಂದ ವಿಶ್ವಾಸವಿಟ್ಟು, 5 ಗ್ಯಾರಂಟಿ ಭರವಸೆಗಳನ್ನು ನಂಬಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದುದರಿಂದ ಸಿದ್ದರಾಮಯ್ಯ 2ನೇ ಭಾರಿಗೆ ಮುಖ್ಯಮಂತ್ರಿಯಾಗಿ 5 ಗ್ಯಾರಂಟಿಗಳನ್ನು ಈಡೇರಿಸುತ್ತಿದ್ದಾರೆ. ಈ ಗ್ಯಾರಂಟಿ ಯೋಜನೆಗಳ ಮೂಲಕ ಸಿದ್ದರಾಮಯ್ಯ ದೇಶಾದ್ಯಂತ ಮನೆ ಮಾತಾಗಿದ್ದಾರೆ. ಈ ದೇಶದ ಆಡಳಿತ ಚುಕ್ಕಾಣಿಯನ್ನು ಅವರು ಹಿಡಿಯಬೇಕೆಂದು ಜನರು ಬಯಸುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಟಿ.ಜಿ.ಚಿಕ್ಕಣ್ಣ, ಬಿ.ನಾಗರಾಜ್, ತಾಪಂ ಮಾಜಿ ಸದಸ್ಯರಾದ ಶ್ರೀಕಂಠ ತೊಂಡೇಗೌಡ, ಕೆ.ಹಬ್ಬಾಳೇಗೌಡ, ಸಿ.ಎಂ. ಸಿದ್ದರಾಮೇಗೌಡ, ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಜೆ.ರಮೇಶ್, ಮುಖಂಡರಾದ ಶಿವಲಿಂಗೇಗೌಡ, ಕಾಡನಹಳ್ಳಿ ಸ್ವಾಮಿಗೌಡ, ಮಾಕನಹುಂಡಿ ರವಿ, ರಫೀಕ್‌ಪಾಷ, ರವಿಗೌಡ, ಕೆಂಪೇಗೌಡ, ಸೋಮಲಿಂಗ, ಶಿವಲಿಂಗ, ಡಿ.ಪ್ರೇಮ, ಸಿದ್ದರಾಮೇಗೌಡ, ಸ್ವಾಮಿಗೌಡ, ಕೃಷ್ಣಪ್ಪ, ಅಪೋಲೋ ಬಿಜಿಎಸ್ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ನ ಟೆಕ್ನಿಕಲ್ ಸೂಪರ್ ವೈಸರ್ ಫಜಲ್ ಇನ್ನಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಸಾಧುವೊಬ್ಬರು ಕುಡುಕನನ್ನು ಕುರಿತು:
ಕುಡಿದು ಕುಡಿದು ಸತ್ತರೆ ನರಕಕ್ಕೆ ಹೋಗ್ತಿಯಾ.
ಕುಡುಕ : ನಂದು ಬಿಡಿ, ಮದ್ಯ ಮಾರುವವನು ನರಕಕ್ಕೆ ಹೋಗ್ತಾನ?
ಸಾಧು : ಹೋಗ್ತಾನೆ
ಕುಡುಕ : ಚಿಪ್ಸ್, ಚಿಕನ್ ಕಬಾಬ್ ಮಾರುವವನು?
ಸಾಧು : ಅವನೂ ಹೋಗ್ತಾನೆ.
ಕುಡುಕ : ಅಷ್ಟು ಸಾಕು ಸ್ವಾಮಿಗಳೇ ಇವರೆಲ್ಲಾ ಇದ್ದರೆ ಅದೇ ನನಗೆ ಸ್ವರ್ಗ!!

ಮೈಸೂರು ಮಿತ್ರ
ಸೋಮವಾರ, 14 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ದೊಡ್ಡವನಾಗಲು ಪ್ರಯತ್ನ ಪಡಬೇಡ, ಒಳ್ಳೆಯವನಾಗಲು ಪ್ರಯತ್ನ ಪಡು. ಆಗ ನೀನೇ ದೊಡ್ಡವನಾಗುತ್ತೀಯ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಸು ಕೊಟ್ಟಾಯ್ತು, ಭುಗಿ ಸುಟ್ಟಾಯ್ತು

ನಿಮ್ಮ ಪತ್ರಗಳು

ರಾಹುಲ್ ಗಾಂಧಿಯವರ ಫ್ಲೈಯಿಂಗ್ ಕಿಸ್ ಎಷ್ಟು ಸರಿ

ಮಾನ್ಯರೆ,

ಕೇಂದ್ರ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಒಕ್ಕೂಟ I.N.D.I.A, ಸಂಸತ್ತಿನಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಚರ್ಚೆಯ ಕೊನೆಯಲ್ಲಿ ಭಾಷಣ ಮಾಡಿದ ಕಾಂಗ್ರೆಸ್ ಪಕ್ಷದ ನಾಯಕ, ರಾಹುಲ್ ಗಾಂಧಿ ಮಣಿಪುರದಲ್ಲಿ ನಡೆದಿರುವ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತು ಅತ್ಯಾಚಾರ ಪ್ರಕರಣದ ಬಗ್ಗೆ ಗಮನ ಸೆಳೆದಿದ್ದು ಸರಿಯಷ್ಟೆ.

ಆದರೆ ಭಾಷಣ ಮುಗಿಸಿ ಸಂಸತ್ತಿನ ಹೊರ ಬರುವಾಗ, ಮಹಿಳಾ ಸಂಸದರ ಕಡೆಗೆ ಗಮನಹರಿಸಿ ಫ್ಲೈಯಿಂಗ್ ಕಿಸ್ ಕೊಟ್ಟಿದ್ದು ರಾಹುಲ್ ಗಾಂಧಿ ಅವರ ಅನನುಭವಕ್ಕೆ ಸಾಕ್ಷಿ ಎನ್ನುವಂತಾಯಿತು.

ಪ್ರಜಾಪ್ರಭುತ್ವದ ದೇಗುಲವೆಂದೇ ಕರೆಯುವ ಸಂಸತ್ತಿನಲ್ಲಿ ರಾಹುಲ್ ಗಾಂಧಿ ಹೀಗೆ ನಡೆದುಕೊಂಡಿದ್ದು ತೀರ ಅಪಮಾನಕರವಾದದ್ದು. ದೇಶದ ಪ್ರಧಾನಿಯಾಗುವ ಕನಸು ಕಾಣುತ್ತಿರುವ ರಾ.ಗಾ ರವರ ಈ ರೀತಿಯ ನಡುವಳಿಕೆಗಳು ಕಾಂಗ್ರೆಸ್ ನಾಯಕರುಗಳಿಗೇ ಮುಜುಗರ ತರುತ್ತದೆ. ರಾ.ಗಾ ರವರ ಈ ರೀತಿಯ ನಡುವಳಿಕೆಗಳು ಹೊಸದೇನಲ್ಲ. ಸುಪ್ರೀಂಕೋರ್ಟ್ ತೀರ್ಪುನಿಂದ ಸಂಸತ್‌ಗೆ ಮರಳಿ ಪ್ರವೇಶ ಮಾಡಿದ ರಾಗಾ ಇನ್ನೂ ಬುದ್ಧಿ ಕಲಿತಿಲ್ಲವೆಂದರೆ, ಅವರು ಇನ್ನೂ ಪರಿಪಕ್ವವಾಗಿಲ್ಲವೆಂದೇ ಹೇಳಬೇಕು.

ಕಾಂಗ್ರೆಸ್ ಪಕ್ಷಕ್ಕೆ ಕೇಂದ್ರದಲ್ಲಿ, ಬಿಜೆಪಿಯನ್ನು ಸರಿಗಟ್ಟುವ ನಾಯಕರು ಯಾರು ಇಲ್ಲದೇ ಇರುವುದು ಬಿಜೆಪಿಗೆ ವರದಾನವಾಗಿದೆ. ರಾ.ಗಾ ರವರು ಇನ್ನು ಮುಂದಾದರೂ ಸಂಸತ್ತಿನಲ್ಲಿ ಘನತೆ. ಗಂಭೀರತೆ ಮತ್ತು ಸಭ್ಯತೆಯಿಂದ ನಡೆದುಕೊಳ್ಳಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಸೈಬರ್ ಕ್ರೈಂಗಳ ಬಗ್ಗೆ ಎಚ್ಚರಿಕೆ ಅಗತ್ಯ

ಮಾನ್ಯರೇ

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ಸೈಬರ್ ಕ್ರೈಂಗಳಾದ ಫೋನ್ ಕಾಲ್ ಮಾಡಿ OTP ಕೇಳುವುದು, Onlineನಲ್ಲಿ linkಗಳನ್ನು click ಮಾಡಿ ಹಣ ಗಳಿಸುವಂತೆ ಹೇಳಿ ಮೋಸ ಮಾಡಿ ಹಣ ಕಳೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ನನ್ನದೇ ಒಂದು ಸ್ವಂತ ಅನುಭವ ನೋಡಿ, ಇದು ಹೊಸ ರೀತಿಯ ಮೋಸ ಮಾಡುವ ಜಾಲದ ಕಥೆ..

Face bookಗಳಲ್ಲಿ ನಾನಾ ಕಂಪನಿಗಳ ಬಟ್ಟೆ ಜಾಹೀರಾತುಗಳಿಂದ ಪ್ರೇರೇಪಿತರಾದ ಮಹಿಳೆಯರು onlineನಲ್ಲಿ amazon ಮೂಲಕ ಬಟ್ಟೆ ತರಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ meesho ಕಂಪನಿ.

ನನಗೆ ಇಂದು ಒಂದು ಸೂಪರ್ Speed post ಬಂದಿದ್ದು ಅದರಲ್ಲಿ post cover ಮೇಲೆ ಕೊಲ್ಕತ್ತಾ address ಇದ್ದು ಅದು meesho company ಯಿಂದ ಎಂದು ಒಂದು ಪತ್ರದ ಜೊತೆಗೆ ಒಂದು Scratch Card ಸಹ ಇತ್ತು. ಅದನ್ನು Scratch ಮಾಡಿದಾಗ ನನಗೆ 15,51,000/– Cash ಪ್ರೈಜ್ ಬಂದಿದ್ದು prize ಪಡೆಯಲು claming rule ಎಂದು ಎರಡು phone number ನೀಡಲಾಗಿತ್ತು. (ಎಲ್ಲಾ ದಾಖಲೆ ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ).

ನಾನು ನನ್ನ ಕೊಲ್ಕತ್ತಾ ಸ್ನೇಹಿತರಿಗೆ ಈ ವಿಳಾಸ ಕಳಿಸಿ ವಿಚಾರಿಸಿದಾಗ ಅದೊಂದು fake address ಎಂದು ಗೊತ್ತಾಯಿತು. ನಾನು ಯಾವ ನಂಬರಿಗೂ call ಮಾಡದೇ ನೇರವಾಗಿ ಈ ವಿಚಾರವನ್ನು ಸಾರ್ವಜನಿಕರಿಗೆ ಪತ್ರಿಕೆಗಳ ಮೂಲಕ ಎಲ್ಲರೂ ಎಚ್ಚರವಾಗಿರುವಂತೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ನನ್ನ ಹೆಸರಿನ intial ಸಹ ಬೇರೆಯದೇ ಆಗಿತ್ತು. ವಿಶೇಷವಾಗಿ ನಮ್ಮ ತಾಯಂದಿರು, ಹೆಂಗಸರು, ಯುವತಿಯರು ದಯಮಾಡಿ ಈ ರೀತಿಯ postal address ಮೂಲಕ ನಡೆಯುತ್ತಿರುವ ವಂಚನೆಗೆ ಬೀಳಬೇಡಿ ಹಾಗೂ ಈ ರೀತಿಯ ಚಟುವಟಿಕೆಗೆ ನಿರ್ಲಕ್ಷ್ಯ ತೋರಿಸಿ ಎಂಬುದೇ ನನ್ನ ಕಳಕಳಿ.

ಈ ರೀತಿಯ ವಂಚನೆಯನ್ನು ಬಯಲಿಗೆಳೆಯುವಲ್ಲಿ ನಮ್ಮ ಪತ್ರಿಕೋದ್ಯಮ ಹಾಗೂ ದೃಶ್ಯ ಮಾಧ್ಯಮದವರು ಸಹ ಸಹಕರಿಸಿ ಸಾರ್ವಜನಿಕರನ್ನು ಎಚ್ಚರಿಸಲಿ ಎಂಬುದೇ ನನ್ನ ಆಶಯ.

– ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಅಂಗನವಾಡಿ ಕೇಂದ್ರಗಳಿಗೆ ಸರ್ಕಾರದ ನೆರವು ಅಗತ್ಯ

ಮಾನ್ಯರೆ,

ಅಂಗನವಾಡಿ ಎಂದರೆ ಪ್ರತಿಯೊಬ್ಬರಿಗೂ ಚಿರಪರಿಚಿತವಾಗಿರುತ್ತದೆ, 2ರಿಂದ 6 ವರ್ಷದ ಮಕ್ಕಳು ಅಂಗನವಾಡಿಯಲ್ಲಿ ಪ್ರಾಥಮಿಕ ಜ್ಞಾನದ ಜೊತೆಗೆ ಮನರಂಜನೆಯನ್ನು ಪಡೆಯುತ್ತಾರೆ. ಅಂಗನವಾಡಿಯ ಆಶಾ ಕಾರ್ಯಕರ್ತೆಯರೆಂದರೆ ಇನ್ನೊಬ್ಬ ತಾಯಿಗೆ ಸಮನಾಗಿ ಪ್ರತಿಯೊಬ್ಬ ಮಕ್ಕಳ ಸೇವೆ ಮಾಡುತ್ತಾರೆ.

ಪ್ರಸ್ತುತ 2021ರ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ 65911 ಅಂಗನವಾಡಿ ಕೇಂದ್ರಗಳಿದ್ದು ಸಮಾಜಮುಖಿ ಕಾರ್ಯಗಳಲ್ಲಿ ತಮ್ಮದೆ ಆದ ಕೊಡುಗೆಯನ್ನು ನೀಡುತ್ತಿವೆ. ಇಂದಿನ ಅಂಗನವಾಡಿಗಳ ಸ್ಥಿತಿ ಸುಧಾರಿಸಬೇಕಾದ ಅನಿವಾರ್ಯತೆಯಿದ್ದು, ಸಾಕಷ್ಟು ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡಗಳಿದ್ದು, ಸರಿಯಾಗಿ ಬಾಡಿಗೆ ಕಟ್ಟಲಾಗದೆ, ಬೆಳಗಾವಿಯ ಮೆಣಸಿನಗಲ್ಲಿ ಅಂಗನವಾಡಿ ಕಾರ್ಯಕರ್ತೆ ತಮ್ಮ ಮಾಂಗಲ್ಯ ಸರ ಮಾರಿ ಬಂದ ಹಣದಿಂದ ಅಂಗನವಾಡಿಯ ಬಾಡಿಗೆ ಕಟ್ಟಿದ ಆ ಕಾರ್ಯಕರ್ತೆಯ ಸೇವೆಗೆ ಕರ್ನಾಟಕ ರಾಜ್ಯದ ಎಲ್ಲಾ ಜನತೆಯ ಪರವಾಗಿ ಧನ್ಯವಾದಗಳು ಮತ್ತು ಆ ಕಾರ್ಯಕರ್ತೆಯನ್ನು ಸರ್ಕಾರ ಸರಿಯಾಗಿ ಗುರುತಿಸಿ ಪುರಸ್ಕರಿಸಬೇಕು.

ಅಂಗನವಾಡಿಯ ಆಶಾ ಕಾರ್ಯಕರ್ತೆಯರು ಕೊರೊನಾ ಮಹಾಮಾರಿಯ ಸಂದರ್ಭಗಳಲ್ಲಿ ತಮ್ಮ ಜೀವವನ್ನು ಲೆಕ್ಕಿಸದೆ ಸಮಾಜಕಾರ್ಯವನ್ನು ಮಾಡಿದರು, ಈ ಅಂಗನವಾಡಿ ಕಾರ್ಯಕರ್ತೆಯರ ಸಂಬಳ ಕೂಡ ಕಡಿಮೆ ಮತ್ತು ಯಾವುದೇ ರೀತಿಯ ವೃತ್ತಿಯ ಭದ್ರತೆಯಿರುವುದಿಲ್ಲ, ವೈದ್ಯಕೀಯ ಸೌಲಭ್ಯ, ಸರ್ಕಾರಿ ಮನೆಗಳ ಕೊರತೆ ಇನ್ನೂ ಮುಂತಾದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

ರಾಜ್ಯ ಸರ್ಕಾರ ಅಂಗನವಾಡಿಗಳ ಅಭಿವೃದ್ಧಿಗೆ ಗಮನಹರಿಸಬೇಕು, ಪ್ರತಿಯೊಂದು ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಬೇಕು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಸಂಬಳ ಹೆಚ್ಚು ಮಾಡಬೇಕು, ಈ ಅಂಗನವಾಡಿ ಕಾರ್ಯಕರ್ತೆಯರು ಗ್ರಾಮದ ಬಾಣಂತಿಯರ ಆರೋಗ್ಯ ವಿಚಾರಣೆ, ಪೌಷ್ಟಿಕ ಮಾತ್ರೆಗಳ ವಿತರಣೆಯಲ್ಲಿ ತಮ್ಮದ ಆದ ಪಾತ್ರವನ್ನು ನಿರ್ವಹಿಸುತ್ತಾರೆ.

ರಾಜ್ಯ ಸರ್ಕಾರ ಈ ಅಂಗನವಾಡಿ ಕಾರ್ಯಕರ್ತೆಯರ ಅಭಿವೃದ್ಧಿಗೆ ನೆರವು ನೀಡಬೇಕೆಂದು, ಈ ಮೂಲಕ ರಾಜ್ಯದ ಎಲ್ಲಾ ಜನತೆಯ ಪರವಾಗಿ ಮನವಿ ಸಲ್ಲಿಸೋಣ.

– ರಾಸುಮ ಭಟ್, ಚಿಕ್ಕಮಗಳೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ವಿಕೃತಿಯೇ ಸಂಸ್ಕೃತಿಯಾದರೆ ಏನು ಗತಿ...?

ಆದಿ ಮಾನುವ ಆಧುನಿಕ ಮಾನವನಾಗುವ ಹೊತ್ತಿಗೆ ಕಾಲಕಾಲದಲ್ಲಿ ಊಹೆಗೂ ಮೀರಿದ ಬದಲಾವಣೆಯನ್ನು ಕಂಡಿದ್ದಾನೆ. ಆಹಾರ, ವಸ್ತ್ರ, ಭಾಷೆ, ದಾಂಪತ್ಯ, ಜೀವನ ಶೈಲಿ ಎಲ್ಲದರಲ್ಲೂ ಪೀಳಿಗೆಯಿಂದ ಪೀಳಿಗೆಗೆ ಗಮನಾರ್ಹವಾದ ಮಾರ್ಪಾಡುಗಳು ಆಗುತ್ತಲೇ ಇವೆ. ಬುದ್ಧಿವಂತನಾದ ಮನುಷ್ಯ, ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯ... ಹೀಗೆ ಕೆಲವು ಕಟ್ಟುಪಾಡುಗಳನ್ನು ವಿಧಿಸಿಕೊಂಡು ಸ್ವಸ್ಥ ಬದುಕನ್ನು ಕಂಡುಕೊಂಡಿದ್ದಾನೆ. ದೇಶದಿಂದ ದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಸಂಸ್ಕೃತಿಯಲ್ಲಿ ಬೆರಗಾಗುವ ಭಿನ್ನತೆಯನ್ನು ಕಾಣಬಹುದು. ಒಂದು ದೇಶದ ಸಂಸ್ಕೃತಿ ಅಲ್ಲಿನ ಪ್ರಜೆಗಳ ಮನೋಭಾವ, ಶಿಕ್ಷಣ ಎಲ್ಲವನ್ನೂ ಅವಲಂಬಿಸಿರುತ್ತದೆ. ಭೌಗೋಳಿಕ ವ್ಯತ್ಯಾಸಗಳಿಂದ ಆಹಾರ, ವಸ್ತ್ರ ವಿನ್ಯಾಸದಲ್ಲಿ ಭಿನ್ನ ಸಂಸ್ಕೃತಿ ರೂಪಿತವಾಗಿರುತ್ತದೆ. ಧರ್ಮಗಳಿಂದ ಧರ್ಮಗಳಿಗೆ ಸಂಸ್ಕೃತಿ ಭಿನ್ನತೆ ಇರುತ್ತದೆ. ಆದರೆ ಕೆಲವು ವರ್ಷಗಳಿಂದ ಈಚೆಗೆ ಆಘಾತವಾಗುವಂತಹ ಬದಲಾವಣೆಗಳನ್ನು ಕಾಣಬಹುದು. ಆಧುನಿಕತೆ ಎಂಬುದು ನಗರ–ಪಟ್ಟಣ ಎನ್ನದೆ ಮನೆಮನೆಗಳಿಗೂ ಇಣುಕಿದೆ. ಟಿ.ವಿ ಹಾಗೂ ಮೊಬೈಲ್ ಫೋನ್ ಪ್ರಭಾವ ಇಂದು ಬದುಕನ್ನು ನಾಗಾಲೋಟದಲ್ಲಿ ಓಡಿಸುತ್ತಿವೆ. ಅನೇಕ ಗುರುಹಿರಿಯರ ಮಾತುಗಳಿಗೆ ಕಿವುಡರಾಗಿ, ಹುಚ್ಚುಕುದುರೆ ಓಡುವಂತೆ ಸಂಸ್ಕೃತಿ, ಪರಂಪರೆ, ದೇಶಪ್ರೇಮ ಯಾವುದನ್ನು ಪರಿಗಣಿಸದೆ ತಮಗೆ ಇಚ್ಛೆ ಬಂದ ದಾರಿಯಲ್ಲಿ ಓಡುತ್ತಿದ್ದಾರೆ. ಫ್ಯಾಷನ್, ಮಾರ್ಡನ್, ನ್ಯೂ ಜನರೇಷನ್ ಎಂಬ ಭ್ರಮೆಯಲ್ಲಿ ತೇಲುತ್ತಾ ವಿದೇಶಿ ಸಂಸ್ಕೃತಿಯನ್ನು ಅಂಧಾನುಕರಣೆ ಮಾಡಿ ಯಡಬಿಡಂಗಿಗಳಾಗುತ್ತಿದ್ದಾರೆ. ವಿಕೃತಿಯನ್ನೇ ಸಂಸ್ಕೃತಿ ಎಂದು ಭಾವಿಸಿ ಎದೆಯುಬ್ಬಿಸಿ ನಡೆಯುತ್ತಿದ್ದಾರೆ. ಮುಂದಿನ ಪೀಳಿಗೆಗೆ ಇಂದಿನ ಪೀಳಿಗೆಯವರ ಕೊಡುಗೆ ಏನು ಎಂದು ನೆನೆದರೆ ದಿಗಿಲಾಗುತ್ತದೆ !

ಇಂದಿನ ಸಮಾಜದಲ್ಲಿ ಅನೇಕ ರೀತಿಯ ವಿಕೃತಿಗಳನ್ನು ಕಾಣಬಹುದು. ಮುಖ್ಯವಾಗಿ ವಸ್ತ್ರ ಸಂಹಿತೆ ವಿಚಾರಕ್ಕೆ ಬಂದರೆ ಇಂದಿನ ಯುವ ಪೀಳಿಗೆ ದೇವಸ್ಥಾನದ ದರ್ಶನಕ್ಕೆ ಹೋಗುವ ಸಮಯದಲ್ಲೂ ಜೀನ್ಸ್, ಟೀಶರ್ಟ್, ನಿಕ್ಕರ್, ಹಾಫ್ ಫ್ಯಾಂಟ್ ಧರಿಸುವುದು ಸಾಮಾನ್ಯವಾಗಿದೆ. ಅನೇಕ ದೇವಸ್ಥಾನಗಳ ಹೊರಗೆ ವಸ್ತ್ರ ಸಂಹಿತೆ ಕುರಿತು ಬೋರ್ಡ್ ಹಾಕಿರುವುದನ್ನು ಗಮನಿಸಬಹುದು. ಇಂದು ಸುಸಂಸ್ಕೃತರು ಎಂದು ಕರೆಯಿಸಿಕೊಳ್ಳುವ ವಿದ್ಯಾವಂತರಿಗೇ ಬುದ್ಧಿ ಹೇಳಬೇಕಾಗಿ ಬಂದಿರುವುದು ಈ ಶತಮಾನದ ದೌರ್ಭಾಗ್ಯಗಳಲ್ಲಿ ಒಂದು. ಮನುಷ್ಯ ಬಟ್ಟೆಯನ್ನು ಏಕೆ ಧರಿಸಬೇಕು ಎಂಬ ಉದ್ದೇಶವನ್ನೇ ಇಂದಿನ ಪೀಳಿಗೆ ಮರೆತಂತೆ ಕಾಣುತ್ತಿದೆ. ಅಲ್ಲಲ್ಲಿ ಹರಿದ ಜೀನ್ಸ್ ಧರಿಸುವುದು, ಅಂಗಾಂಗಗಳು ಎದ್ದು ಕಾಣುವಂತೆ ಬಟ್ಟೆ ಧರಿಸುವುದು. ಅನೇಕ ಸಾರ್ವಜನಿಕ ಸಮಾರಂಭಗಳಲ್ಲಿ ನೋಡುಗರಿಗೆ ಮುಜುಗರವಾಗುವಂತಹ ಬಟ್ಟೆಗಳನ್ನು ಧರಿಸುವುದನ್ನು ನೋಡಬಹುದು. ಹಿಂದೆ ಹರಿದ ಬಟ್ಟೆಯನ್ನು ಬಡವರು ಧರಿಸುತ್ತಿದ್ದರು. ಆದರೆ ಇಂದು ಹರಿದ ಬಟ್ಟೆ ಸಿರಿವಂತರ ಸಂಕೇತವಾಗುತ್ತಿರುವುದು ದುರದೃಷ್ಟಕರ. ಸಿರಿವಂತರಾಗುತ್ತಿದ್ದಂತೆ ಬಟ್ಟೆಗೆ ಬಡತನ ಬರುವುದು ನಿಜಕ್ಕೂ ಶೋಚನೀಯ. ಮೈತುಂಬಾ ಬಟ್ಟೆ ಹಾಕಿಕೊಳ್ಳುವವರನ್ನೇ ವಿಚಿತ್ರವಾಗಿ ನೋಡುವ ಸನ್ನಿವೇಶ ಉಂಟಾಗುತ್ತಿರುವುದು ನಾಗರಿಕತೆಯ ದುಃಖದ ಕತೆಯಾಗಿದೆ.

ಹುಟ್ಟುಹಬ್ಬ ಆಚರಿಸುವುದು ಒಂದೊಂದು ದೇಶದಲ್ಲಿ ಒಂದೊಂದು ರೀತಿಯಿದೆ. ಆದರೆ ಇಂದಿನ ಆಧುನಿಕ ಪ್ರಪಂಚದಲ್ಲಿ ತಮ್ಮ ಸಂಪ್ರದಾಯವನ್ನು



> ಹುಟ್ಟುಹಬ್ಬ ಆಚರಿಸುವುದು ಒಂದೊಂದು ದೇಶದಲ್ಲಿ ಒಂದೊಂದು ರೀತಿಯಿದೆ. ಆದರೆ ಇಂದಿನ ಆಧುನಿಕ ಪ್ರಪಂಚದಲ್ಲಿ ತಮ್ಮ ಸಂಪ್ರದಾಯವನ್ನು ಬದಿಗೊತ್ತಿ ಕೇಕ್ ಕತ್ತರಿಸಿ, ಮೊಂಬತ್ತಿ ಆರಿಸಿ ಹುಟ್ಟುಹಬ್ಬ ಆಚರಿಸುವುದನ್ನು ಬಹುಪಾಲು ಎಲ್ಲಾ ಧರ್ಮದವರು ಒಪ್ಪಿಕೊಂಡು ಆಚರಿಸುತ್ತಿದ್ದಾರೆ. ಜಾಗತಿಕ ಸಂಸ್ಕೃತಿಯಾಗಿ ಸ್ವೀಕರಿಸಿರುವ ಈ ಸಂಸ್ಕೃತಿಯು ಎಲ್ಲೆಡೆ ಸರ್ವೇಸಾಮಾನ್ಯವಾಗಿದೆ. ಇರಲಿ, ಆದರೆ ತಿನ್ನುವ ಆಹಾರವಾದ ಕೇಕ್ ಅನ್ನು ವಿನಾಕಾರಣ ಮುಖಕ್ಕೆ ಮೆತ್ತುವುದು, ಹುಟ್ಟುಹಬ್ಬ ಆಚರಿಸುವ ವ್ಯಕ್ತಿಗೆ ಕೇಕ್ ಮೇಲೆ ಮುಖ ಹುದುಗಿಸಿ ಹಿಂಸಿಸುವುದು ಯಾವ ಸಂಸ್ಕೃತಿ. ಅನೇಕರ ಅಯೋಗ್ಯರಿಗೆ ಮೈಸೂರು ಪೇಟ ಹಾಕಿ ಅದರ ಮೌಲ್ಯವನ್ನೇ ಕಳೆಯುತ್ತಿದ್ದಾರೆ. ಹುಟ್ಟುಹಬ್ಬದಂದು ಕಾಲೇಜು ವಿದ್ಯಾರ್ಥಿಗಳು ಎಲ್ಲೆಂದರಲ್ಲಿ, ಅನೇಕ ಕಡೆ ರಸ್ತೆ ಬದಿಯಲ್ಲಿಯೇ ಮದ್ಯಪಾನ, ಧೂಮಪಾನ ಮಾಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದರ ಮೂಲಕ ಬೇಜವಾಬ್ದಾರಿ ಮೆರೆಯುತ್ತಿದ್ದಾರೆ. ಇದಾವ ಸಂಸ್ಕೃತಿ, ಇದಾವ ಸಭ್ಯತೆ? ಮುಂದೆ ಈ ವಿಕೃತಿ ಇನ್ನಾವ ಮಟ್ಟಕ್ಕೆ ಮುಟ್ಟಬಹುದು ಊಹಿಸಿ!

ಬದಿಗೊತ್ತಿ ಕೇಕ್ ಕತ್ತರಿಸಿ, ಮೊಂಬತ್ತಿ ಆರಿಸಿ ಹುಟ್ಟುಹಬ್ಬ ಆಚರಿಸುವುದನ್ನು ಬಹುಪಾಲು ಎಲ್ಲಾ ಧರ್ಮದವರು ಒಪ್ಪಿಕೊಂಡು ಆಚರಿಸುತ್ತಿದ್ದಾರೆ. ಜಾಗತಿಕ ಸಂಸ್ಕೃತಿಯಾಗಿ ಸ್ವೀಕರಿಸಿರುವ ಈ ಸಂಸ್ಕೃತಿ ಇಂದು ಎಲ್ಲೆಡೆ ಸರ್ವೇಸಾಮಾನ್ಯವಾಗಿದೆ. ಇರಲಿ, ಆದರೆ ತಿನ್ನುವ ಆಹಾರವಾದ ಕೇಕ್ ಅನ್ನು ವಿನಾಕಾರಣ ಮುಖಕ್ಕೆ ಮೆತ್ತುವುದು, ಹುಟ್ಟುಹಬ್ಬ ಆಚರಿಸುವ ವ್ಯಕ್ತಿಗೆ ಕೇಕ್ ಮೇಲೆ ಮುಖ ಹುದುಗಿಸಿ ಹಿಂಸಿಸುವುದು ಯಾವ ಸಂಸ್ಕೃತಿ. ಅನೇಕ ಅಯೋಗ್ಯರಿಗೆ ಮೈಸೂರು ಪೇಟ ಹಾಕಿ ಅದರ ಮೌಲ್ಯವನ್ನೇ ಕಳೆಯುತ್ತಿದ್ದಾರೆ. ಹುಟ್ಟುಹಬ್ಬದಂದು ಕಾಲೇಜು ವಿದ್ಯಾರ್ಥಿಗಳು ಎಲ್ಲೆಂದರಲ್ಲಿ, ಅನೇಕ ಕಡೆ ರಸ್ತೆ ಬದಿಯಲ್ಲಿಯೇ ಮದ್ಯಪಾನ, ಧೂಮಪಾನ ಮಾಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದರ ಮೂಲಕ ಬೇಜವಾಬ್ದಾರಿ ಮೆರೆಯುತ್ತಿದ್ದಾರೆ. ಇದಾವ ಸಂಸ್ಕೃತಿ, ಇದಾವ ಸಭ್ಯತೆ? ಮುಂದೆ ಈ ವಿಕೃತಿ ಇನ್ನಾವ ಮಟ್ಟಕ್ಕೆ ಮುಟ್ಟಬಹುದು ಊಹಿಸಿ!

ವಿವಾಹ ಶಾಸ್ತ್ರದ ಸಂಸ್ಕೃತಿಯಂತೂ ನಮ್ಮ ದೇಶದಲ್ಲಿ ಬುಡಮೇಲಾಗಿದೆ ಎಂದರೆ ತಪ್ಪಿಲ್ಲ. ಕೆಲವು ಸಂಪ್ರದಾಯಸ್ಥ ಕುಟುಂಬಗಳನ್ನು ಹೊರತುಪಡಿಸಿದರೆ ಬಹುಪಾಲು ಎಲ್ಲಾ ಕುಟುಂಬಗಳಲ್ಲೂ ಮದುವೆಯ ವಿಧಿವಿಧಾನಗಳೇ ಬದಲಾಗಿಬಿಟ್ಟಿವೆ. ಹಿಂದೂ ಸಂಪ್ರದಾಯದ ಕೆಲವು ವರ್ಗಗಳಲ್ಲಿ ಮದುವೆಗೂ ಮೊದಲು ವರ ಹಾಗೂ ವಧು ಮುಖವನ್ನು ನೋಡುವ ಅವಕಾಶವೇ ಇರುತ್ತಿರಲಿಲ್ಲ. ತದ ನಂತರ ವಧುಪರೀಕ್ಷೆ ಬಂದ ಕಾಲಕ್ಕೆ ಸ್ವಲ್ಪ ಬದಲಾಯಿತು. ಆದರೆ ಇಂದು ಮದುವೆ ಪ್ರಕ್ರಿಯೆಗಳು ದಿಗಿಲಾಗುವ ಮಟ್ಟಕ್ಕೆ ಬದಲಾಗಿವೆ. ಪ್ರೀ ವೆಡ್ಡಿಂಗ್ ಶೂಟ್, ಮಾಂಗಲ್ಯ ಧಾರಣೆಗೆ ಮೊದಲೇ ಆರತಕ್ಷತೆ, ಆರತಕ್ಷತೆ ಸಮಯದಲ್ಲಿ ಈವೆಂಟ್ ಮ್ಯಾನೇಜ್‌ಮೆಂಟ್‌ನವರ ನೃತ್ಯ, ಫೋಟೋ ಹಾಗೂ ವಿಡಿಯೋಗೋಸ್ಕರ ಶಾಸ್ತ್ರ ಹಾಗೂ ಸಂಪ್ರದಾಯಗಳನ್ನು ಗಾಳಿಗೆ ತೂರಲಾಗುತ್ತಿದೆ. ಸೋಬಾನೆ ಪದ ಹಾಡುತ್ತಿದ್ದ ಕಡೆ ಡಿಜೆ ಡಾನ್ಸ್ ಬಂದಿರುವುದನ್ನು ಕಾಣಬಹುದು. ಅರ್ಥಪೂರ್ಣವಾದ ಸಂಪ್ರದಾಯಗಳು ಇಂದು ಕೇವಲ ನಾಮ್ ಕಾ ವಾಸ್ತೆ ರೀತಿಯಲ್ಲಿ ಮಾಡಲಾಗುತ್ತಿದೆ. ಆತಿಥ್ಯಕ್ಕಿಂತ ಆಡಂಬರಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದನ್ನು ಕಾಣಬಹುದು. ಮದುವೆಯಷ್ಟೇ ವಿಚ್ಛೇದವನವು ಇಂದಿನ ದಿನದಲ್ಲಿ ಸಾಮಾನ್ಯವಾಗಿಬಿಟ್ಟಿದೆ. ವಿಚ್ಛೇದನವೂ ಸಹ ವಿದೇಶದ ಬಳುವಳಿ ಎನ್ನಬಹುದು. ಅನೇಕ ಹಿರಿಯರು ಈ ಕಣ್ಣಿನಲ್ಲಿ ಇನ್ನೂ ಏನೇನು ನೋಡಬೇಕೋ ಭಗವಂತ ಎಂದು ಗೊಣಗುತ್ತಿರುವುದು ಮಾತ್ರ ಸುಳ್ಳಲ್ಲ.

ಇನ್ನು ಆಹಾರ ಸಂಸ್ಕೃತಿಯಂತೂ ವಿಚಿತ್ರವಾಗಿ ಹಾಳಾಗುತ್ತಿದೆ. ಭೌಗೋಳಿಕ ಕಾರಣಕ್ಕೆ ಆಹಾರ ಸಂಪ್ರದಾಯವನ್ನು ನಮ್ಮ ಪೂರ್ವಜರು ಉತ್ತಮ ರೀತಿಯಲ್ಲಿ ರೂಪಿಸಿದ್ದಾರೆ. ಸೀಜನ್‌ಗಳಲ್ಲಿ ಸಿಗುವ ಹಣ್ಣು ತರಕಾರಿಗಳನ್ನು ಬಳಸಿ ಖಾದ್ಯಗಳನ್ನು ತಯಾರಿಸುವ, ಆರೋಗ್ಯಕ್ಕೆ ಪೂರಕವಾದ ನಮ್ಮ ದೇಶದ ಆಹಾರ ಪದ್ಧತಿಯು ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರೆ ತಪ್ಪಿಲ್ಲ. ಆದರೆ ಇಂದು ವಿದೇಶಿ ಚಾಟ್ ಸಂಸ್ಕೃತಿ ಹಳ್ಳಿ ಹಳ್ಳಿಗಳನ್ನು ತಲುಪಿ ನಮ್ಮ ಆಹಾರ ಪದ್ಧತಿ ಹಳ್ಳ ಹಿಡಿಯುತ್ತಿವೆ. ಹೊತ್ತುಗೊತ್ತು ಇಲ್ಲದೆ ಮಧ್ಯರಾತ್ರಿಯಲ್ಲೂ ರಸ್ತೆಯಲ್ಲಿ ಸಿಗುವ ಬಿರಿಯಾನಿಗೆ ಬಾಯಿ ನೀರು ಸುರಿಸಿ ನಿದ್ದೆಯಿಂದ ಎದ್ದು ಹೋಗುವುದು ಸಿಟಿಗಳಲ್ಲಿ ಸಾಮಾನ್ಯವಾಗಿದೆ. ಇಂದಿನ ಆರೋಗ್ಯ ಹಾಳಾಗುತ್ತಿರುವುದೇ ಭಿನ್ನ ಭಿನ್ನ ಆಹಾರ ಪದ್ಧತಿಯನ್ನು ಅನುಸರಿಸುತ್ತಿರುವ ಕಾರಣಕ್ಕೆ ಎನ್ನಬಹುದು. ಪಿಜ್ಜಾ, ಬರ್ಗರ್, ಮಂಚೂರಿ ಇವುಗಳು ಬಾಯಿ ರುಚಿಗೆ ಇರುವ ತಿನಿಸುಗಳು. ಆದರೆ ಅವುಗಳನ್ನೇ ಊಟ ತಿಂಡಿ ಬದಲಿಗೆ ಬಳಸುತ್ತಿರುವುದು, ಸೀಜನ್ ಇಲ್ಲದಿದ್ದರೂ ಮಾರುಕಟ್ಟೆಯಲ್ಲಿ ಸಿಗುವ ಹಣ್ಣ ತರಕಾರಿಗಳನ್ನು ಬಳಸುವುದು, ಕಾರ್ಯಕ್ರಮಗಳಲ್ಲಿ ತದ್ವಿರುದ್ಧವಾದ ಆಹಾರಗಳನ್ನು ತಿನ್ನುವುದರಿಂದ ಅನಾರೋಗ್ಯ ಸಾಮಾನ್ಯವಾಗಿದೆ. ನಮ್ಮ ದೇಸಿ ಆಹಾರ ಪದ್ಧತಿಯ ಅನೇಕ ತಿನಿಸುಗಳನ್ನು ಇಲ್ಲಸಲ್ಲದ ಐಟಂಗಳನ್ನು ಬೆರೆಸಿ ವಿಕೃತಿಗೊಳಿಸುತ್ತಿದ್ದಾರೆ ನಮ್ಮ ಸೋ ಕಾಲ್ಡ್ ಶೆಫ್‌ಗಳು. ಉದಾಹರಣೆಗೆ ಕೋಸಂಬರಿಗೆ ಇಲ್ಲಸಲ್ಲದ ಐಟಂಗಳನ್ನು ಸೇರಿಸಿ ಮೂಲ ಕೋಸಂಬರಿಯ ರುಚಿಯನ್ನೇ ಹಾಳುಗೆಡುವಿದ್ದಾರೆ, ಇದೇ ರೀತಿ ಅನೇಕ ತಿನಿಸುಗಳು ವಿರೂಪಗೊಂಡು ತಿನ್ನುವವರಿಗೆ ವಿಶೇಷ ರುಚಿ ಎನಿಸಿದರೂ ಹೊಟ್ಟೆಗೆ ಹಾಗೂ ಆರೋಗ್ಯಕ್ಕೆ ಅನೇಕ ದುಷ್ಪರಿಣಾಮಗಳನ್ನುಂಟು ಮಾಡುತ್ತಿವೆ. ಹಿಂದೆ ಮದುವೆಗಳಲ್ಲಿ ಮಾಡುತ್ತಿದ್ದ ಕೆಲವು ತಿನಿಸುಗಳನ್ನು ಶ್ರದ್ಧೆಯಿಂದ ತಿನ್ನುತ್ತಿದ್ದರು. ಆದರೆ ಇಂದು ತಿನ್ನುವುದಕ್ಕಿಂತ ಎಲೆಯ ಮೇಲೆ ಬಿಡುವ ತಿನಿಸುಗಳೇ ಹೆಚ್ಚು. ಎಲೆ ಮೇಲೆ ಊಟ ಬಿಡುವುದು ಯಾವು ಸಂಸ್ಕೃತಿ ಅಲ್ಲವೇ?

ಭಾಷಾ ಸಂಸ್ಕೃತಿಯಲ್ಲಿ ಆಗಿರುವ ವಿಕೃತಿ ಬಗ್ಗೆ ಹೇಳುತ್ತಾ ಹೋದರೆ ಮುಗಿಯದು. ಇಂದಿನ ತಂತ್ರಜ್ಞಾನ ಯುಗದಲ್ಲಿ ನಾನಾ ಕಾರಣಗಳಿಗೆ ಮೂಲ ಭಾಷೆ ವಿರೂಪಗೊಂಡಿದೆ. ಇಂದಿನ ಬಹುಪಾಲು ಶಿಕ್ಷಕರು ಹಾಗೂ ಮಾಧ್ಯಮಗಳು ಇದರ ಕುರಿತು ಗಂಭೀರವಾಗಿ ಚಿಂತಿಸಿ ವರ್ತಿಸುತ್ತಿಲ್ಲ. ಅನೇಕ ಕನ್ನಡ ಟಿ.ವಿ. ವಾಹಿನಿಗಳ ನಿರೂಪಕರು ಶುದ್ಧವಾದ ಭಾಷೆ ಬಳಸದೆ, ಅನೇಕ ಭಾಷೆಗಳನ್ನು ಒಮ್ಮೆಲೆ ಮಾತನಾಡುತ್ತಾ ವೀಕ್ಷಕರಿಗೆ ಗೊಂದಲ ಮೂಡಿಸುತ್ತಿದ್ದಾರೆ. ಇವರುಗಳ ಬೆರಕೆ ಭಾಷೆಯನ್ನು ಅನುಸರಿಸುವ ಮಕ್ಕಳು ಸಹ ಶುದ್ಧ ಭಾಷೆಯನ್ನು ಮಾತನಾಡುವಲ್ಲಿ ಹಾಗೂ ಬಳಸುವಲ್ಲಿ ವಿಫಲರಾಗುತ್ತಿದ್ದಾರೆ.

ಇಂದಿನ ದಿನಮಾನದಲ್ಲಿ ಯುವಕರು ದುರಭ್ಯಾಸಗಳನ್ನು ಹೊಂದಿರದಿದ್ದರೆ ಅವರನ್ನು ಅಲ್ಲಗಳೆಯುವ, ಹೀಯಾಳಿಸುವ ಕೆಟ್ಟ ಸಂಸ್ಕೃತಿ ಹುಟ್ಟಿಕೊಂಡಿದೆ. ಇತ್ತೀಚಿಗೆ ಶಿವಮೊಗ್ಗದಲ್ಲಿ ವೈದ್ಯ ವಿದ್ಯಾರ್ಥಿಗಳು ಮನೆಯಲ್ಲಿ ಗಾಂಜಾ ಗಿಡಗಳನ್ನು ಬೆಳೆದು ಬಳಸುತ್ತಿದ್ದರು ಎಂದರೆ ದೇಶದ ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂಬುದನ್ನು ಊಹಿಸಿ. ಜನರ ಜೀವ ಕಾಪಾಡುವ ವೈದ್ಯ ವೃತ್ತಿ ಸ್ವೀಕರಿಸುವ ವಿದ್ಯಾರ್ಥಿಗಳೇ ಮಾದಕ ವಸ್ತುಗಳ ವ್ಯಸನಿಗಳಾಗುತ್ತಿದ್ದಾರೆ ಎಂದರೆ ಬೇರೆ ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳ ಹುಚ್ಚಾಟಗಳನ್ನು ಊಹಿಸಿ !

ದೇಶಕ್ಕೋಸ್ಕರ ಜೀವದ ಹಂಗನ್ನು ತೊರೆದು ಹೋರಾಡಿ ಜೈಲು ಸೇರಿ, ಜೈಲಿನಿಂದ ಬಿಡುಗಡೆಯಾದ ದೇಶಭಕ್ತನನ್ನು ಸ್ವಾಗತಿಸಿ ಸಂಭ್ರಮಾಚರಣೆ ಮಾಡುವುದು ಸಂಸ್ಕೃತಿ. ಭ್ರಷ್ಟಾಚಾರಿ ಎಂದು ಆರೋಪಿಯಾಗಿ ಜೈಲು ಸೇರಿ, ಜಾಮೀನು ಪಡೆದು ಹೊರಬರುವ ರಾಜಕಾರಣಿಯನ್ನು ಭವ್ಯವಾಗಿ, ದಿವ್ಯವಾಗಿ, ವೈಭೋಗದಿಂದ ಪಟಾಕಿ ಸಿಡಿಸಿ ಸ್ವಾಗತಿಸುವುದು ವಿಕೃತಿ! ಇದು ನಮ್ಮ ದೇಶದ ಇಂದಿನ ಜನರ ಮಾನಸಿಕ ಸ್ಥಿತಿಯನ್ನು ಬಿಂಬಿಸುತ್ತದೆ. ಸತ್ಯ, ನ್ಯಾಯ, ಪ್ರಾಮಾಣಿಕತೆಯಿಂದ ಕೆಲಸ ಮಾಡುವವರನ್ನು ಗಾಂಧಿ ಎಂದು ಹೀಯಾಳಿಸುವ, ದೇಶಕ್ಕೋಸ್ಕರರ ಹೋರಾಡಿದ ಮಹಾತ್ಮ ಗಾಂಧೀಜಿಯ ಹೆಸರನ್ನು ಮೂರನೇ ದರ್ಜೆಗೆ ಹೆಸರಿಸಿ ಅವಮಾನಿಸುವ ಜನರ ಮನಸ್ಥಿತಿ ಹೇಗಿರಬೇಡ? ಸಾಧನೆ ಮಾಡಿ ಊರಿಗೆ ಕೀರ್ತಿ ತಂದವನಿಗೆ ಸಣ್ಣ ಸನ್ಮಾನವನ್ನು ಮಾಡದ ಜನ, ಊರಿಗೆ ಮಾರಿಯಾದ ಕುಡುಕನೊಬ್ಬ ಸತ್ತರೆ 'ಮತ್ತೆ ಹುಟ್ಟಿ ಬಾ ಗೆಳೆಯ' ಎಂದು ಫ್ಲೆಕ್ಸ್ ಹಾಕಿಸಲು ಉತ್ಸುಕರಾಗಿರುತ್ತಾರೆ ಎಂದರೆ ಇವರುಗಳಿಗೆ ಸಂಸ್ಕೃತಿಯ ದಾರಿದ್ರ್ಯ ಎಷ್ಟಿರಬೇಡ?

ಇಂದಿನ ಕೆಲವು ಮಂದಿಯ ವಿಚಿತ್ರ ಸಂಸ್ಕೃತಿ, ವಿಕೃತಿ ಜನಸಾಮಾನ್ಯರನ್ನು ಪ್ರಚೋದಿಸುತ್ತಿದೆ. ಇಷ್ಟವಿಲ್ಲದಿದ್ದರೂ ಅನುಸರಿಸಬೇಕಾದ ಒತ್ತಡ ಅನೇಕರಿಗೆ ಉಂಟಾಗುತ್ತಿದೆ. ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದ ಹೊಣೆ ಎಲ್ಲರ ಮೇಲೆ ಇದೆ. ಏನಂತೀರಿ?

ಪದ ತಾಂಬೂಲ :
ಹಣವಿದ್ದವರು ನಮ್ಮ ಸಂಸ್ಕೃತಿಯನ್ನು ಬೆಳೆಸಬೇಕು,
ವಿದೇಶಿ ಸಂಸ್ಕೃತಿಯನ್ನು ಬೆರಕೆ ಮಾಡಬಾರದು.

ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿ ಆರಂಭ

ಗುಲ್ಬರ್ಗ ಮಿಸ್ಟಿಕ್ಸ್, ಹುಬ್ಬಳ್ಳಿ ಟೈಗರ್ಸ್ ಶುಭಾರಂಭ



ಹುಬ್ಬಳ್ಳಿ ಟೈಗರ್ಸ್‌ನ ಮೊಹಮ್ಮದ್ ತಾಹಾ ಅಬ್ಬರದ ಬ್ಯಾಟಿಂಗ್.



ಗುಲ್ಬರ್ಗ ಮಿಸ್ಟಿಕ್ಸ್‌ನ ಅಭಿಲಾಷ್ ಶೆಟ್ಟಿ ಮಾರಕ ಬೌಲಿಂಗ್.

ಬೆಂಗಳೂರು, ಆ.13(ಎಂಕೆ)– ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರದಿಂದ ಆರಂಭವಾದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ–20 ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಹಾಲಿ ಚಾಂಪಿಯನ್ ಗುಲ್ಬರ್ಗ ಮಿಸ್ಟಿಕ್ಸ್ ಆರು ವಿಕೆಟ್‌ಗಳ ಸುಲಭ ಜಯ ದಾಖಲಿಸಿದರೆ, ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮೈಸೂರು ವಾರಿಯರ್ಸ್ ಸೋಲು ಕಂಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 137 ರನ್‌ಗಳಷ್ಟೇ ಶಕ್ತವಾಯಿತು. ತಂಡದ ಪರ ಸೂರಜ್ ಅಹುಜಾ 44 ಎಸೆತಗಳಲ್ಲಿ 2 ಸಿಕ್ಸರ್, 5 ಫೋರ್ ಸೇರಿ ಅಜೇಯ 62 ಗಳಿಸುವ ಮೂಲಕ ಸರಣಿಯ ಮೊದಲ ಅರ್ಧಶತಕ ದಾಖಲಿಸಿದರು. ಆದರೆ ಉಳಿದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ ಸಾಧಾರಣ ಮೊತ್ತಗಳಿಸಲಷ್ಟೇ ಸಾಧ್ಯವಾಯಿತು. ಬೌಲಿಂಗ್‌ನಲ್ಲಿ ಅಭಿಲಾಷ್ ಶೆಟ್ಟಿ 3, ಶರಣ್ ಗೌಡ್ 2 ವಿಕೆಟ್ ಕಬಳಿಸಿ ಮಿಂಚಿದರು.

138 ರನ್‌ಗಳ ಗುರಿ ಬೆನ್ನತ್ತಿದ ಹಾಲಿ ಚಾಂಪಿಯನ್ ಗುಲ್ಬರ್ಗ ಮಿಸ್ಟಿಕ್ಸ್ 17.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಜಯಬೇರಿ ಬಾರಿಸಿತು. ಆರಂಭಿಕ ಆಟಗಾರರಾದ ಎಲ್.ಆರ್.ಚೇತನ್ 36 ರನ್, ಆದರ್ಶ್ ಪ್ರಜ್ವಲ್ 31 ರನ್‌ಗಳ ಮೂಲಕ ಉತ್ತಮ ಆರಂಭ ನೀಡಿದರೆ, ಕೆ.ವಿ.ಅನೀಶ್ ಅಜೇಯ 29 ರನ್, ಅಮಿತ್ ವರ್ಮ 28 ರನ್ ಸಿಡಿಸುವ ಮೂಲಕ ತಂಡಕ್ಕೆ ಜಯ ತಂದಿಟ್ಟರು. ಬೆಂಗಳೂರು ಬ್ಲಾಸ್ಟರ್ಸ್ ಪರ ಶುಭಾಂಗ ಹೆಗ್ಡೆ 3 ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಅಭಿಲಾಷ್ ಶೆಟ್ಟಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ವಾರಿಯರ್ಸ್‌ಗೆ ಸೋಲು: ಮೊದಲ ದಿನದ 2ನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮೈಸೂರು ವಾರಿಯರ್ಸ್ ಸೋಲು ಅನುಭವಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು ಕೇವಲ 111 ರನ್ ಗಳಿಸಿತು. ತಂಡದ ಪರ ಆರ್.ಸಮರ್ಥ್ 21 ರನ್, ಜೆ.ಸುಚೀತ್ 20 ರನ್ ಗಳಿಸಿದ್ದು, ಬಿಟ್ಟರೆ ನಾಯಕ ಕರುಣ್ ನಾಯರ್ ಸೇರಿದಂತೆ ಉಳಿದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ಸಾಧಾರಣ ಮೊತ್ತ ಗಳಿಸಲಷ್ಟೇ ಸಾಧ್ಯವಾಯಿತು. ಬೌಲಿಂಗ್‌ನಲ್ಲಿ ಮಾರಕ ದಾಳಿ ನಡೆಸಿದ ಹುಬ್ಬಳ್ಳಿ ಟೈಗರ್ಸ್‌ನ ಮಿತ್ರಕಾಂತ್ 3, ವಿದ್ವತ್ ಕಾವೇರಪ್ಪ ಮತ್ತು ಲವಿಶ್ ಕುಶಾಲ್ ತಲಾ 2 ವಿಕೆಟ್ ಪಡೆದರು.

112 ರನ್ ಗುರಿ ಪಡೆದ ಹುಬ್ಬಳ್ಳಿ ಟೈಗರ್ಸ್ 8.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 82 ರನ್ ಗಳಿಸಿದ್ದ ವೇಳೆ ಮಳೆ ಬಂದ ಹಿನ್ನೆಲೆ ವಿಜೆಡಿ ನಿಯಮಾನುಸಾರ ಹುಬ್ಬಳ್ಳಿ ಟೈಗರ್ಸ್ ತಂಡಕ್ಕೆ ಜಯ ಘೋಷಣೆ ಮಾಡಲಾಯಿತು. ಅಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿದ ಮೊಹಮ್ಮದ್ ತಾಹಾ 30 ಎಸೆತಗಳಲ್ಲಿ 3 ಸಿಕ್ಸರ್, 9 ಫೋರ್‌ಗಳ ಮೂಲಕ 61 ರನ್‌ಗಳಿಸಿ ತಂಡದ ಗೆಲುವಿಗೆ ಪ್ರಮುಖ ಕಾರಣರಾದರು. 3 ವಿಕೆಟ್ ಕಬಳಿಸಿದ ಮಿತ್ರಕಾಂತ್ ಪಂದ್ಯ ಶ್ರೇಷ್ಠಕ್ಕೆ ಭಾಜನರಾದರು.

ವೆಸ್ಟ್ ಇಂಡೀಸ್‌ಗೆ 8 ವಿಕೆಟ್‌ಗಳ ಭರ್ಜರಿ ಜಯ

ಟಿ–20 ಸರಣಿ ಸೋತ ಭಾರತ

ಫ್ಲೋರಿಡಾ ಆ.13(ಸಿಎನ್)–ನಿಕೋಲಸ್ ಪೂರನ್ ಹಾಗೂ ಬ್ರೆಂಡನ್ ಕಿಂಗ್ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಭಾರತದ ವಿರುದ್ಧ ಸರಣಿ ನಿರ್ಣಾಯಕದ 5ನೇ ಟಿ–20 ಪಂದ್ಯದಲ್ಲಿ ವೆಸ್ಟ್ ಇಂಡೀಸ್ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಆ ಮೂಲಕ 5 ಟಿ–20 ಸರಣಿ ಪೈಕಿ 3–2 ಅಂತರದಲ್ಲಿ ಗೆದ್ದು ಸರಣಿ ವಶ ಪಡಿಸಿಕೊಂಡಿದೆ.

ಇಲ್ಲಿನ ರೀಜನಲ್ ಪಾರ್ಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. 166 ರನ್‌ಗಳ ಗುರಿ ಬೆನ್ನಟ್ಟಿದ ವೆಸ್ಟ್ ಇಂಡೀಸ್ 18 ಓವರ್‌ಗಳಲ್ಲಿ ಗೆಲುವಿನ ನಗೆಬೀರಿತು. ವೆಸ್ಟ್ ಇಂಡೀಸ್ ಪರ ನಿಕೊಲಾಸ್ ಪೂರನ್ (49), ಬ್ರೆಂಡನ್ ಕಿಂಗ್ ಅಜೇಯ 89 ರನ್ ಸಿಡಿಸುವ ಮೂಲಕ ಪಂದ್ಯವನ್ನು ಗೆಲ್ಲಿಸಿದರು. ಭಾರತದ ಪರ ಅರ್ಶ್‌ದೀಪ್, ತಿಲಕ್ ವರ್ಮಾ ತಲಾ ಒಂದು ವಿಕೆಟ್ ಪಡೆದರೆ ಇನ್ನುಳಿದ ಬೌಲರ್‌ಗಳು ವಿಕೆಟ್ ಪಡೆಯಲು ಹರಸಾಹಸ ಪಟ್ಟರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಭಾರತ, ಸೂರ್ಯಕುಮಾರ್ ಯಾದವ್ (61), ತಿಲಕ್ ವರ್ಮಾ 27 ರನ್ ಗಳಿಸಿದ್ದು ಬಿಟ್ಟರೇ ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಹೆಚ್ಚು ರನ್ ಕಲೆ ಹಾಕುವಲ್ಲಿ ವಿಫಲರಾದರು. ವೆಸ್ಟ್ ಇಂಡೀಸ್ ಪರ ರೊಮಾರಿಯೋ ಶೆಫರ್ಡ್ 4, ಜೇಸನ್ ಹೋಲ್ಡರ್, ಅಕೇಲ್ ಹೊಸೈನ್ ತಲಾ 2 ವಿಕೆಟ್ ಪಡೆದರೆ, ರೋಸ್ಟನ್ ಚೇಸ್ ಒಂದು ವಿಕೆಟ್ ಪಡೆದರು. ಶೆಫರ್ಡ್ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಜೆಪಿ ಸರ್ಕಾರದಿಂದ ದೇಶದ ಆರೋಗ್ಯ ವ್ಯವಸ್ಥೆ ರೋಗಗ್ರಸ್ತ



ಎಐಸಿಸಿ ಅಧ್ಯಕ್ಷ ಖರ್ಗೆ ವಾಗ್ದಾಳಿ

ನವದೆಹಲಿ, ಆ.13– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಏಮ್ಸ್‌ನಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆಯನ್ನೊಳಗೊಂಡಂತೆ ಇಡೀ ದೇಶದ ಆರೋಗ್ಯ ವ್ಯವಸ್ಥೆಯನ್ನು ರೋಗಗ್ರಸ್ತವನ್ನಾಗಿ ಮಾಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ದೇಶದಲ್ಲಿನ 19 ಏಮ್ಸ್‌ಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ ಇರುವ ಕುರಿತು ಮಾಧ್ಯಮಗಳ ವರದಿಯನ್ನು ಉಲ್ಲೇಖಿಸಿದ ಖರ್ಗೆ, ಜನರು ಈಗ ಜಾಗೃತರಾಗಿದ್ದು ಮೋದಿ ನೇತೃತ್ವದ ಸರ್ಕಾರಕ್ಕೆ ವಿದಾಯದ ಕಾಲ ಸನ್ನಿಹಿತವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಲೂಟಿ ಮತ್ತು ಜುಮ್ಲಾಗಳು ದೇಶವನ್ನು ಅನಾರೋಗ್ಯಕ್ಕೀಡು ಮಾಡಿವೆ ಮೋದಿ ಅವರು ದೇಶದ ಹಲವೆಡೆ 'ಏಮ್ಸ್'ಗಳನ್ನು ಸ್ಥಾಪಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಆದರೆ, ಅವರ ಪ್ರತಿ ಮಾತಿನಲ್ಲೂ ಸುಳ್ಳೇ ಅಡಗಿದೆ. ಸತ್ಯ ಏನೆಂದರೆ ಏಮ್ಸ್‌ಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ತೀವ್ರ ಕೊರತೆ ಇದೆ ಎಂದು 'ಎಕ್ಸ್'ನಲ್ಲಿ (ಟ್ವಿಟ್ಟರ್) ಖರ್ಗೆ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ನಿಮ್ಮ ಸಂವೇದನಾ ಶೂನ್ಯತೆಯಿಂದ ಹಿಡಿದು ಆಯುಷ್ಮಾನ್ ಭಾರತದವರೆಗೆ ಅನೇಕ ಹಗರಣಗಳು ನಡೆದವು. ನಿಮ್ಮ ನೇತೃತ್ವದ ಸರ್ಕಾರವು ಇಡೀ ದೇಶದ ಆರೋಗ್ಯ ವ್ಯವಸ್ಥೆಯನ್ನೇ ರೋಗಗ್ರಸ್ತವನ್ನಾಗಿ ಮಾಡಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ಮಾಂಡವಿಯಾ ಪ್ರತಿಕ್ರಿಯೆ: ಖರ್ಗೆ ಅವರ ಆರೋಪಕ್ಕೆ 'ಎಕ್ಸ್'ನಲ್ಲಿ ಸರಣಿಯಲ್ಲಿ ತಿರುಗೇಟು ನೀಡಿರುವ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ, ಕಾಂಗ್ರೆಸ್ ಅವಧಿಯಲ್ಲಿ ದೇಶದಲ್ಲಿ ಒಂದೇ ಏಮ್ಸ್ ಇತ್ತು. ಆದರೆ, ಮೋದಿ ನೇತೃತ್ವದ ಸರ್ಕಾರದಲ್ಲಿ 15 ಏಮ್ಸ್‌ಗಳನ್ನು ಆರಂಭಿಸಲಾಗಿದೆ ಎಂದಿದ್ದಾರೆ.

ನಮ್ಮ ಉದ್ದೇಶಗಳು ಶುದ್ಧ ಮತ್ತು ಸ್ಪಷ್ಟ ನೀವು ವಾಸ್ತವವನ್ನು ಅರ್ಥಮಾಡಿಕೊಳ್ಳುತ್ತೀರಿ ಎಂದು ನಾನು ನಿರೀಕ್ಷಿಸುತ್ತೇನೆ. ಕಾಂಗ್ರೆಸ್‌ನ 50 ವರ್ಷಗಳ ಆಡಳಿತದಲ್ಲಿ ಒಂದು ಏಮ್ಸ್ ಮಾತ್ರ ಆರಂಭವಾಗಿತ್ತು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಅಧಿಕಾರಾವಧಿಯಲ್ಲಿ ಆರು ಏಮ್ಸ್‌ಗಳನ್ನು ಸ್ಥಾಪಿಸಲಾಗಿತ್ತು ಈಗ ಮೋದಿ ಅವರ ಅವಧಿಯಲ್ಲಿ 15 ಹೊಸ ಏಮ್ಸ್‌ಗಳನ್ನು ಆರಂಭಿಸಲಾಗಿದೆ ಎಂದು ವಿವರಿಸಿದ್ದಾರೆ. ಯುಪಿಎ ಅವಧಿಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಮಾಡಿರುವ ಯಾವುದಾದರೂ ಒಂದು ಸಾಧನೆಯನ್ನು ತಿಳಿಸಿ ಎಂದೂ ಖರ್ಗೆ ಅವರಿಗೆ ಮಾಂಡವಿಯಾ ಸವಾಲು ಹಾಕಿದ್ದಾರೆ.

ಚಿತ್ರನಟ ಉಪೇಂದ್ರ ಹೇಳಿಕೆ ಸಂವಿಧಾನಕ್ಕೆ ಮಾಡಿದ ಅಪಚಾರ



ಡಾ.ಮಹದೇವಪ್ಪ

ಮೈಸೂರು,ಆ.13(ಪಿಎಂ)– ನಟ, ನಿರ್ದೇಶಕ ಉಪೇಂದ್ರ ಮಾತನಾಡುವ ಭರದಲ್ಲಿ ಪರಿಶಿಷ್ಟ ಸಮುದಾಯ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿರುವ ಸಂಬಂಧ ಮೈಸೂರಲ್ಲಿ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಇದು ಸಂವಿಧಾನಕ್ಕೆ ಮಾಡಿದ ಅಪಚಾರ ಎಂದು ಖಂಡಿಸಿದರು.

ಉಪೇಂದ್ರ ಖ್ಯಾತ ನಟರು, ನಿರ್ದೇಶಕರು. ಸಾಮಾನ್ಯವಾಗಿ ಭಾರತದ ಚರಿತ್ರೆ, ಸಾಮಾಜಿಕ–ಸಾಂಸ್ಕೃತಿಕ ಬದುಕಿನ ಅರಿವು ಅವರಿಗೆ ಇದೆ ಎಂದು ತಿಳಿದುಕೊಂಡಿದ್ದೇನೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿವೆ. ಈ ಸಂದರ್ಭದಲ್ಲಿ ಜಾತಿ ಹೆಸರಿನಲ್ಲಿ ಆಕ್ಷೇಪಾರ್ಹ ಪದ ಬಳಕೆ ಮಾಡಿರುವುದು ಸಂವಿಧಾನಕ್ಕೆ ಮಾಡಿದ ಅಪಚಾರ. ಇದನ್ನು ಧಿಕ್ಕರಿಸುತ್ತೇನೆ ಎಂದು ತಿಳಿಸಿದರು. ಮೈಸೂರು ವಿವಿಗೆ ಕುಲಪತಿಗಳ ನೇಮಕ ಮಾಡುವಂತೆ ಒತ್ತಾಯ ಕೇಳಿ ಬರುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಖಾಯಂ ಕುಲಪತಿಗಳ ನೇಮಕದ ವಿಚಾರದಲ್ಲಿ ಹಿರಿಯರನ್ನು ಪರಿಗಣಿಸಬೇಕಿದೆ. ಆದಷ್ಟು ಶೀಘ್ರದಲ್ಲಿ ಸರ್ಕಾರ ಕ್ರಮ ವಹಿಸಲಿದೆ ಎಂದರು.

ಮನೆ ಮನೆಗೆ ಶ್ರಾವಣ ಮಾಸದ ಸಂದೇಶ



ಮೈಸೂರು, ಆ.13(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ವತಿಯಿಂದ ಸೆಪ್ಟೆಂಬರ್ 15ರವರೆಗೆ 'ಮನೆ ಮನೆಗೆ ಶ್ರಾವಣ ಮಾಸದ ಸಂದೇಶ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಮ.ಗು. ಸದಾನಂದಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.16ರ ಸಂಜೆ 5.30ಕ್ಕೆ ವಿಜಯನಗರ 4ನೇ ಹಂತದ ಟೆಂಪಲ್ ಟ್ರೀ ಅಪಾರ್ಟ್‌ಮೆಂಟ್‌ನಲ್ಲಿನ ಮುಕ್ತ ಎಸ್. ಪ್ರಸನ್ನಕಾಶಿ ಅವರ ನಿವಾಸದಲ್ಲಿ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಕಾರ್ಯಕ್ರಮ ಉದ್ಘಾಟಿಸಿ, ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ ಎಂದರು.

ಈ ರೀತಿಯ 2 ಸಾವಿರ ಪ್ರತಿಗಳನ್ನು ಮನೆ ಮನೆಗೆ ತಲುಪಿಸಲಾಗುವುದು. ಇವು ಪ್ರತ್ಯೇಕ ವಚನಗಳ ಕೃತಿಗಳಾಗಿವೆ. ಬಸವಾದಿ ಶರಣ ವಚನಗಳ ವಾಚ್ಯಾರ್ಥವನ್ನೂ ಇವು ಒಳಗೊಂಡಿವೆ. ಶರಣರ ತತ್ವದ ಮೇಲೆ ಬೆಳಕು ಚೆಲ್ಲುವ ಕಾರ್ಯಕ್ರಮ ಇದಾಗಿದ್ದು, ಸೆ.31ರಂದು ಸಂಜೆ 5.30ಕ್ಕೆ ಕುವೆಂಪುನಗರ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಜಯಾಗೌಡ ಪ್ರಾಯೋಜಕತ್ವದಲ್ಲಿ ಕಾರ್ಯಕ್ರಮ ಸಮಾರೋಪಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ನಗರದ ಕಾಲೇಜು ವಿದ್ಯಾರ್ಥಿಗಳಿಗಾಗಿ ವಚನ ಸಾಹಿತ್ಯ–ಜೀವನ ಮೌಲ್ಯ ವಿಷಯ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದ್ದು, ಹೆಚ್ಚಿನ ಮಾಹಿತಿಗೆ ದೂ. 95355 00538 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಟಿ.ಎಸ್.ಕುಮಾರಸ್ವಾಮಿ, ಜಯಾಗೌಡ, ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಡಾ.ಮುದ್ದುಮಲ್ಲೇಶ್ ಉಪಸ್ಥಿತರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ಸಾವು, ಮತ್ತೋರ್ವ ಗಂಭೀರ

ಮೈಸೂರು, ಆ.13(ಎಂಕೆ)– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಕಾನ್‌ಸ್ಟೆಬಲ್ ಗಂಭೀರವಾಗಿ ಗಾಯಗೊಂಡಿರುವುದಾಗಿ ವರದಿಯಾಗಿದೆ.

ಇಬ್ಬರು ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್‌ಗಳು ಭಾನುವಾರ ರಾತ್ರಿ 10 ಗಂಟೆ ಸುಮಾರಿಗೆ ನಗರದ ಲಲಿತ ಮಹಲ್ ರಸ್ತೆ ಕಡೆಯಿಂದ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಲಲಿತಾದ್ರಿಪುರಕ್ಕೆ ಹೋಗುವ ಮಾರ್ಗದ ಬಳಿ ಎದುರಿನಿಂದ ಅತೀ ವೇಗವಾಗಿ ಬಂದ ಕಾರು (ಮಹೀಂದ್ರಾ ಥಾರ್) ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಓರ್ವ ಕಾನ್‌ಸ್ಟೆಬಲ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಕಾನ್‌ಸ್ಟೆಬಲ್ ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸಿದ್ದಾರ್ಥನಗರ ಸಂಚಾರ ಠಾಣೆಯ ಪೊಲೀಸರು ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದಿದೆ.

ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈ ಸಂಬಂಧ ಸಿದ್ದಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಬಿನಿ ಹಿನ್ನೀರಲ್ಲಿ ಬೆಂಗಳೂರು ಐಟಿ ಉದ್ಯೋಗಿ ಜಲಸಮಾಧಿ



ಹೆಚ್.ಡಿ.ಕೋಟೆ,ಆ.13–ತಾಲೂಕಿನ ಭೀಮನಕೊಲ್ಲಿ ಶ್ರೀ ಮಹದೇಶ್ವರ ದೇವಾಲಯದ ಬಳಿ ವ್ಯಕ್ತಿಯೋರ್ವ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಕೇರಳ ಮೂಲದ ಭಿಜೋಯ್ (37) ಮೃತಪಟ್ಟ ವ್ಯಕ್ತಿ.

ಭಿಜೋಯ್ ಬೆಂಗಳೂರಿನಲ್ಲಿ ಐಟಿ ಉದ್ಯೋಗಿ. ಕುಟುಂಬದವರೊಂದಿಗೆ ಭೀಮನಕೊಲ್ಲಿಗೆ ಪ್ರವಾಸ ಬಂದಿದ್ದರು. ಭೀಮನಕೊಲ್ಲಿ ಗ್ರಾಮದಲ್ಲಿರುವ ಶ್ರೀ ಮಹದೇಶ್ವರ ದೇವಾಲಯಕ್ಕೆ ತೆರಳುವುದಕ್ಕೂ ಮುನ್ನ ಸಮೀಪದಲ್ಲಿದ್ದ ಕಬಿನಿ ಹಿನ್ನೀರಿನಲ್ಲಿ ಕಾಲು ತೊಳೆಯಲು ಹೋಗಿ ಆಯತಪ್ಪಿ ನೀರಿನಲ್ಲಿ ಬಿದ್ದಿದ್ದಾರೆ. ಈ ವೇಳೆ ಜೊತೆಯಲ್ಲಿದ್ದ ಗೆಳೆಯರು ಆತನನ್ನು ದಡಕ್ಕೆ ತಂದಿದ್ದಾರೆ. ಆ ವೇಳೆಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ನೀರು ಕುಡಿದಿದ್ದ ಕಾರಣ ಸರಗೂರಿನ ಸ್ವಾಮಿ ವಿವೇಕಾನಂದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ವೇಳೆ ಭೀಜೋಯ್ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೈಸೂರು ಮಿತ್ರ

ಇಂದಿನ ಶಾಸಕರಿಗೆ ಅಧ್ಯಯನ ಪ್ರವೃತ್ತಿ ಕೊರತೆ ಇದೆ

ಪ್ರಗತಿಪರ ಚಿಂತಕ ಪ್ರೊ.ಪಿ.ವಿ.ನಂಜರಾಜೇ ಅರಸ್ ಬೇಸರ

ಮಂಡ್ಯ, ಆ.13– ಈ ಹಿಂದೆ ಶಾಸನ ಸಭೆಗೆ ಆಯ್ಕೆಯಾಗುತ್ತಿದ್ದ ಜನಪ್ರತಿನಿಧಿಗಳಿಗೆ ಮೌಲ್ಯಾಧಾರಿತ ಗುಣಗಳು ಹಾಗೂ ಸದನದಲ್ಲಿ ನಿರರ್ಗಳವಾಗಿ ಮಾತನಾಡುವ ಚಾಣಾಕ್ಷತೆ ಇತ್ತು. ಆದರೆ ಪ್ರಸ್ತುತ ಶಾಸಕರಿಗೆ ಅಧ್ಯಯನದ ಪ್ರವೃತ್ತಿ ಕೊರತೆ ಇರುವುದರಿಂದ ಶಾಸನಸಭೆಯಲ್ಲಿ ಮೌಲ್ಯಯುತವಾಗಿ ಮಾತನಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ ಎಂದು ಪ್ರಗತಿಪರ ಚಿಂತಕ ಪ್ರೊ.ಪಿ.ವಿ. ನಂಜರಾಜೇಅರಸ್ ಬೇಸರ ವ್ಯಕ್ತಪಡಿಸಿದರು.

ಭಾನುವಾರ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಾಗರಿಕ ಸನ್ಮಾನ ಸಮಿತಿ ಹಾಗೂ ದೇವರಕಾಡು ಬಳಗದಿಂದ 2022ನೇ ಸಾಲಿನ ಕರ್ನಾಟಕ ವಿಧಾನಪರಿಷತ್‌ನ ಅತ್ಯುತ್ತಮ ಶಾಸಕ ಪ್ರಶಸ್ತಿ ಸ್ವೀಕರಿಸಿರುವ ಕೆ.ಟಿ.ಶ್ರೀಕಂಠೇಗೌಡ ಅವರಿಗೆ ಮಂಡ್ಯ ಜಿಲ್ಲೆ ಜನತೆಯ ಪರವಾಗಿ ಆಯೋಜಿಸಿದ್ದ ನಾಗರಿಕ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದಿನ ಶಾಸಕರು ಮಾಧ್ಯಮದ ಕ್ಯಾಮರಾಗಳ ಮುಂದೆ ಇತರೆ ಪಕ್ಷದವರನ್ನು ಮೂದಲಿಸುವುದು, ಮನಬಂದಂತೆ ಮಾತನಾಡುವುದನ್ನು ಬಿಟ್ಟರೆ ಸದನದಲ್ಲಿ ಗಂಟೆಗಟ್ಟಲೇ ನಿಂತು ಮಾತನಾಡುವ ಯೋಚನಾ ಲಹರಿ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಒಬ್ಬ ಜನಪ್ರತಿನಿಧಿ ತಾನು ಆಯ್ಕೆಯಾಗಿ ಬಂದ ಕ್ಷೇತ್ರಕ್ಕೆ ಹಾಗೂ ಜನಕ್ಕೆ ನ್ಯಾಯ ಒದಗಿಸಬೇಕು. ಅವರ ಸಮಸ್ಯೆಗಳನ್ನು ಆಲಿಸಿ, ಸದನದಲ್ಲಿ ಅವುಗಳಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಅಥವಾ ಸಂಬಂಧಪಟ್ಟ ಸಚಿವರನ್ನು ತನ್ನ ಭಾಷಣದ ಮೂಲಕ ಗಮನ ಸೆಳೆಯಬೇಕು. ಆಗ ಮಾತ್ರ ತಾನು ಶಾಸಕನಾಗಿರುವುದಕ್ಕೆ ಸಾರ್ಥಕ ಮನೋಭಾವ ಮೂಡಲಿದೆ ಎಂದು ಅಭಿಪ್ರಾಯಿಸಿದರು.



2 ಅವಧಿಗೆ ವಿಧಾನಪರಿಷತ್ ಸದಸ್ಯರಾಗಿ ಕೆ.ಟಿ.ಶ್ರೀಕಂಠೇಗೌಡರು ಸದನದಲ್ಲಿ ಹಲವು ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದರು. ಕೇವಲ ಅವರು ಆಯ್ಕೆಯಾಗಿ ಬಂದಿದ್ದ ಪದವೀಧರ ಕ್ಷೇತ್ರ ಮಾತ್ರವಲ್ಲದೇ ಜಿಲ್ಲೆಯ ರೈತರ ಸಮಸ್ಯೆ, ಮೈಷುಗರ್ ಸಮಸ್ಯೆ, ಕಬ್ಬು ಬೆಳೆಗಾರರ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ದನಿ ಎತ್ತಿದ್ದಾರೆ. ಅನೇಕ ಸಮಸ್ಯೆಗಳಿಗೆ ಸದನದಲ್ಲೇ ಶ್ರೀಕಂಠೇಗೌಡರ ಮೂಲಕ ಪರಿಹಾರ ಸಿಗುವಂತಾಗಿದೆ. ನಿಜಕ್ಕೂ ಅವರು ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಅರ್ಹರು.

-ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಕೆ.ಟಿ.ಶ್ರೀಕಂಠೇಗೌಡ 2 ಬಾರಿ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿ 12 ವರ್ಷ ಶಾಸನ ಸಭೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಶಿಕ್ಷಕ ವೃತ್ತಿ ಮೂಲಕ ವೃತ್ತಿ ಜೀವನ ಆರಂಭಿಸಿದ ಅವರು, ಅದೇ ಕಾರ್ಯ ಕ್ಷೇತ್ರಕ್ಕೆ ಒಳಪಡುವ ದಕ್ಷಿಣ ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿ, ಉಪನ್ಯಾಸಕರ ಹಾಗೂ ಶಿಕ್ಷಕರ ಸಮಸ್ಯೆಗಳ ಬಗ್ಗೆ ಸದನ ದಲ್ಲಿ ದನಿ ಎತ್ತಿದ್ದಾರೆ. ಅವರಿಗೆ ನ್ಯಾಯ ಒದಗಿಸಿಕೊಡುವ ಕೆಲಸ ಮಾಡಿದ್ದಾರೆ. ಇದು ಒಬ್ಬ ಜನಪ್ರತಿನಿಧಿಯಾಗಿ ತಾನು ಆಯ್ಕೆಯಾದ ಕ್ಷೇತ್ರಕ್ಕೆ ಒದಗಿಸಿಕೊಡುವ ನ್ಯಾಯವಾಗಿದೆ. ಜನಪ್ರತಿನಿಧಿಯಾಗಿ ಶ್ರೀಕಂಠೇಗೌಡ ಯಶಸ್ವಿಯಾಗಿ ತಮ್ಮ ಕೆಲಸ ನಿರ್ವಹಿಸಿದ್ದಾರೆ ಎಂದು ಬಣ್ಣಿಸಿದರು.

ಜೆಡಿಎಸ್ ಎಂಎಲ್‌ಸಿ ಆಗಿದ್ದ ಶ್ರೀಕಂಠೇಗೌಡರಿಗೆ ಬಿಜೆಪಿ ಸರ್ಕಾರ ಅತ್ಯುತ್ತಮ ಶಾಸಕ ಪ್ರಶಸ್ತಿ ಕೊಡುವುದು ಸಾಮಾನ್ಯ ವಿಷಯವಲ್ಲ. ಏಕೆಂದರೆ ಬಿಜೆಪಿ ಪಕ್ಷದಲ್ಲೇ ಹಲವು ಶಾಸಕರಿದ್ದರೂ ಪ್ರತಿಪಕ್ಷದ ಒಬ್ಬ ಶಾಸಕರಿಗೆ ಈ ಪ್ರಶಸ್ತಿ ಕೊಟ್ಟಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ. ಕೆ.ಟಿ. ಶ್ರೀಕಂಠೇಗೌಡರು ಪಕ್ಷಾತೀತವಾಗಿ ಒಬ್ಬ ಅತ್ಯುತ್ತಮ ಸಂಸದೀಯಪಟು ಎಂದು ಗುರುತಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಅವರಿಗೆ ಬಿಜೆಪಿ ಸರ್ಕಾರದಲ್ಲಿ ಪ್ರಶಸ್ತಿ ಘೋಷಣೆಯಾಗಿ ಕಾಂಗ್ರೆಸ್ ಸರ್ಕಾರದಲ್ಲಿ ಪ್ರಶಸ್ತಿ ದೊರೆತಿರುವುದು ನಿಜಕ್ಕೂ ಸಂತೋಷದ ವಿಚಾರ ಎಂದರು.

ಇದೇ ವೇಳೆ ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಭಾಜನರಾದ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರಿಗೆ ಮಂಡ್ಯ ಜನತೆ ಪರವಾಗಿ ನಾಗರಿಕ ಅಭಿನಂದನೆ ಸಲ್ಲಿಸಲಾಯಿತು. ಸಮಾರಂಭದಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀಪುರುಷೋತ್ತಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕರಾದ ಡಾ.ಕೆ. ಅನ್ನದಾನಿ, ಜಿ.ಬಿ.ಶಿವಕುಮಾರ್, ಎನ್.ಅಪ್ಪಾಜಿಗೌಡ, ನಿವೃತ್ತ ಪ್ರಾಂಶುಪಾಲ ಡಾ.ಎಸ್.ಬಿ. ಶಂಕರಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ರಾಜ್ಯ ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ, ಕೆ.ಟಿ.ಶ್ರೀಕಂಠೇಗೌಡರ ಪತ್ನಿ ಬಿ.ಎಂ.ವೀಣಾ ಉಪಸ್ಥಿತರಿದ್ದರು.

ಗ್ರಂಥಾಲಯ ಜ್ಞಾನ, ಸಂಸ್ಕಾರ ಬೆಳೆಸುವ ಕೇಂದ್ರ

ಅಗ್ರಹಾರಬಾಚಹಳ್ಳಿ ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್



ಕೆ.ಆರ್.ಪೇಟೆ, ಆ.13– ಗ್ರಂಥಾಲಯಗಳು ಉತ್ತಮ ಜ್ಞಾನ ಮತ್ತು ಸಂಸ್ಕಾರ ಬೆಳೆಸುವ ಕೇಂದ್ರಗಳಾಗಿವೆ ಎಂದು ಅಗ್ರಹಾರಬಾಚಹಳ್ಳಿ ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್ ತಿಳಿಸಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಪಟ್ಟಣದ ಗ್ರಂಥಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ ಉದ್ಘಾಟಿಸಿ, ವಿವಿಧ ದಿನಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಯಾವುದೇ ಸಾಧಕರ ಮೂಲ ಶಕ್ತಿ ಓದು ಎಂದ ಅವರು, ಭಾರತದ ಗ್ರಂಥಾಲಯ ಚಳವಳಿ ಜನಕ ಡಾ.ಎಸ್.ಆರ್.ರಂಗನಾಥನ್ ಹುಟ್ಟಿದ ದಿನದ ಅಂಗವಾಗಿ ದೇಶಾದ್ಯಂತ ಆ.12ರಂದು ಗ್ರಂಥಪಾಲಕರ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದರು.

ಗ್ರಂಥಾಲಯ ಸಹಾಯಕ ಕಲ್ಪನಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಂಥಾಲಯ ಸಹಾಯಕರಾದ ಹೊಸಹೊಳಲು ಮರೀಗೌಡ, ಚಂದ್ರು, ಓದುಗರ ವೇದಿಕೆ ಕಲ್ಯಾಣಪ್ಪ, ಮಂಜುನಾಥ್, ಪ್ರವೀಣ್, ಅರುಣ್, ಚಂದ್ರಶೇಖರ್ ಸೇರಿದಂತೆ ಹಲವರಿದ್ದರು.

ಹುಲಿಕೆರೆ ಗ್ರಾಪಂಗೆ ಶ್ವೇತಾ ಅಧ್ಯಕ್ಷೆ



ಶ್ರೀರಂಗಪಟ್ಟಣ, ಆ.13– ಹುಲಿಕೆರೆ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಡಿ.ಶ್ವೇತಾ, ಉಪಾಧ್ಯಕ್ಷರಾಗಿ ವೈರಮುಡಿ ಆಯ್ಕೆಯಾಗಿದ್ದಾರೆ.

ಒಟ್ಟು 20 ಸದಸ್ಯ ಬಲದ ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಡಿ. ಶ್ವೇತಾ, ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಂಜುಳಾ, ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ವೈರಮುಡಿ, ಬಂಗಾರಪ್ಪ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 12 ಮತ ಪಡೆದ ಶ್ವೇತಾ ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಮಂಜುಳಾ 7 ಮತ ಪಡೆದು ಪರಾಭವಗೊಂಡರು. ಒಂದು ಮತ ತಿರಸ್ಕೃತಗೊಂಡಿತು. ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 11 ಮತ ಪಡೆದ ವೈರಮುಡಿ ಉಪಾಧ್ಯಕ್ಷರಾದರೇ, 9 ಮತ ಪಡೆದ ಬಂಗಾರಪ್ಪ ಸೋಲನ್ನಪ್ಪಿದರು. ತಾಪಂ ಇಓ ವೀಣಾ ರಾಜೇಗೌಡ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಸಹಾಯಕ ಚುನಾವಣಾಧಿಕಾರಿಯಾಗಿ ಪಿಡಿಓ ನಟೇಶ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ, ಉಪಾಧ್ಯಕ್ಷರನ್ನು ಸದಸ್ಯರಾದ ಹರೀಶ್ ಕುಮಾರ್, ರಾಮು, ಕರೀಗೌಡ, ತಾ.ಯುವ ಕಾಂಗ್ರೆಸ್ ಮುಖಂಡ ಸಂಜಯ, ತಾಪಂ ಮಾಜಿ ಸದಸ್ಯ ಜಯರಾಂ, ಮುಖಂಡರಾದ ಕೃಷ್ಣ, ರಾಮಕೃಷ್ಣ, ಮಹದೇವ, ಚಂದ್ರು ಸೇರಿದಂತೆ ಇನ್ನಿತರರು ಅಭಿನಂದಿಸಿದರು.

ಬೇಬಿ ಮಠದಿಂದ ಅಕ್ಷರ, ಅನ್ನ ದಾಸೋಹ: ನಟಿ ಶ್ರುತಿ



ಚಿನಕುರಳಿ, ಆ.13– ಬೇಬಿ ಮಠ ಭಕ್ತರಿಗೆ ತವರು ಮನೆ ಇದ್ದಂತೆ. ಡಾ.ಶ್ರೀತ್ರಿನೇತ್ರ ಮಹಾಂತ ಸ್ವಾಮೀಜಿಗಳು ತೇಜಸ್ಸು, ಅಂತಃಕರಣದಲ್ಲಿ ತಂದೆ, ತಾಯಿ ಪ್ರೀತಿ ಕಾಣಬಹುದು ಎಂದು ಚಿತ್ರನಟಿ ಶ್ರುತಿ ತಿಳಿಸಿದರು.

ಇಲ್ಲಿನ ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ ಆವರಣದಲ್ಲಿ ನಡೆದ ಶ್ರೀಮರಿದೇವರು ಶಿವಯೋಗಿ ಸ್ವಾಮೀಜಿಗಳ 15ನೇ ಪುಣ್ಯಸ್ಮರಣೆ ಹಾಗೂ 7ನೇ ವರ್ಷದ ಮಹಾ ರಥೋತ್ಸವ ಮತ್ತು ತ್ರಿನೇತ್ರಶ್ರೀ ವಿರಚಿತ 'ಇದು ಅಂತರಂಗದ ಸುದ್ದಿ' ಮತ್ತು ಶಿವಮೂರ್ತಿ ಜುಪ್ತಿಮಠ ವಿರಚಿತ 'ಮಹಾಂತಮಯ' ಜೋಡಿಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಠ, ಗುರುಗಳು ಧರ್ಮ ಪ್ರಚಾರದ ಮೂಲಕ ಸಮಾಜವನ್ನು ತಿದ್ದಿ, ಉತ್ತಮ ಪ್ರಜೆಗಳನ್ನು ನೀಡುವ ಕೆಲಸ ಮಾಡುತ್ತಿವೆ. ಶಿವಕುಮಾರ ಸ್ವಾಮೀಜಿಗಳು ಅನ್ನದ ಜೊತೆಗೆ ಜ್ಞಾನ ದಾಸೋಹ ನೀಡಿದ್ದರು. ಅದೇ ರೀತಿ ಬೇಬಿಮಠ, ಚಂದ್ರವನ ಆಶ್ರಮ ಸಹ ಅನ್ನ ಜೊತೆಗೆ ಅಕ್ಷರ ದಾಸೋಹ ನೀಡುತ್ತಿದೆ. ನಾವು ಗೋವು ಆಧಾರಿತ ಕೃಷಿಯತ್ತ ಮುಖ ಮಾಡಬೇಕು. ಸಮಾಜದಲ್ಲಿ ಎದುರಾಗುವ ಟೀಕೆ ಟಿಪ್ಪಣಿಗಳನ್ನು ಎದುರಿಸಲು ಸಿದ್ಧರಾಗಬೇಕು, ಅರಸಿ ಸಾಧನೆ ಮಾಡುವುದಕ್ಕಿಂತ ಅವಮಾನಕ್ಕೆ ಒಳಗಾಗಿ ಸಾಧನೆ ಮಾಡಿರುವವರೇ ಹೆಚ್ಚು ಎಂದರು.

ಬ್ಯಾಡಗಿ ಶಾಸಕ ಬಸವರಾಜ್ ನೀಲಪ್ಪ ಶಿವಣ್ಣ ಮಾತನಾಡಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಮರಿದೇವರು ಶ್ರೀಗಳು ಈ ಭಾಗದ ನಡೆದಾಡುವ ದೇವರಾಗಿದ್ದರು. ಜಿಪಂ ಸದಸ್ಯನಾಗಿದ್ದ ನಾನು ಅವರ ಆಶೀರ್ವಾದದಿಂದ ಶಾಸಕನಾದೆ. ಬಳಿಕ 2006ರಲ್ಲಿ ಬೇಬಿಬೆಟ್ಟದಲ್ಲಿ 155 ಜೋಡಿ ಸರಳ ಸಾಮೂಹಿಕ ವಿವಾಹ ನಡೆಸಿದ್ದು, ಕ್ಷೇತ್ರವನ್ನು ಮಾದರಿಯಾಗಿಸಲು ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. 2024ಕ್ಕೆ ನಡೆಯುವ ಮರೀದೇವರು ಶ್ರೀಗಳ 135ನೇ ಜಯಂತಿ ಹಾಗೂ ತ್ರಿನೇತ್ರ ಸ್ವಾಮೀಜಿ ಅವರ 25ನೇ ಪಟ್ಟಾಭಿಷೇಕ ಕಾರ್ಯಕ್ರಮ ನಡೆಸಲು ಭಕ್ತರಿಂದ ವಂತಿಕೆ ಕ್ರೋಢಿಕರಿಸಲಾಗುತ್ತಿದ್ದು, ಭಕ್ತರು ಸಹಕರಿಸಬೇಕು ಎಂದರು.

ಡಾ.ಶ್ರೀತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ 'ಇದು ಅಂತರಂಗದ ಸುದ್ದಿ' ಮತ್ತು 'ಮಹಾಂತಮಯ' ಕನ್ನಡ ಜೋಡಿಕೃತಿಯನ್ನು ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಹಾಗೂ ಆಂಗ್ಲ ಕೃತಿಯನ್ನು ಶಾಸಕ ಬಸವರಾಜ್ ನೀಲಪ್ಪ ಶಿವಣ್ಣ ಬಿಡುಗಡೆಗೊಳಿಸಿದರು. ಇದೇ ವೇಳೆ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಭೋದಿವೃಕ್ಷ ಪತ್ರಿಕೆ ಬಿಡುಗಡೆ ಮಾಡಲಾಯಿತು. ಇದಕ್ಕೂಮುನ್ನಾ ಮಠದ ಆವರಣದಲ್ಲಿ ಮರಿದೇವರುಶ್ರೀಗಳ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಮುಡುಕುತೊರೆ ತೋಪಿನಮಠದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು.

ಸಮಾರಂಭದಲ್ಲಿ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಅಭಿನವಕಾಡು ಸಿದ್ದೇಶ್ವರ ಸ್ವಾಮೀಜಿ, ನಂದೀಶ್ವರ ದೇವರು ಸ್ವಾಮೀಜಿ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮೂಡಾ ಆಯುಕ್ತೆ ಆರ್.ಐಶ್ವರ್ಯ, ಚಿತ್ರನಟ ಆದಿಲೋಕೇಶ್, ಜಲಮಹಲ್ ರೆಸಾರ್ಟ್ ಮಾಲೀಕ ಮಹೇಶ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನಾಳೆ ಸ್ವಾತಂತ್ರ್ಯ ದಿನಾಚರಣೆ

ಮಂಡ್ಯ, ಆ.13– ಜಿಲ್ಲಾಡಳಿತ ದಿಂದ ಆ.15ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿದೆ



ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಧ್ವಜಾರೋಹಣ ಹಾಗೂ ಸ್ವಾತಂತ್ರ್ಯೋತ್ಸವ ಸಂದೇಶ ನೀಡಲಿದ್ದಾರೆ. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರ ಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ. ಮಂಜು, ಕೆ.ಎಂ.ಉದಯ್ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಪಿ.ಸಿ.ಜಾಫರ್ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

ಜಯಲಕ್ಷ್ಮಮ್ಮ ನಿಧನ



ಕೆಆರ್.ಪೇಟೆ, ಆ.13– ಪಟ್ಟಣದ ನೇಕಾರ ತೊಗಟವೀರ ಸಮಾಜದ ಮುಖಂಡ ಲೇ.ಶಿವಣ್ಣ ಅವರ ಪತ್ನಿ ಜಯಲಕ್ಷ್ಮಮ್ಮ (75) ಭಾನುವಾರ ಸಂಜೆ ನಿಧನರಾದರು. ಮೃತರು ವಿದ್ಯಾರ್ಥಿ ಭಂಡಾರ್ ಸುರೇಶ್, ಬೇಕರಿ ಉದ್ಯಮಿ ಆನಂದ್ ಸೇರಿದಂತೆ ಮೂವರು ಪುತ್ರರು, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆ.14ರಂದು ಬೆಳಗ್ಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಗ್ಯಾರಂಟಿ ಜನೋತ್ಸವದ ಅವಲೋಕನ ಕಾರ್ಯಕ್ರಮ

ಶೇ.80ರಷ್ಟು ಜನ ಸರ್ಕಾರದ ಗ್ಯಾರಂಟಿ ಪರವಾಗಿದ್ದಾರೆ

ಹಿರಿಯ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಅಭಿಮತ

ಮೈಸೂರು, ಆ.13(ಪಿಎಂ)– ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಸಾಮಾನ್ಯ ಜನರಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ಬಡ ಜನರು, ಮಹಿಳೆಯರು, ಕಾರ್ಮಿಕರು ಸೇರಿದಂತೆ ಶೇ.80ರಷ್ಟು ಜನವರ್ಗ ಗ್ಯಾರಂಟಿ ಪರವಾಗಿದೆ ಎಂದು ತಿಳಿಸಿದ ರಾಜಕೀಯ ವಿಶ್ಲೇಷಕರೂ ಆದ ಹಿರಿಯ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಜಾತಿ–ಧರ್ಮಗಳ ನಡುವೆ ದ್ವೇಷ ಬಿತ್ತಿ ರಾಜಕೀಯ ಲಾಭ ಪಡೆಯುವವರು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಪ್ರಯುಕ್ತ 'ದಿ ಇಂಡಿಯನ್ ಪೊಲಿಟಿಕಲ್ ಲೆಜೆಂಡ್ ಶ್ರೀ ಸಿದ್ದರಾಮಯ್ಯ @ 76ರ ಸಂಭ್ರಮದಲ್ಲಿ ಕಾಂಗ್ರೆಸ್ ಗ್ಯಾರಂಟಿ ಜನೋತ್ಸವದ ಅವಲೋಕನ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಗ್ಯಾರಂಟಿಗಳ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಿದೆ. ಹಲವು ಮಂದಿ ಇದನ್ನು ಬಿಟ್ಟಿ ಯೋಜನೆ ಎನ್ನುತ್ತಿದ್ದು, ಪ್ರಧಾನಿಯವರೂ ಟೀಕಿಸಿದ್ದಾರೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಯಾವುದೇ ಯೋಜನೆಗಳು ಬಿಟ್ಟಿಯಲ್ಲ. ಈ ವ್ಯವಸ್ಥೆಯಲ್ಲಿ ಸಿದ್ದರಾಮಯ್ಯ ಸೇರಿದಂತೆ ಯಾರೇ ಇದ್ದರೂ ತಮ್ಮ ಸ್ವಂತ ಹಣವನ್ನು ಪ್ರಜೆಗಳಿಗೆ ಕೊಡುವುದಿಲ್ಲ. ಅದು ಪ್ರಜೆಗಳದ್ದೇ ಹಣ, ಅದನ್ನು ಅವರಿಗಾಗಿಯೇ ವೆಚ್ಚ ಮಾಡುವುದಾಗಿದೆ. ಆದ್ದರಿಂದ ಬಿಟ್ಟಿ ಎಂದು ಹೇಳುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು.

ಜನತೆಗೆ ಪೌಷ್ಟಿಕತೆ ಹಾಗೂ ಜೀವನ ಮಟ್ಟ ಹೆಚ್ಚಿಸಿ, ಅವರ ಆರೋಗ್ಯ ಸುಧಾರಿಸುವುದು ಕೂಡ ಸರ್ಕಾರದ ಕರ್ತವ್ಯ ಎಂದು ಸಂವಿಧಾನ ಹೇಳುತ್ತದೆ. ಈ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅದನ್ನೇ ಮಾಡಿದೆ. ಹಾಗಾಗಿ ಈ ಗ್ಯಾರಂಟಿ ಯೋಜನೆಗಳ ಜಾರಿಯು ಸಂವಿಧಾನಬದ್ಧ ಕರ್ತವ್ಯ. ಜನರಿಗೆ ಕತ್ತಿ, ತ್ರಿಸೂಲಗಳನ್ನು ಹಂಚುವುದು, ಜಾತಿ–ಧರ್ಮಗಳ ನಡುವೆ ದ್ವೇಷ ಬಿತ್ತಿ ರಾಜಕೀಯ ಲಾಭ ಪಡೆಯುವುದು, ಮಹಿಳೆಯರು ಮತ್ತು ದಲಿತರ ಮೇಲೆ ದೌರ್ಜನ್ಯ ನಡೆಸುವ ದುಷ್ಕೃತ್ಯಗಳನ್ನು ನಡೆಸುವವರು ಗ್ಯಾರಂಟಿ ಯೋಜನೆಗಳನ್ನು ನಿಂದಿಸುತ್ತಿದ್ದಾರೆ. ಅದಕ್ಕಾಗಿ ಮೈಸೂರಿನಲ್ಲಿರುವ ನಕಲಿ ಸಿಂಹಗಳು ಸೇರಿದಂತೆ ದೊಡ್ಡ ಗ್ಯಾಂಗ್ ಇದೆ. ಇವರಿಗೆ ಇದೇ ಕೆಲಸ ಎಂದು ಖಂಡಿಸಿದರು.

> “ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಅಭಿವೃದ್ಧಿ ಹಾಗೂ ನಾಡಿನ ಜನತೆಯ ಶ್ರೇಯೋಭಿವೃದ್ಧಿಗೆ ಸಾದ ದುಡಿಯುತ್ತಿದ್ದಾರೆ. ಅವರ ನೇತೃತ್ವದಲ್ಲಿ ಜಾರಿಯಾದ ಗ್ಯಾರಂಟಿಗಳು ಫಲಾನುಭವಿಯ ಕುಟುಂಬಗಳು ಆರ್ಥಿಕ ಸ್ವಾವಲಂಭನೆ ಸಾಧಿಸಲಿವೆ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಕೆಲಸವನ್ನು ಪಕ್ಷದ ಕಾರ್ಯಕರ್ತರು ಪರಿಣಾಮಕಾರಿಯಾಗಿ ಮಾಡಬೇಕು.
>
> –ಡಾ.ಹೆಚ್.ಸಿ.ಮಹದೇವಪ್ಪ

ಪ್ರಧಾನ ಮಂತ್ರಿಯವರು ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎಂದು ಟೀಕಿಸಿದ್ದರು. ಅದಕ್ಕೆ ಸಿದ್ದರಾಮಯ್ಯನವರು ಉತ್ತರ ನೀಡಿದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಪ್ರಣಾಳಿಕೆಯಲ್ಲಿ ದೊಡ್ಡದಾಗಿ ಮೋದಿಯವರ ಫೋಟೋದೊಂದಿಗೆ ವರ್ಷದಲ್ಲಿ ಮೂರು ಹಬ್ಬಗಳಿಗೆ ಗ್ಯಾಸ್ ಸಿಲಿಂಡರ್ ಉಚಿತವಾಗಿ ಕೊಡುತ್ತೇವೆ ಪ್ರಕಟಿಸಲಾಗಿದೆ. ನರೇಂದ್ರ ಮೋದಿಯವರು ಈ ಪ್ರಣಾಳಿಕೆಯನ್ನು ಒಪ್ಪಿದ್ದಾರೆ. ಅದಾಗ್ಯೂ ಈಗ ಗ್ಯಾರಂಟಿ ವಿರೋಧಿಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು. ಕೇಂದ್ರ ಸರ್ಕಾರದಲ್ಲೂ ಈ ರೀತಿಯ ಉಚಿತ ಯೋಜನೆಗಳಿವೆ ಇವೆ. ಅವುಗಳಿಗೆ ಲಕ್ಷಾಂತರ ಕೋಟಿ ವೆಚ್ಚ ಮಾಡಬೇಕಿದೆ. ಕಿಸಾನ್ ಸಮ್ಮಾನ್ ಯೋಜನೆಯಡಿ ಹಣ ಕೊಡುವುದು ಮೋದಿಯವರ ಪ್ರಕಾರ ಅವರ ಗ್ಯಾರಂಟಿ ಬಗೆಗಿನ ಲೇವಡಿ ವ್ಯಾಪಿಗೆ ಬರುವುದಿಲ್ಲವೇ? ಈ ಇಬ್ಬಗೆಯ ನೀತಿಯನ್ನು ಕಾಂಗ್ರೆಸ್ ಕಾರ್ಯಕರ್ತರು ಪ್ರಶ್ನಿಸಬೇಕು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಶಬ್ದದಲ್ಲೇ ಹೇಳುವುದಾದರೆ, ಬಿಜೆಪಿಯವರಿಗೆ ಧಮ್ಮ–ತಾಕತ್ತು ಇದ್ದರೆ ನಾವು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತೇವೆ ಎಂದು ಪ್ರಕಟಿಸಿ ಮುಂದಿನ ಲೋಕಸಭಾ ಚುನಾವಣೆ ಎದುರಿಸಬೇಕೆಂದು ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಬೇಕು ಎಂದರು.

ಸಮಾಜದ ಪರವಾಗಿ ಇರದ ಶ್ರೀಮಂತರು, ಉದ್ಯಮಿಗಳು ಗ್ಯಾರಂಟಿಗಳನ್ನು ವಿರೋಧಿಸುತ್ತಿದ್ದಾರೆ. ಇದರ ಅನುಷ್ಠಾನಕ್ಕೆ ವಾರ್ಷಿಕ 52 ಸಾವಿರ ಕೋಟಿ ವಿನಿಯೋಗಿಸಬೇಕೆಂದು ಅಂದಾಜಿಸಲಾಗಿದೆ. ಹಾಗಾಗಿ ಇದರಿಂದ ಸರ್ಕಾರದ ಬೊಕ್ಕಸ ಖಾಲಿಯಾಗುತ್ತದೆ ಎಂದು ಕೆಲವರು ವಾದಿಸುತ್ತಿದ್ದಾರೆ. ಪ್ರಸಕ್ತ ಸಾಲಿನ ಬಜೆಟ್ ಒಟ್ಟು 3.27 ಲಕ್ಷ ಕೋಟಿ ಇದ್ದು, ಇದನ್ನು 8 ತಿಂಗಳಿಗೆ ಮಾತ್ರ ನಿಗದಿ ಮಾಡಲಾಗಿದೆ. ಹಾಗಾಗಿ ಗ್ಯಾರಂಟಿಗಳಿಂದ ಯಾವುದೇ ಅಭಿವೃದ್ಧಿ ಯೋಜನೆಗಳು ಕುಂಠಿತವಾಗಲು ಸಾಧ್ಯವಿಲ್ಲ. ಸರ್ಕಾರದ ಬೊಕ್ಕಸ ಖಾಲಿಯಾಗುತ್ತದೆ ಎಂಬುದು ಸುಳ್ಳು ಹಾಗೂ ಅಪಪ್ರಚಾರವಾಗಿದೆ ಎಂದು ದೂರಿದರು. ಕರ್ನಾಟಕದಲ್ಲಿ ಮಾಸಿಕ 10 ಸಾವಿರಕ್ಕಿಂತಲೂ ಕಡಿಮೆ ಆದಾಯ ಪಡೆಯುವ ಜನಸಂಖ್ಯೆ ಶೇ.50ರಷ್ಟಿದ್ದು, ಈ ಜನತೆಗೆ ಗ್ಯಾರಂಟಿ ನೇರ ಪ್ರಯೋಜನ ದೊರೆಯಲಿದೆ. ಇದರಲ್ಲಿ 40 ಪರ್ಸೆಂಟ್ ಕಮಿಷನ್ ಏನಿಲ್ಲ ಎಂದು ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ಮೀನು ಕೊಡುವುದಲ್ಲ, ಬದಲಿಗೆ ಮೀನು ಹಿಡಿಯುವುದನ್ನು ಕಲಿಸಬೇಕು' ಎಂಬ ಆಕರ್ಷಕ ಜಪಾನಿ ಗಾದೆ ಇದೆ. ಆದರೆ ಮೀನು ಹಿಡಿಯಲು ಶಕ್ತಿ ಬೇಕಾಗುತ್ತದೆ. ಹಾಗಾಗಿ ಒಬ್ಬ ಮೀನು ಹಿಡಿಯುವುದನ್ನು ಕಲಿಯುವ ಮೊದಲು ಅವನ ಬಲವರ್ಧನೆಯಾಗಬೇಕು. ಇದು ಗ್ಯಾರಂಟಿಯ ಪರಿಕಲ್ಪನೆಯಾಗಿದೆ. ಭಾರತದ ವ್ಯವಸ್ಥೆಯಲ್ಲಿ ತಳವರ್ಗದಿಂದ ಆರ್ಥಿಕ ಬಲ ತುಂಬಬೇಕು ಎಂದು ಹೇಳಿದರು.

ದಂತಕಥೆ: ಮುಂದಿನ ತಲೆಮಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಂದು ದಂತಕಥೆಯಾಗಲಿದ್ದಾರೆ. ಸಿದ್ದರಾಮಯ್ಯನವರ ಎಲ್ಲಾ ಕಾರ್ಯಕ್ರಮಗಳನ್ನು ನೋಡಿದರೆ ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾ ಸಿದ್ಧಾಂತಗಳು ನೆನಪಾಗುತ್ತವೆ. ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಪೀಠಿಕೆಗಳನ್ನು ಓದಿದರೆ, ಅದರ ಸುಳಿವು ಕಾಣಬಹುದು. ನಾಲ್ವಡಿ ಅವರಿಂದ ಹಿಡಿದು, ದೇವರಾಜ ಅರಸು ಅವರಿಂದ ಪ್ರಾರಂಭವಾಗಿ ಸಿದ್ದರಾಮಯ್ಯರ ಮೂಲಕ ಮುಂದುವರೆದಿರುವ ಸಾಮಾಜಿಕ ನ್ಯಾಯದ ಬಂಡಿ ಬಗ್ಗೆ ಮೈಸೂರಿನವರು ಹೆಮ್ಮೆ ಪಡಬೇಕು ಎಂದು ತಿಳಿಸಿದರು.

ಸಿದ್ದರಾಮಯ್ಯನವರು ಕ್ರಾಂತಿಕಾರಕ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಜಾರಿಗೆ ತರುವ ಮೂಲಕ ಸಾಮಾಜಿಕ ನ್ಯಾಯದ ರಥವನ್ನು ಮುಂದಕ್ಕೆ ಕೊಂಡೊಯ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಅದನ್ನೇ ಹೇಳಿದ್ದಾರೆ. ಆದರೆ ಇಂದು ರಾಷ್ಟ್ರದ ಬೆಳವಣಿಗೆ ನೋಡಿದರೆ ಸಾಮಾಜಿಕ ಪರಿವರ್ತನೆ ಚಕ್ರವನ್ನು ಹಿಂದಕ್ಕೆ ತಳ್ಳುವ ಪ್ರಯತ್ನ ನಡೆಯುತ್ತಿರುವುದು ಕಾಣುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಒಬ್ಬ ವ್ಯಕ್ತಿಯಲ್ಲ. ಅವರೊಂದು ಸಿದ್ಧಾಂತ. 2013ರಿಂದ ಈವರೆಗೆ ನಾನು ಅವರ ಜೊತೆಯಲ್ಲೇ ಇದ್ದೇನೆ. ಈ ಬಾರಿ ಯಾವುದೇ ಜವಾಬ್ದಾರಿ ಬೇಡವೆಂದು ಅವರಿಗೆ ನಾನೇ ಹೇಳಿದ್ದೆ. ಸೈದ್ಧಾಂತಿಕ ಸಹಮತ ಇರುವ ಕಾರಣಕ್ಕೆ ಅವರೊಂದಿಗೆ ಇದ್ದೇನೆ. ಬೇರೆ ಯಾವುದೇ ಅಪೇಕ್ಷೆ ನನಗಿಲ್ಲ ಎಂದರು. ತೆಂಗಿನ ಹೊಂಬಾಳೆ ಬಿಡಿಸುವ ಮೂಲಕ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್, ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಡಾ.ಅಕ್ಕಯ್ಯ ಪದ್ಮಾಶಾಲಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.



ಮೈಸೂರು ಕಾಂಗ್ರೆಸ್ ಭವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಪ್ರಯುಕ್ತ ಕಾಂಗ್ರೆಸ್ ಗ್ಯಾರಂಟಿ ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಮಂಥನ ಕಾರ್ಯಕ್ರಮವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತೆಂಗಿನ ಹೊಂಬಾಳೆ ಬಿಡಿಸುವ ಮೂಲಕ ಉದ್ಘಾಟಿಸಿದರು.

ರಾಷ್ಟ್ರ ಮಟ್ಟದಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಜಾರಿಗೆ ರಾಜ್ಯ ಬಿಜೆಪಿ ನಾಯಕರು ಪ್ರಧಾನಿಗಳ ಮನವೊಲಿಸಲಿ

ಮೈಸೂರು, ಆ.13(ಪಿಎಂ)– ಪರಿಶಿಷ್ಟರ ಕಲ್ಯಾಣಕ್ಕಾಗಿ ಈ ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯನವರು ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಜಾರಿಗೊಳಿಸಿದರು. ಇದೀಗ ಪರಿಶಿಷ್ಟರ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರುತ್ತಿರುವ ಬಿಜೆಪಿ ನಾಯಕರು, ಮೊದಲು ಪ್ರಧಾನಿ ನರೇಂದ್ರ ಮೋದಿಯವರ ಮನವೊಲಿಸಿ ರಾಷ್ಟ್ರ ಮಟ್ಟದಲ್ಲಿ ಇಂತಹ ಕಾಯ್ದೆ ಜಾರಿಗೊಳಿಸಲು ಮುಂದಾಗಲಿ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ತೀಕ್ಷ್ಣವಾಗಿ ಕುಟುಕಿದರು.

ದೇಶದಲ್ಲಿ ಇಂತಹ ಕಾಯ್ದೆ ಅನುಷ್ಠಾನಗೊಳಿಸಿ ದೇಶದಲ್ಲಿರುವ ಶೇ.25ರಷ್ಟು ಎಸ್‌ಸಿ–ಎಸ್‌ಟಿ ಜನಸಂಖ್ಯೆಗೆ ಕೇಂದ್ರ ಬಜೆಟ್‌ನಲ್ಲಿ 25ರಷ್ಟು ಹಣ ಮೀಸಲಿಟ್ಟು, ನಂತರ ರಾಜ್ಯ ಬಿಜೆಪಿ ನಾಯಕರು ಈ ಬಗ್ಗೆ ಮಾತನಾಡಬೇಕು ಎಂದು ಹೇಳಿದರು. ನಾನು ತೆರಿಗೆ ಕಟ್ಟುವುದು ಗ್ಯಾರಂಟಿಗಳಂತಹ ಉಚಿತ ಯೋಜನೆಗಳಿಗಾಗಿ ಅಲ್ಲ ಎಂದು ಇತ್ತೀಚೆಗೆ ಇನ್ಫೋಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ಮೋಹನ್ ದಾಸ್ ಪೈ ಟೀಕಿಸಿದ್ದಾರೆ. ವಾಟ್ಸಾಪ್ ಯೂನಿವರ್ಸಿಟಿಯ ಅಶಿಕ್ಷಿತ ಭಕ್ತ ಹೀಗೆ ಹೇಳಿದ್ದರೆ ಅದನ್ನು ಮರೆತು ಬಿಡಬಹುದಿತ್ತು. ಆದರೆ ಇವರು ಆರ್ಥಿಕ ತಜ್ಞರೂ ಹೌದು. ಇಂತಹವರು ಹೀಗೆ ಬಾಲಿಶ ಹಾಗೂ ಆಧಾರರಹಿತ ಹೇಳಿಕೆ ನೀಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿರು. ಶೇ.33ರಷ್ಟು ಇದ್ದ ಕಾರ್ಪೋರೇಟ್ ಟ್ಯಾಕ್ಸ್ ಅನ್ನು ಮೋದಿ ಸರ್ಕಾರ ಶೇ.22ರಷ್ಟಕ್ಕೆ ಇಳಿಕೆ ಮಾಡಿದೆ. ಒಟ್ಟಾರೆ ಈವರೆಗೆ 4ರಿಂದ 5 ಲಕ್ಷ ಕೋಟಿಯನ್ನು ಈ ಕಾರ್ಪೋರೇಟ್ ಸಂಸ್ಥೆಗಳಿಗೆ ಧಾರೆ ಎರೆದುಕೊಡಲಾಗಿದೆ. ಅದರಲ್ಲಿ ಒಬ್ಬ ಫಲಾನುಭವಿಯಾಗಿದ್ದಾರೆ ಮೋಹನ್ ದಾಸ್ ಪೈ. ಇದು ಖಜಾನೆ ಲೂಟಿ ಎಂದು ಅನ್ನಿಸುವುದಿಲ್ಲವೇ? ಎಂದು ಪ್ರಶ್ನಿಸಿದರು.

ಕಾಡಾನೆ ದಾಳಿಗೆ ಟ್ರಾಕ್ಟರ್ ಚಾಲಕ ಬಲಿ

ಅರೆಕಾಡು ಪ್ರದೇಶದಲ್ಲಿ ದುರಂತ, ಗ್ರಾಮಸ್ಥರ ಆಕ್ರೋಶ



ಸಿದ್ದಾಪುರ, ಆ.13– ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಅರೆಕಾಡು ಗ್ರಾಮದ ನೇತಾಜಿ ನಗರದಲ್ಲಿ ಸಂಭವಿಸಿದ್ದು, ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಟ್ಟೆಮಾಡು ಗ್ರಾಮದ ಪರಂಬು ನಿವಾಸಿ ದೇವಪ್ಪ (58) ಮೃತ ದುರ್ದೈವಿ. ಅರೆಕಾಡು ಗ್ರಾಮದ ಕೃಷಿಕರೊಬ್ಬರ ಗದ್ದೆ ಹದ ಮಾಡಲೆಂದು ತಮ್ಮ ಟ್ರಾಕ್ಟರ್‌ನಲ್ಲಿ ಬಂದಿದ್ದ ಅವರು ಕೆಲಸ ಮುಗಿಸಿ ಮರಳುತ್ತಿದ್ದ ಸಂದರ್ಭದಲ್ಲಿ ಕಾಡಾನೆ ಏಕಾಏಕಿ ದಾಳಿ ಮಾಡಿದೆ. ದೇವಪ್ಪ ಅವರನ್ನು ಎಸೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟರು ಎಂದು ತಿಳಿದು ಬಂದಿದೆ.

ಬೆಳಗ್ಗೆಯಿಂದಲೇ ಗ್ರಾಮದಲ್ಲಿ ಓಡಾಡುತ್ತಿದ್ದ ಕಾಡಾನೆ ನೇತಾಜಿ ನಗರದ ಜನನಿಬಿಡ ಪ್ರದೇಶಕ್ಕೆ ಬಂದಾಗ ಜನರು ಬೊಬ್ಬೆ ಹಾಕಿ ತಪ್ಪಿಸಿಕೊಂಡಿದ್ದಾರೆ. ಅಲ್ಲಿಂದ ಕಾಲ್ಕಿತ್ತ ಕಾಡಾನೆ ದೇವಪ್ಪ ಅವರಿದ್ದ ಪ್ರದೇಶಕ್ಕೆ ನುಗ್ಗಿದೆ.

ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ಘಟನೆಗೆ ಕಾರಣವೆಂದು ಸ್ಥಳೀಯ ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಅಧಿಕಾರಿಗಳು ಗ್ರಾಮಸ್ಥರನ್ನು ಸಮಾಧಾನ ಪಡಿಸುವ ಯತ್ನ ಮಾಡಿದರು. ಅಲ್ಲದೆ 15 ಲಕ್ಷ ರೂ. ಪರಿಹಾರ ನೀಡುವುದಾಗಿ ಭರವಸೆ ನೀಡಿದರು. ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದರು. ಮೃತ ದೇಹವನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆಗೊಳಪಡಿಸಲಾಯಿತು.

ಕೊಡಗು ಉಸ್ತುವಾರಿ ಸಚಿವ ಬೋಸರಾಜ್, ಮಡಿಕೇರಿ ಶಾಸಕ ಮಂತರ್ ಗೌಡ ಸಿದ್ದಾಪುರಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಕಾಡಾನೆ ಹಾವಳಿ ಮಿತಿಮೀರಿರುವ ಬಗ್ಗೆ ಕಾರ್ಮಿಕರು ಬೆಳೆಗಾರರು ಸಚಿವರ ಗಮನ ಸೆಳೆದರು. ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಹಲವಾರು ಮುಂಜಾಗ್ರತ ಕ್ರಮ ಕೈಗೊಳ್ಳಲಾಗಿದ್ದು ಉಪಟಳ ನೀಡುತ್ತಿರುವ ಕಾಡಾನೆ ಸೆರೆ ಹಿಡಿಯಲು ಅರಣ್ಯ ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರದ ಪರಿಹಾರವೂ ತಕ್ಷಣ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು, ಪೊಲೀಸರು, ಸ್ಥಳೀಯ ಮುಖಂಡರು ಹಾಜರಿದ್ದರು.

ಕೃಷಿಗೆ ತಾಂತ್ರಿಕತೆಯ ಸ್ಪರ್ಶದ ಅಗತ್ಯವಿದೆ

ಯಾಂತ್ರೀಕೃತ ಭತ್ತ ನಾಟಿಯ ತರಬೇತಿ, ಪ್ರಾತ್ಯಕ್ಷಿಕೆ ಕಾರ್ಯಾಗಾರದಲ್ಲಿ ಶಾಸಕ ಪೊನ್ನಣ್ಣ ಅಭಿಪ್ರಾಯ



ಮಡಿಕೇರಿ, ಆ.13– ಜಗತ್ತಿನ ಜನಸಂಖ್ಯೆ ಕೃಷಿಯನ್ನೇ ಅವಲಂಭಿಸಿದ್ದು, ಕೃಷಿಯೇ ಜನರ ಜೀವಾಳವಾಗಿದೆ. ಈ ಹಿನ್ನೆಲೆಯಲ್ಲಿ ಆಹಾರ ಉತ್ಪಾದನಾ ಕ್ಷೇತ್ರಕ್ಕೆ ತಾಂತ್ರಿಕತೆಯ ಸ್ಪರ್ಶದ ಅಗತ್ಯವಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅಭಿಪ್ರಾಯಪಟ್ಟರು.

ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವ ವಿದ್ಯಾಲಯ ವಿಸ್ತರಣಾ ಘಟಕ (ಮಡಿಕೇರಿ) ವತಿಯಿಂದ ಪೊನ್ನಂಪೇಟೆ ನಲ್ಲೂರು ಗ್ರಾಮದ ಪ್ರಗತಿಪರ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯ ಅವರ ಭತ್ತದ ಗದ್ದೆಯಲ್ಲಿ ಯಾಂತ್ರೀಕೃತ ಭತ್ತ ನಾಟಿಯ ತರಬೇತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು. ಕೊಡಗು ಜಿಲ್ಲೆಯ ಜಮ್ಮಾ ಭೂಮಿಗಳು ಮೊದಲು ಭತ್ತದ ಗದ್ದೆಗಳಾಗಿದ್ದು, ಅತೀ ಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆಯಲಾಗುತ್ತಿತ್ತು. ಕೃಷಿ ಸಂಬಂಧಿತ ಜಮ್ಮಾಬಾಣೆಗಳನ್ನು ಜಾನುವಾರುಗಳನ್ನು ಮೇಯಿಸಲು ಬಳಸಲಾಗುತ್ತಿತ್ತು. ಕಾಫಿ ಬೆಳೆ ಕಾಲಿಟ್ಟ ಬಳಿಕ ಆರ್ಥಿಕತೆಯ ದೃಷ್ಟಿಯಿಂದ ಅತ್ತ ಕಡೆ ಕೃಷಿಕರು ಮುಖ ಮಾಡಿದರು ಎಂದು ಹೇಳಿದರು.

ಈ ಮೊದಲು ಕೊಡಗು ಜಿಲ್ಲೆಯಲ್ಲಿ ಅತೀ ಹೆಚ್ಚು ಪ್ರಮಾಣದಲ್ಲಿ ಭತ್ತ ಬೆಳೆಸಲಾಗುತ್ತಿತ್ತು. ಇದೀಗ ಮತ್ತೆ ಭತ್ತವನ್ನು ಅಧಿಕವಾಗಿ ಬೆಳೆಯುವ ಮೂಲಕ ಕೊಡಗು ಜಿಲ್ಲೆ ಅತೀ ಹೆಚ್ಚು ಭತ್ತ ಬೆಳೆಯುವ ಪ್ರದೇಶವಾಗಿ ಗುರುತಿಸಿಕೊಳ್ಳುವಂತಾಗಬೇಕು ಎಂದು ಆಶಿಸಿದರು. ಜನ ಸಂಖ್ಯೆ ಹೆಚ್ಚಿದಂತೆ ಆಹಾರ ಉತ್ಪಾದನೆಯಲ್ಲೂ ಏರಿಕೆ ಕಾಣುವಂತಾಗಿದೆ. ಈ ದಿಸೆಯಲ್ಲಿ ಕೃಷಿಗೆ ತಾಂತ್ರಿಕತೆ ಅಳವಡಿಕೆಯ ಅಗತ್ಯವಿದೆ. ಕೃಷಿ ವಿಶ್ವವಿದ್ಯಾನಿಲಯಗಳು ಈ ಕುರಿತು ರೈತರಿಗೆ ತರಬೇತಿ ಮತ್ತು ಮಾಹಿತಿ ನೀಡುತ್ತಿರುವುದು ಉತ್ತಮ ವಿಚಾರ ಎಂದು ಹೇಳಿದರು.

ಸರಕಾರಕ್ಕೆ ಒತ್ತಾಯ: ಇಂದು ಭತ್ತದ ಕೃಷಿ ಲಾಭದಾಯಕವಾಗಿಲ್ಲ ಎಂಬ ಕಾರಣದಿಂದ ರೈತರು ಭತ್ತ ಬೆಳೆಯುವುದನ್ನು ಕೈ ಬಿಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭತ್ತ ಬೆಳೆಯುವ ರೈತರಿಗೆ ಸರಕಾರ ಪ್ರೋತ್ಸಾಹಿಸಬೇಕಿದೆ. ಈ ಹಿಂದೆಯೂ ರೈತರಿಗೆ ಪ್ರೋತ್ಸಾಹ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲಾಗಿತ್ತು. ಇದೀಗ ಮತ್ತೆ ಭತ್ತ ಬೆಳೆಯುವ ರೈತರನ್ನು ಪ್ರೋತ್ಸಾಹಿಸಲು ಸರಕಾರವನ್ನು ಒತ್ತಾಯ ಮಾಡಲಾಗುತ್ತದೆ. ಅನ್ನಭಾಗ್ಯ ಯೋಜನೆಗೆ ಅಕ್ಕಿಯನ್ನು ಬಳಸಲಾಗುತ್ತಿದ್ದು, ರೈತರಿಗೆ ಮತ್ತಷ್ಟು ಬೆಂಬಲ ದೊರೆತಲ್ಲಿ ಸರಕಾರದ ನೀತಿ, ರೈತರು ಮತ್ತು ಬಡ ಜನರಿಗೂ ಅನುಕೂಲವಾಗಲಿದೆ. ಆ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕ ಪೊನ್ನಣ್ಣ ಭರವಸೆ ನೀಡಿದರು.

ಶಾಸಕರಿಂದ ಭತ್ತದ ನಾಟಿ: ಸೋಮೇಂಗಡ ಗಣೇಶ್ ತಿಮ್ಮಯ್ಯ ಅವರ ಭತ್ತದ ಗದ್ದೆಯಲ್ಲಿ ಸ್ವತಃ ಶಾಸಕ ಪೊನ್ನಣ್ಣ ಅವರೇ ನಾಟಿ ಯಂತ್ರದ ಮೂಲಕ ಎರಡು ಸುತ್ತು ಭತ್ತದ ನಾಟಿ ಕಾರ್ಯ ಮಾಡಿದರು. ಬಳಿಕ ಕೊಡಗಿನ ಸಂಪ್ರದಾಯದಂತೆ ಭತ್ತದ ಸಸಿ ಮಡಿಗಳನ್ನು ಹಿಡಿದು ಗದ್ದೆಯಲ್ಲಿ ನಾಟಿ ಮಾಡುವ ಮೂಲಕ ಗಮನ ಸೆಳೆದರು. ಈ ಸಂದರ್ಭ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜಾ ಉತ್ತಪ್ಪ ಕೃಷಿ ವಿ.ವಿ. ವಿದ್ಯಾರ್ಥಿಗಳೂ ಮತ್ತು ಸಾರ್ವಜನಿಕರು ಕೂಡ ನಾಟಿ ಕಾರ್ಯದಲ್ಲಿ ಕೈ ಜೋಡಿಸಿದರು.

ಜನರ ಬೆಂಬಲವಿದ್ದರೆ ಮಾತ್ರ ಕ್ಷೇತ್ರದ ಅಭಿವೃದ್ಧಿ ಸಾಧ್ಯ

ಅಂಬಲ ಮಹಿಳಾ ಸಮಾಜದಿಂದ ಸನ್ಮಾನ ಸ್ವೀಕರಿಸಿದ ಶಾಸಕ ಎ.ಎಸ್.ಪೊನ್ನಣ್ಣ ಅಭಿಪ್ರಾಯ



ನಾಪೋಕ್ಲು, ಆ.13– ಜನಬೆಂಬಲವಿದ್ದರೆ ಮಾತ್ರ ಒಂದು ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಧ್ಯ. ಒಬ್ಬ ಶಾಸಕನಾಗಿ ಉತ್ತಮ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿ ಜನರ ಮನಸ್ಸಿನಲ್ಲಿ ಉಳಿಯುವಂತೆ ಮಾಡುತ್ತೇನೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ವಿರಾಜಪೇಟೆ ಶಾಸಕರೂ ಆದ ಎ.ಎಸ್.ಪೊನ್ನಣ್ಣ ಹೇಳಿದರು.

ನೆಲಜಿ ಗ್ರಾಮದ ಅಂಬಲ ಮಹಿಳಾ ಸಮಾಜದ ವತಿಯಿಂದ ಶನಿವಾರ ನೆಲಜಿ ದವಸ ಬಂಡಾರದ ಕಟ್ಟಡದಲ್ಲಿ ಏರ್ಪಡಿಸಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಜನರಿಗೆ ಒಳ್ಳೆಯದಾಗಬೇಕು. ಕ್ಷೇತ್ರದ ಅಭಿವೃದ್ಧಿ ಆಗಬೇಕು ಎಂಬುದಷ್ಟೇ ನನ್ನ ಗುರಿಯಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಹಲವರು ಅವರವರ ಸಾಮರ್ಥ್ಯದಿಂದ ಮೇಲೆ ಬಂದರು. ಶಾಸಕನಾಗಿ ಜನರ ಅಭಿವೃದ್ಧಿ, ಕ್ಷೇತ್ರದ ಅಭಿವೃದ್ಧಿ ಮುಖ್ಯ. ಜಿಲ್ಲೆಯ ಜನರಿಗೆ ಒಳಿತನ್ನು ಮಾಡುವುದಷ್ಟೇ ನನ್ನ ಕೆಲಸ ಎಂದರು.

ಸನ್ಮಾನ ಸ್ವೀಕರಿಸಿದ ಮತ್ತೋರ್ವ ಅತಿಥಿ ವಿಧಾನ ಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಮಾತನಾಡಿ ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಈ ಹಿಂದೆ ಮಹಿಳೆಯರು ಮನೆಗೆ ಮಾತ್ರ ಸೀಮಿತ ಎಂದಿತ್ತು. ಆದರೆ ಈಗ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವುದು ಗಮನಾರ್ಹ ಎಂದರು.

ಪದ್ಮಶ್ರೀ ಪುರಸ್ಕೃತ ರಾಣಿ ಮಾಚಯ್ಯ ಮಾತನಾಡಿ ಕೊಡವ ಜಾನಪದ ಕಲೆ ಸಂಸ್ಕೃತಿಯನ್ನು ಹಿರಿಯರೊಂದಿಗೆ ಸೇರಿ ಮಕ್ಕಳು ಕಲಿಯಬೇಕು. ನಂತರ ಅದನ್ನು ನಿರಂತರವಾಗಿ ಸಂರಕ್ಷಿಸಬೇಕು ಎಂದರು. ಹಬ್ಬ ಹರಿದಿನಗಳನ್ನು ಹಿಂದಿನ ಸಂಪ್ರದಾಯದಂತೆ ಆಚರಿಸಬೇಕು. ಹುತ್ತರಿ, ಕೈಲ್ ಮುಹೂರ್ತ, ಕಾವೇರಿ ಸಂಕ್ರಮಣದಂತಹ ಹಬ್ಬಗಳನ್ನು ಮಕ್ಕಳು ಎಲ್ಲಿದ್ದರೂ ಜಿಲ್ಲೆಗೆ ಬಂದು ಹಿರಿಯರೊಂದಿಗೆ ಸಂಭ್ರಮದಿಂದ ಆಚರಿಸುವಂತಾಗಬೇಕು. ಹಿರಿಯರ ಪದ್ಧತಿ ಪರಂಪರೆಯನ್ನು ಮರೆಯಬಾರದು ಎಂದರು.

ಮಡಿಕೇರಿ ಆಕಾಶವಾಣಿಯ ನಿವೃತ್ತ ಉದ್ಘೋಷಕಿ ಕೂಪದಿರ ಶಾರದಾ ನಂಜಪ್ಪ ಮಾತನಾಡಿ ಕೊಡವ ಸಂಸ್ಕೃತಿಯನ್ನು ಮಕ್ಕಳಿಗೆ ಕಲಿಸಿಕೊಡಬೇಕು. ಮಹಿಳೆಯರು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದರೆ ಶಿಸ್ತು ಪ್ರಾಮಾಣಿಕತೆ, ಯಶಸ್ಸು ಕಾಣಲು ಸಾಧ್ಯ ಎಂದರು. ವಿರಾಜಪೇಟೆಯ ವುಮೆನ್ಸ್ ವಿಂಗ್ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಮಾತನಾಡಿ, ಸಾರ್ವಜನಿಕರ ಮೂಲ ಸೌಕರ್ಯ ಅಲ್ಲದೆ ನಮ್ಮ ಆಚಾರ ವಿಚಾರ ಸಂಸ್ಕೃತಿಯ ಜೊತೆಗೆ ನಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಚಿಂತಿಸುವ ಅವಶ್ಯಕತೆ ಇದೆ ಎಂದರು. ಇದಕ್ಕೂ ಮುನ್ನ ಕಕ್ಕಡ ಹಬ್ಬದ ಪ್ರಯುಕ್ತ ನೆಲಜಿ ಶ್ರೀ ಇಗ್ಗುತಪ್ಪ ದೇವಸ್ಥಾನದಲ್ಲಿ ವಿಶೇಷ ಮಹಾಪೂಜೆಯನ್ನು ಏರ್ಪಡಿಸಲಾಗಿತ್ತು. ಆ ಬಳಿಕ ದುಡಿ ಕೊಟ್ಟುತಳಿಯಕ್ಕಿ ಬೋಲಾಕ್ ನೊಂದಿಗೆ ಅತಿಥಿಗಳನ್ನು ಅದ್ದೂರಿಯಾಗಿ ಸಭೆಗೆ ಬರಮಾಡಿಕೊಳ್ಳಲಾಯಿತು.

ಅಂಬಲ ಮಹಿಳಾ ಸಮಾಜದ ಅಧ್ಯಕ್ಷೆ ಅಪ್ಪುಮಣಿಯಂಡ ಡೇಝಿ ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಗ್ರಾಮದ ಕಾಫಿ ಬೆಳೆಗಾರರಾದ ಮಂಡೀರ ಸರೋಜಾ ದೇವಯ್ಯ, ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತೀರ ಧರ್ಮಜ ಉತ್ತಪ್ಪ, ಸಲಹಾ ಸಮಿತಿ ಅಧ್ಯಕ್ಷೆ ಮಣವಟ್ಟೀರ ಕಮಲ ಬೆಳ್ಳಿಯಪ್ಪ ಉಪಸ್ಥಿತರಿದ್ದರು .

ಮಣವಟ್ಟಿರ ಕಮಲ ಬೆಳ್ಳಪ್ಪ, ಮಣವಟ್ಟಿರ ಝಾನ್ಸಿ ತಿಮ್ಮಯ್ಯ, ಕೋಟೆರ ಹೇಮಾ ಕಾವೇರಪ್ಪ, ಚೀಯಕಪೂವಂಡ ಅಮಿತ ನವೀನ್ ಸನ್ಮಾನಿತರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಅಲ್ಲರಂಡ ಪ್ರೀತು ಸತೀಶ್ ಪ್ರಾರ್ಥನೆ ಗೈದ ಕಾರ್ಯಕ್ರಮವನ್ನು ಡೇಝಿ ಸೋಮಣ್ಣ ಸ್ವಾಗತಿಸಿ, ಮಣವಟ್ಟಿರ ಮೀರಾ ಬಿದ್ದಪ್ಪ ವಂದಿಸಿದರು.

ಗಾಂಜಾ ಮಾರಾಟ; ವಿ.ಪೇಟೆಯಲ್ಲಿ ಒಬ್ಬನ ಸೆರೆ

ವಿರಾಜಪೇಟೆ, ಆ.13– ವಿರಾಜಪೇಟೆ ಗ್ರಾಮಾಂತರ ಠಾಣಾ ಪೊಲೀಸರು ಗಾಂಜಾ ಮಾರಾಟ ಪ್ರಕರಣಕ್ಕೆ



ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ. ವಿರಾಜಪೇಟೆ ನೆಹರೂ ನಗರ ನಿವಾಸಿ ಎಂ.ಕೆ. ಸಜೀರ್(31) ಎಂಬಾತನೇ ಬಂಧಿತ ಆರೋಪಿ. ಆತನಿಂದ 205 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಈ ಕುರಿತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಜಪೇಟೆಯ ಬಿಟ್ಟಂಗಾಲ ಬಳಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ಲಭಿಸಿತ್ತು ಈ ಹಿನ್ನೆಲೆಯಲ್ಲಿ ದಾಳಿ ನಡೆಸಿ ನೆಹರೂ ನಗರದ ಎಂ.ಕೆ.ಸಜೀರ್ ಎಂಬಾತನನ್ನು ಮಾಲು ಸಹಿತ ಬಂಧಿಸಿದ್ದಾರೆ. ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ವಿರಾಜಪೇಟೆ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರಪ್ಪ, ಗ್ರಾಮಾಂತರ ಠಾಣಾಧಿಕಾರಿ ಸಿ.ಸಿ. ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ಆರೋಪಿಗಳ ಸೆರೆ

ಸಿದ್ದಾಪುರ, ಆ.13– ಸಿದ್ದಾಪುರದ ಪಾಲಿಬೆಟ್ಟ ರಸ್ತೆಯಲ್ಲಿ ಕ್ರಿಸ್ಟಲ್ ಎಂಬ ವ್ಯಕ್ತಿಯನ್ನು ಹತ್ಯೆ ಮಾಡಿ ಪರಾರಿಯಾಗಿದ್ದ ನಾಲ್ವರು ಆರೋಪಿ ಗಳನ್ನು ಬಂಧಿಸುವಲ್ಲಿ ಸಿದ್ದಾಪುರ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಮುಖ ಆರೋಪಿ ರಂಜು(40), ಮುತ್ತೂರಿನ ನಿವಾಸಿ ಸಚ್ಚಿನ್(29) ಅನೀಲ್ ಕುಮಾರ್ (24) ಸಿದ್ದಾಪುರ ಎಂ,ಜಿ ರಸ್ತೆ ನಿವಾಸಿ ರವಿ (42) ಬಂಧಿತ ಆರೋಪಿಗಳಾಗಿದ್ದಾರೆ. ಘಟನೆಗೆ ಹಳೆ ವೈಷಮ್ಯ ಕಾರಣ ಎನ್ನಲಾಗಿದೆ. ಬಂಧಿತ ಆರೋಪಿಗಳನ್ನು ಹತ್ಯೆ ನಡೆದ ಸ್ಥಳಕ್ಕೆ ಕರೆತಂದು ಮಹಜರು ನಡೆಸಿದ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಘಟನೆ ನಂತರ ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗಾಗಿ ಕೊಡಗು ಎಸ್‌ಪಿ ರಾಮರಾಜನ್ ವಿಶೇಷ ತಂಡವನ್ನು ರಚಿಸಿದ್ದರು.

ಕೊಡಗು ಎಸ್ ಪಿ ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಜಗದೀಶ್, ಸರ್ಕಲ್ ಇನ್ಸ್‌ಪೆಕ್ಟರ್ ಅನೂಪ್ ಮಾದಪ್ಪ, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ, ಆ.13– ಬೆಸಗೂರು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿದೆ. ಕಾಫಿ ಬೆಳೆಗಾರ ಬಾಚಮಾಡ ಪ್ರಕಾಶ್ ರಾಜಪ್ಪ ಅವರಿಗೆ ಸೇರಿದ ಕೊಟ್ಟಿಗೆಗೆ ಶನಿವಾರ ತಡರಾತ್ರಿ ದಾಳಿ ನಡೆಸಿದ ಹುಲಿ ಹಸುವನ್ನು ಕೊಂದು ಹಾಕಿದೆ. 1 ತಿಂಗಳ ಹಿಂದೆಯಷ್ಟೆ ದಾಳಿನಡೆಸಿ ಹಸುವೊಂದನ್ನು ಬಲಿ ಪಡೆದಿತ್ತು. ಪೊನ್ನಂಪೇಟೆ ವಲಯ ಅರಣ್ಯ ತಂಡ ಪರಿಶೀಲನೆ ನಡೆಸಿತು.

ನಾಳೆ ಸೌಹಾರ್ದತೆಗಾಗಿ ರಾಷ್ಟ್ರರಕ್ಷಾ ಸಂಗಮ ಕಾರ್ಯಕ್ರಮ

ವಿರಾಜಪೇಟೆ, ಆ.13– ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸುನ್ನಿ ಯುವಜನ ಸಂಘಮ್ ಅಮಿಲಾ ಕೊಡಗು ಜಿಲ್ಲಾ ಸಮಿತಿಯಿಂದ ಆ.15 ರಂದು ಸಂಜೆ 4 ಗಂಟೆಯಿಂದ 6.30 ರವರೆಗೆ ಸಿದ್ದಾಪುರದ ನೆಲ್ಯಾಹುದಿಕೇರಿ ಶಾದಿ ಮಹಲ್‌ನಲ್ಲಿ ಸೌಹಾರ್ದತೆಯ ಸಂದೇಶ ಸಾರುವ ಜಾತ್ಯಾತೀತತೆ ಭಾರತ ಧರ್ಮ ಎಂಬ ಶಿರ್ಷಿಕೆ ಅಡಿಯಲ್ಲಿ ರಾಷ್ಟ್ರ ರಕ್ಷಾ ಸಂಗಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪಿ.ಎ.ಶರೀಫ್ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ದೇಶದ ಸಂವಿಧಾನದಲ್ಲಿ ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ಸಾಮಾಜಿಕ ನ್ಯಾಯ, ಅವರವರ ಆಚಾರ ವಿಚಾರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಧರ್ಮ, ಜಾತಿ, ಪದ್ದತಿ, ವೇಷಭೂಷಣ, ಆಚಾರ ವಿಚಾರಗಳು ವಿವಿಧತೆಯಲ್ಲಿ ಏಕತೆಯನ್ನು ಎತ್ತಿ ತೋರಿಸುವ ಸುನ್ನಿ ಯುವಜನ ಸಂಘಮ್ ಅಮಿಲಾ ಸಂಸ್ಥೆಯು ಹಲವಾರು ಜನಪರ ಕಾರ್ಯಗಳನ್ನು ಮಾಡುತ್ತ ಸಮಾಜ ಸೇವೆಯಲ್ಲಿ ತೊಡಗಿದ್ದು, ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಹೇಳಿದರು.

ಸಂಸ್ಥೆಯ ಅಧ್ಯಕ್ಷ ಎಂ.ಎಂ ಹ್ಯಾರಿಸ್ ಮಾತನಾಡಿ ಜಿಲ್ಲಾಧ್ಯಕ್ಷ ಬಷೀರ್ ಹಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಪಖಾಝಿ ಎಂ.ಎಂ ಅಬ್ದುಲ್ ಫೈಝಿ ಉಸ್ತಾದ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಡಾ, ಮಂಥರ್ ಗೌಡ, ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ ಮಾಸ್ಟರ್, ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಚೆಟ್ಟಳ್ಳಿಯ ಕ್ರೈಸ್ತ ಧರ್ಮ ಗುರು ಜೆರಾಲ್ಡ್ ಸ್ಕೇರಿಯಾ, ಮುಖ್ಯ ಭಾಷಣಕಾರರಾಗಿ ಇಬ್ರಾಹಿಂ ಮುಸ್ಲಿಯಾರ್ ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಸಮಿತಿಯ ಕೋಶಾಧಿಕಾರಿ ಅಬ್ದುಲ್ ರೆಹಮಾನ್ ಗೋಣಿಕೊಪ್ಪ, ಜಿಲ್ಲಾ ವಿಕ್ಷಕ ಮಹಮದ್ ಹಾಜಿ ಪೊನ್ನಂಪೇಟೆ, ಸಹಕಾರ್ಯದರ್ಶಿ ರಝಾಕ್ ತಿತಿಮತಿ, ಹನೀಫ್ ಬಾಳೆಲೆ ಇವರುಗಳು ಉಪಸ್ಥಿತರಿದ್ದರು.

ನಾಳೆ ಸ್ವಾತಂತ್ರ್ಯ ದಿನಾಚರಣೆ

ಚಾಮರಾಜನಗರ, ಆ.13– ಜಿಲ್ಲಾಡಳಿತದಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಆ.15ರಂದು ಬೆಳಗ್ಗೆ 9 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಧ್ವಜಾರೋಹಣ ನೇರವೇರಿಸಿ, ಸ್ವಾತಂತ್ರೋತ್ಸವ ಸಂದೇಶ ನೀಡುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ.ಗಣೇಶ್ ಪ್ರಸಾದ್, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಆ.13– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಆ.15 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 8ಗಂಟೆಗೆ ನಗರಕ್ಕೆ ಆಗಮಿಸುವ ಅವರು ಬೆಳಗ್ಗೆ 9 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯುವ 77ನೇ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2 ಗಂಟೆಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಹರ್ ಘರ್ ತಿರಂಗಾ ಅಭಿಯಾನ

ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸಲು ಡಿಸಿ ಮನವಿ

ಚಾಮರಾಜನಗರ, ಆ.13– ಭಾರತ ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ಹರ್ ಘರ್ ತಿರಂಗಾ ಅಭಿಯಾನ ಹಮ್ಮಿಕೊಂಡಿದ್ದು, ಜಿಲ್ಲೆಯ ಪ್ರತಿ ಮನೆ, ಸರ್ಕಾರಿ ಕಟ್ಟಡಗಳು, ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಇತರೆ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜ ಹಾರಿಸುವಂತೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಮನವಿ ಮಾಡಿದ್ದಾರೆ.

ಏಕ ಬಳಕೆ ಪ್ಲಾಸ್ಟಿಕ್ ಧ್ವಜ ಬಳಕೆ ನಿಷೇಧಿಸಲಾಗಿದೆ. ಧ್ವಜ ಸಂಹಿತೆ ಪಾಲಿಸಬೇಕು. ಜಿಲ್ಲೆಯ ಮನೆಗಳು, ವಾಣಿಜ್ಯ ಕಟ್ಟಡಗಳು, ಸರ್ಕಾರಿ, ಸರ್ಕಾರೇತರ ಸಂಸ್ಥೆಗಳು, ಸೇರಿದಂತೆ ಇತರೆ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ ವನ್ನು ಹಾರಿಸಿ https://harghartiranga.com/ ವೆಬ್‌ಸೈಟ್‌ನಲ್ಲಿ ತಮ್ಮ ಸೆಲ್ಫಿ ಅಪ್‌ಲೋಡ್ ಮಾಡುವಂತೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಮಕ್ಕಳಿಗೆ ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಅರಿವು ಮೂಡಿಸಿ

ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಶ್ರೀಚನ್ನಬಸವ ಸ್ವಾಮೀಜಿ



ಚಾಮರಾಜನಗರ, ಆ.13– ಬಸವಾದಿ ಶರಣರ ತತ್ವಾದರ್ಶ ಪಾಲಿಸುವ ಜೊತೆಗೆ ಮಕ್ಕಳಿಗೆ ನಮ್ಮ ಸಂಸ್ಕೃತಿ ಮತ್ತು ಆಚಾರ ವಿಚಾರಗಳ ಬಗ್ಗೆ ಅರಿವು ಮೂಡಿಸಿ ಸಮಾಜವನ್ನು ಜಾಗೃತಿಗೊಳಿಸಿ ಎಂದು ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಶ್ರೀಚನ್ನಬಸವ ಸ್ವಾಮೀಜಿ ತಿಳಿಸಿದರು.

ನಗರದ ಅನುಭವ ಮಂಟಪದಲ್ಲಿ ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ಶ್ರೀಬಸವೇಶ್ವರ ಪತ್ತಿನ ಸಹಕಾರ ಸಂಘ ಹಾಗೂ ಚಾಮರಾಜನಗರ ತಾಲೂಕು ಸಂಗಮ ಗೃಹ ನಿರ್ಮಾಣ ಸಹಕಾರ ಸಂಘಗಳ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಾದಿ ಶರಣರು ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಸಂಸ್ಕೃತಿ ಮತ್ತು ಧರ್ಮವನ್ನು ಪಾಲಿಸುವಂತೆ ತಿಳಿಸಿದ್ದಾರೆ. ಶರಣರ ಪರಂಪರೆ ಹೊಂದಿರುವ ನಾವು ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ಸಮಾಜ ನಿರ್ಮಿಸಲು ಮುಂದಾಗಬೇಕಿದೆ. ನಮ್ಮ ಮಕ್ಕಳು ಹಾಗೂ ಸಮಾಜಕ್ಕೆ ವೀರಶೈವ ಲಿಂಗಾಯತ ಧರ್ಮದ ಪರಂಪರೆ ಮತ್ತು ಮಹತ್ವದ ಬಗ್ಗೆ ತಿಳಿಸುವ ಮೂಲಕ ಅವರನ್ನು ಜಾಗೃತರನ್ನಾಗಿ ಮಾಡಬೇಕು ಎಂದರು.

ಕಳೆದ 25 ವರ್ಷಗಳ ಹಿಂದೆ ಶ್ರೀಮಠದಲ್ಲಿ ಆರಂಭವಾದ 3 ಸಂಘಗಳು ಪ್ರಗತಿಯತ್ತ ಸಾಗಿ, ವಚನ ಪರಂಪರೆಯನ್ನು ಜನರಿಗೆ ತಿಳಿಸುವ ಜೊತೆಗೆ ಆರ್ಥಿಕ ಸಂಪನ್ಮೂಲ ಕ್ರೋಢಿಕರಿಸಿಕೊಂಡು ಸ್ವಂತ ಕಟ್ಟಡ ಹೊಂದಿ ಮಾದರಿಯಾಗಿ ಬೆಳೆಯುತ್ತಿವೆ. ಮುಂದಿನ ವರ್ಷದ ನೌಕರರ ಸಂಘಕ್ಕೆ ಬೆಳ್ಳಿ ಮಹೋತ್ಸವ ಸಂಭ್ರಮವಾಗಿದೆ. ಇನ್ನು ಹೆಚ್ಚಿನ ಸಮಾಜದ ಬಂಧುಗಳಿಗೆ ಸಂಘ ಆಶ್ರಯವಾಗಲಿ ಎಂದರು.

ಸಂಘ ಗೌರವಾಧ್ಯಕ್ಷ ಆರ್.ಎಂ.ಸ್ವಾಮಿ ಮಾತನಾಡಿ, ಮೂರು ಸಂಘಗಳು ಶಕ್ತಿ ಮೀರಿ ಬೆಳೆಯುವ ಜೊತೆಗೆ ಸಮಾಜಕ್ಕೆ ಆಸ್ತಿಯಾಗಿವೆ. ಈಗಾಗಲೇ ನೌಕರರ ಸಂಘ 25 ವರ್ಷ ಪೂರೈಸಿ ಬೆಳ್ಳಿಹಬ್ಬ ಆಚರಣೆ ಮಾಡಿಕೊಳ್ಳುತ್ತಿದೆ. ಅದೇ ರೀತಿ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ ಸ್ವಂತ ಕಟ್ಟಡ ಹೊಂದಿ ಜನಪರ ಯೋಜನೆಗಳೊಂದಿಗೆ ಷೇರುದಾರರಿಗೆ ಉತ್ತಮ ಸೇವೆ ನೀಡುತ್ತಿದೆ. ಸಂಗಮ ಗೃಹ ನಿರ್ಮಾಣ ಸಂಘ ಸಹ ನಿವೇಶನ ನೀಡುವ ಜೊತೆಗೆ ಅವರ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದರು.

ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ 40 ನಿವೃತ್ತ ನೌಕರರು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕೂ ಹೆಚ್ಚು ಅಂಕಗಳಿಸಿದ ಸಂಘದ ಸದಸ್ಯರ 43 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನೌಕರರ ಸಂಘದ ಮಾಜಿ ಅಧ್ಯಕ್ಷ ಡಾ.ಪರಮೇಶ್ವರಪ್ಪ, ಶ್ರೀಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಯೋಗ ಪ್ರಕಾಶ್, ಉಪಾಧ್ಯಕ್ಷ ಶಿವಣ್ಣ, ನಿಯೋಜಿತ ಅಧ್ಯಕ್ಷ ಗೌರಿಶಂಕರ್ ಉಪಾಧ್ಯಕ್ಷ ಕುಮಾರಸ್ವಾಮಿ, ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಆರ್.ನಾಗಭೂಷನ್, ಉಪಾಧ್ಯಕ್ಷ ಜಿ.ಮಹದೇವಸ್ವಾಮಿ, ನಿಯೋಜಿತ ಅಧ್ಯಕ್ಷ ಗುರುಪಾದಸ್ವಾಮಿ, ಉಪಾಧ್ಯಕ್ಷ ಸುಂದರ್, ನೌಕರರ ಸಂಘದ ಉಪಾಧ್ಯಕ್ಷ ಮಹದೇವಸ್ವಾಮಿ ಐಟಿಐ, ಗಂಗಾಧರ್, ಮಾದಲಾಂಬಿಕೆ, ಕಾರ್ಯದರ್ಶಿ ಆರ್ಕಪ್ಪ, ಆರ್.ಎಸ್.ಲಿಂಗರಾಜು, ಎಲ್.ದೇವಣ್ಣ, ಶಿವಕುಮಾರ ಸ್ವಾಮಿ, ದಾಕ್ಷಾಯಿಣಿ, ಪ್ರಮೀಳಾ ಉದಗಟ್ಟಿ, ನಾಗಮಣಿ, ಜ್ಯೋತಿ, ನಿರ್ಮಲ, ಶಶಿಕಲಾ, ಕಾರ್ಯ ನಿರ್ವಾಹಕ ನಂಜುಂಡಸ್ವಾಮಿ, ಮಹೇಂದ್ರ, ಆಕಾಶ್ ಹಾಗೂ ಮೂರು ಸಂಘಗಳ ಸರ್ವ ಸದಸ್ಯರು ಇದ್ದರು.

ಬುಡಕಟ್ಟು ಜನರಿಗೆ ಮೂಲ ಸೌಕರ್ಯ ಕಲ್ಪಿಸದ ಹಿನ್ನೆಲೆ



ಧ್ವಜಾರೋಹಣಕ್ಕೆ ಅವಕಾಶ ನೀಡಲ್ಲ

ಚಾಮರಾಜನಗರ, ಆ.13– ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷ ಕಳೆದರೂ, ಜಿಲ್ಲೆಯ ಗಿರಿಜನ ಹಾಡಿಗಳು ಹಾಗೂ ಬುಡಕಟ್ಟು ಜನರಿಗೆ ಮೂಲ ಸೌಕರ್ಯ ಕಲ್ಪಿಸದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಆ.15ರಂದು ಧ್ವಜಾರೋಹಣ ನೆರವೇರಿಸಲು ಅವಕಾಶ ನೀಡುವುದಿಲ್ಲ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಎಚ್ಚರಿಕೆ ನೀಡಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಬುಡಕಟ್ಟು ಜನರು, ಗಿರಿಜನರ ಹಾಡಿಗಳು ಹಾಗೂ ಬಡಾವಣೆಗಳಿಗೆ ಕುಡಿಯುವ ನೀರು, ವಿದ್ಯುತ್, ರಸ್ತೆ, ವೈದ್ಯಕೀಯ ಸೌಲಭ್ಯ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರಗಳು ಹಾಗೂ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ ಹೀಗಾಗಿ ಆ.15ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಧ್ವಜಾರೋಹಣ ನೇರವೇರಿಸಲು ತಡೆಯೊಡ್ಡುತ್ತೇವೆ. ಈ ಪ್ರತಿಭಟನೆ ಯಾವ ರೀತಿಯಲ್ಲಿಯೂ ಇರಬಹುದು ಎಂದರು. ಚಂಗಡಿ ಗ್ರಾಮಸ್ಥರು ಅರಣ್ಯದಿಂದ ಹೊರಬರಲು ಸಿದ್ಧರಿದ್ದಾರೆ. ಆದರೆ 7 ವರ್ಷಗಳಾದರೂ ಇನ್ನೂ ಪುನರ್ವಸತಿ ಕಲ್ಪಿಸಿಲ್ಲ. ಯಳಂದೂರು ತಾಲೂಕಿನ ಆಮೆಕೆರೆ ರೈತರಿಗೆ ಅರಣ್ಯ ಇಲಾಖೆಯವರು ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು.

ಏನೂ ಸಾಧಿಸಿದ್ದೇವೆ ಎಂದು ಜನಪ್ರತಿನಿಧಿಗಳು ಧ್ವಜಾರೋಹಣ ನೆರವೇರಿಸಬೇಕು. ಜನಪ್ರತಿನಿಧಿಗಳಿಗೆ ಧ್ವಜಾರೋಹಣ ಮಾಡಲು ನೈತಿಕತೆ ಇಲ್ಲ. ಪವಿತ್ರವಾದ ಧ್ವಜ ಮುಟ್ಟಲು ಅವರು ಯೋಗ್ಯರಲ್ಲ. ನಾವು ಧ್ವಜಕ್ಕೆ ಗೌರವ ಕೊಡುತ್ತೇವೆ. ಆದರೆ, ಜನಪ್ರತಿನಿಧಿಗಳು ಧ್ವಜಾರೋಹಣ ನೆರವೇರಿಸಲು ಅವಕಾಶ ನೀಡುವುದಿಲ್ಲ ಎಂದರು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಂಗಸ್ವಾಮಿ, ಗುರು ವೆಂಕಟರಾಮ್, ಶಿವಕುಮಾರ್, ಕರಿಯಪ್ಪ ಇದ್ದರು.

ಗುಂಡ್ಲುಪೇಟೆ: ಉಚಿತ ಆರೋಗ್ಯ ತಪಾಸಣಾ ಶಿಬಿರ



ಗುಂಡ್ಲುಪೇಟೆ, ಆ.13– ಪಟ್ಟಣದ ಜೆಎಸ್‌ಎಸ್ ಕಾಲೇಜಿನಲ್ಲಿ ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಭಾನುವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಹೃದಯ, ಕಿವಿ, ಮೂಗು ಮತ್ತು ಗಂಟಲು, ಕಣ್ಣು, ರಕ್ತದೊತ್ತಡ ಹಾಗೂ ಮಧುಮೇಹ ಮತ್ತಿತರ ರೋಗಗಳಿಗೆ ಸಂಬಂಧಿಸಿದಂತೆ ತಜ್ಞ ವೈದ್ಯರು ಪರೀಕ್ಷಿಸಿ ಸಲಹೆ ನೀಡಿದರು. ಗುಂಡ್ಲುಪೇಟೆ ಪಟ್ಟಣ ಹಾಗೂ ತಾಲೂಕಿನ ವಿವಿಧ ಗ್ರಾಮಗಳ ನೂರಾರು ಮಂದಿ ಶಿಬಿರಕ್ಕೆ ಆಗಮಿಸಿ ತಪಾಸಣೆಗೆ ಒಳಪಟ್ಟರು. ಈ ವೇಳೆ ತಜ್ಞ ವೈದ್ಯ ಡಾ.ತಿಪ್ಪೇಸ್ವಾಮಿ, ಡಾ.ಪೂರ್ಣಿಮಾ, ಡಾ.ಪ್ರಕಾಶ್, ಡಾ.ಪ್ರತಿಭಾ, ಡಾ.ದೀಪಕ್, ಡಾ.ಅನುಪಮಾ, ಡಾ.ಶಿವಾನಿ, ಡಾ.ಕಾಂತರಾಜು, ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಂಶುಪಾಲೆ ಮಹದೇವಮ್ಮ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಬಸವ ರಾಜಪ್ಪ, ಶಿಬಿರದ ಸಂಚಾಲಕ ಕೀರ್ತಿಕುಮಾರ್ ಸೇರಿದಂತೆ ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಇದ್ದರು.

ವರ್ತಕರ ಸೌಹಾರ್ದ ಸಹಕಾರಿ ಸಂಘಕ್ಕೆ 33.28 ಲಕ್ಷ ನಿವ್ವಳ ಲಾಭ

ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಪದ್ಮ ಪ್ರಸಾದ್



ಚಾಮರಾಜನಗರ, ಆ.13– ನಗರದ ವರ್ತಕರ ಸೌಹಾರ್ದ ಸಹಕಾರಿ ಸಂಘ ಪ್ರಸಕ್ತ ಸಾಲಿನಲ್ಲಿ 33.87 ಲಕ್ಷ ನಿವ್ವಳ ಲಾಭಗಳಿಸಿದ್ದು, ಸದಸ್ಯರಿಗೆ ಶೇ.20ರಷ್ಟು ಡಿವಿಡೆಂಟ್ ಅನ್ನು ಉಳಿತಾಯ ಖಾತೆಗಳಿಗೆ ಜಮಾ ಮಾಡಲಾಗುತ್ತದೆ ಎಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಪದ್ಮ ಪ್ರಸಾದ್ ತಿಳಿಸಿದರು.

ನಗರದ ವರ್ತಕರ ಭವನದಲ್ಲಿ ನಡೆದ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘದ 8ನೇ ವಾರ್ಷಿಕ ಸಾಮಾನ್ಯ ಸಭೆ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2016ರಲ್ಲಿ 570 ಸದಸ್ಯರ 15.70 ಲಕ್ಷ ಷೇರು ಬಂಡವಾಳದೊಂದಿಗೆ ಪ್ರಾರಂಭವಾದ ಸಹಕಾರಿ ಸಂಘ 7 ವರ್ಷ ಗಳಲ್ಲಿ 935 ಸದಸ್ಯರನ್ನು ಹೊಂದಿದೆ. 1.24 ಕೋಟಿ ರೂ. ಷೇರು ಬಂಡವಾಳ ಮತ್ತು 2.27 ಕೋಟಿ ರೂ. ಡೆಪಾಸಿಟ್ ಹೊಂದಿದೆ. ಇದೆಲ್ಲವು ಸದಸ್ಯರು ಸಂಘದ ಮೇಲೆ ವಿಶ್ವಾಸ ವಿಟ್ಟು ವ್ಯವಹಾರ ಮಾಡಿದ ಫಲವಾಗಿದೆ ಎಂದರು.

ಷೇರುದಾರರ ಅನುಕೂಲಕ್ಕೆ ತಕ್ಕಂತೆ ವಿವಿಧ ಯೋಜನೆಗಳಡಿ 4.14 ಕೋಟಿ ರೂ. ಸಾಲ ನೀಡಲಾಗಿದೆ. 15.5 ಕೋಟಿ ವಾರ್ಷಿಕ ವಹಿವಾಟು ಮಾಡಲಾಗಿದೆ. ಸಂಘದ ಆರ್ಥಿಕ ವ್ಯವಹಾರಗಳು ಅತ್ಯಂತ ಪಾರದರ್ಶಕತೆಯಿಂದ ಕೂಡಿದ್ದು ಸಾಲ ನೀಡುವಿಕೆ, ಠೇವಣಿ ಸಂಗ್ರಹಿಸುವಿಕೆ ಯಲ್ಲಿ ಪರಿಣಾಮಕಾರಿ ನೀತಿ ಅನುಸರಿಸಲಾಗುತ್ತಿದೆ. ಇದರ ಪರಿಣಾಮ ಈ ಬಾರಿಯೂ ಸಹಕಾರಿಗೆ ಲೆಕ್ಕಪರಿಶೋಧನೆಯಲ್ಲಿ 'ಎ' ಗ್ರೇಡ್ ಬಂದಿದೆ. ಸಹಕಾರಿ ಬೆಳವಣಿಗೆ, ಆರ್ಥಿಕ ಭದ್ರತೆ ಹಿತದೃಷ್ಟಿಯಿಂದ ಭದ್ರತಾ ಸಾಲಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಬಾಲಸುಬ್ರಮಣ್ಯ, ಉಪಾಧ್ಯಕ್ಷ ಬಿ.ವಿ.ವೆಂಕಟನಾಗಪ್ಪ ಶೆಟ್ಟಿ ಮಾತನಾಡಿ, ಸಂಘದ ಬೆಳವಣಿಗೆ ಕಾರಣಕರ್ತರಾದ ಸದಸ್ಯರು ಹಾಗೂ ಆಡಳಿತ ಮಂಡಳಿ ನಿಸ್ವಾರ್ಥ ಸೇವೆಯಿಂದ ಅಭಿವೃದ್ಧಿಯತ್ತ ಸಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವೇಣುಗೋಪಾಲ್, ಕ್ರೀಡಾ ಕ್ಷೇತ್ರದ ಶಿವು, ಸಂಘದ ಕಾನೂನು ಸಲಹೆಗಾರ ಎ.ಎಸ್.ವಿಜಯಕುಮಾರ್, ಲೆಕ್ಕಪರಿಶೋಧಕ ಕೆ.ಕೇಶವಡೋಂಗ್ರೆ ಅವರನ್ನು ಸನ್ಮಾನಿಸಲಾಯಿತು. ಸಂಘದ ಮುಖ್ಯ ನಿರ್ವಾಹಕ ಬಿ.ಜಿ. ಸಂಕೀರ್ತನ್ ವಾರ್ಷಿಕ ವರದಿ ಮಂಡಿಸಿ ಅನುಮೋದನೆ ಪಡೆದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಬಿ.ವಿ.ವೆಂಕಟನಾಗಪ್ಪಶೆಟ್ಟಿ, ನಿರ್ದೇಶಕರಾದ ಸಿ.ಎಸ್.ಮಹೇಶ್‌ಕುಮಾರ್, ಎಸ್.ಬಾಲಸುಬ್ರಹ್ಮಣ್ಯ, ಕೆ.ಎಸ್.ಚಿದಾನಂದ ಗಣೇಶ್, ಸಿ.ಎ.ನಾರಾಯಣ್, ಸಿ.ವಿ.ಶ್ರೀನಿವಾಸ್, ವರ್ತಕರ ಸಂಘದ ಅಧ್ಯಕ್ಷ ಎಚ್.ಬಿ.ರಾಜಶೇಖರ್, ಎನ್.ಶ್ರೀಕಂಠಮೂರ್ತಿ, ಎಂ. ಕಮಲ್‌ರಾಜ್, ಎಂ.ರಾಜಣ್ಣ, ಸಿ.ಎಸ್. ಮಹೇಶ್ ಕುಮಾರ್, ಡಿ.ಎಸ್.ರಾಘವೇಂದ್ರ, ರಾಮ ಚಂದ್ರ, ಎಸ್.ವಿ.ಗಣೇಶ್, ಸಿ.ಪಿ.ಗಣೇಶ್, ಸಿ.ಪಿ.ಮಧುಸೂಧನ್, ಜಿ.ಆರ್.ರೇಖಾ ಶ್ರೀಧರ್, ಎಸ್.ಪುಷ್ಪ ಶ್ರೀನಿವಾಸ್, ಪಿಗ್ಮಿ ಕಲೆಕ್ಟರ್ ಸಿ.ಬಿ.ಪ್ರಭುಸ್ವಾಮಿ, ಸಂಘದ ಸದಸ್ಯರು ಉಪಸ್ಥಿತರಿದ್ದರು.

ಮಾನವ ಸಹಿತ ಗಗನಯಾನ: ಇಸ್ರೋದ ಮತ್ತೊಂದು ಮಹತ್ವದ ಪರೀಕ್ಷೆ ಯಶಸ್ವಿ

ಬೆಂಗಳೂರು, ಆ.13–ಮಾನವಸಹಿತ ಗಗನಯಾನಕ್ಕೆ ಸಿದ್ಧವಾಗುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತೊಂದು ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಚಂಡೀಗಢದಲ್ಲಿರುವ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದಲ್ಲಿ (ವಿಎಸ್‌ಎಸ್‌ಸಿ) ಆ.8ರಿಂದ 10ರವರೆಗೆ ಡ್ರೋಗ್ ಪ್ಯಾರಾಚೂಟ್ ಪರೀಕ್ಷೆಯನ್ನು ಇಸ್ರೋ ಯಶಸ್ವಿಯಾಗಿ ನಡೆಸಿದೆ. ಡ್ರೋಗ್ ಪ್ಯಾರಾಚೂಟ್‌ಗಳ ಮೇಲೆ ಇಸ್ರೋ ನಡೆಸಿದ ಸರಣಿ ಪರೀಕ್ಷೆಗಳ ಯಶಸ್ವಿಯಾಗಿವೆ. ಈ ಪರೀಕ್ಷೆಗಳಿಗೆ ಆಗ್ರಾದಲ್ಲಿರುವ ಏರಿಯಲ್ ಡೆಲಿವರಿ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಡಿಆರ್‌ಡಿಇ) ಮತ್ತು ಡಿಆರ್‌ಡಿಓ ಪೂರ್ಣ ಸಹಕಾರ ನೀಡಿವೆ.

ಈ ಪರೀಕ್ಷೆಯು ಗಗನಯಾನ ನೌಕೆಯನ್ನು ಯಶಸ್ವಿಯಾಗಿ ಅಂತರಿಕ್ಷಕ್ಕೆ ಕಳುಹಿಸಿ ಮರಳಿ ಕರೆಯಿಸಿಕೊಳ್ಳಲು ಪೂರಕವಾಗಿದೆ. ಗಗನಯಾನ ನೌಕೆ ಮರಳಿ ಭೂಮಿಗೆ ಇಳಿಯುವಾಗ ಅದರ ವೇಗವನ್ನು ನಿಯಂತ್ರಿಸಲು ಡ್ರೋಗ್ ಪ್ಯಾರಾಚೂಟ್ ಸಹಾಯ ಮಾಡುತ್ತದೆ. ಈ ಪ್ಯಾರಾಚೂಟನ್ನು ಮಾರ್ಟಾರ್ ಎಂಬ ಸಾಧನದಲ್ಲಿ ಇರಿಸಲಾಗಿರುತ್ತದೆ. ಪರಿಸ್ಥಿತಿಗನುಗುಣವಾಗಿ ನೀಡಲ್ಪಟ್ಟ ಆದೇಶಕ್ಕೆ ತಕ್ಷಣ ಇದು ತೆರೆದುಕೊಳ್ಳುತ್ತದೆ. ಗಗನಯಾನ ನೌಕೆಯ ಹಿಂಭಾಗದಲ್ಲಿ ಇದು 5.8 ಮೀಟರ್ ಉದ್ದಕ್ಕೆ ಚಾಚಿಕೊಳ್ಳುತ್ತದೆ. ಇದು ಏಕ-ಹಂತದ ರೀಫಿಂಗ್ ಕಾರ್ಯವಿಧಾನವನ್ನು ಬಳಸಿಕೊಳ್ಳುತ್ತದೆ. ಪ್ಯಾರಾಚೂಟ್‌ಗಳು ಹರಡಿಕೊಂಡಾಗ ಆರಂಭಿಕ ಆಘಾತವನ್ನು ತಗ್ಗಿಸುತ್ತದೆ. ವ್ಯಾಪಕವಾದ ಮತ್ತು ನಿಯಂತ್ರಿತ ಲ್ಯಾಂಡಿಂಗ್ ಅನ್ನು ಖಾತ್ರಿಗೊಳಿಸುತ್ತದೆ ಎಂದು ಇಸ್ರೋ ಹೇಳಿದೆ.

ಒಂದನೇ ಪುಟದಿಂದ

ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ

ಕಳೆದ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳೂರಿಗೆ ಕಾರ್ಯನಿಮಿತ್ತ ತೆರಳಿದ್ದಾಗ ಅಲ್ಲಿನ ಪಾಲಿಕೆ ಆಯುಕ್ತ ಸಿ.ಎಲ್.ಆನಂದ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಾರ್ ಮ್ಯೂಸಿಯಂ ಪ್ರಸ್ತಾವನೆಯನ್ನು ಸಲ್ಲಿಸಿ, ವಾರ್ ಮ್ಯೂಸಿಯಂ ಕಲ್ಪನೆ, ಕಾರ್ಯವೈಖರಿಯನ್ನು ವಿವರಿಸಿದ್ದಾರೆ. ಅಲ್ಲದೆ, ಜಿಲ್ಲಾಧಿಕಾರಿ ಕಚೇರಿ ಪಕ್ಕದ ಎನ್‌ಸಿಸಿ ಪರೇಡ್ ಮೈದಾನದಲ್ಲಿ 4.27 ಎಕರೆ ಭೂಮಿಯನ್ನು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಮೀಸಲಿಟ್ಟಿರುವುದು ಹಾಗೂ 1.5 ಕೋಟಿ ಬಿಡುಗಡೆ ಮಾಡುವುದನ್ನು ವಿವರಿಸಿದ್ದಾರೆ. ಇದರೊಂದಿಗೆ ಚಾಮರಾಜನಗರದ ಕ್ವಾರಿ ಮಾಲೀಕ ಪುಟ್ಟಮಾದಯ್ಯ ಅವರು 3.50 ಕೋಟಿ ರೂ. ಮೌಲ್ಯ ಕಪ್ಪು ಶಿಲೆ ಹಾಗೂ ಹಾಸನದ ಗ್ರೀನ್ ಸ್ಟೋನ್ ಕೊಡುಗೆ ನೀಡಿರುವುದನ್ನು ವಿವರಿಸಿದ್ದಾರೆ. ಪ್ರಸ್ತಾವನೆಯನ್ನು ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದ್ದರಲ್ಲದೆ, ಸರ್ಕಾರ ಹಣ ಬಿಡುಗಡೆಯಾಗಿದ್ದರೂ ಕೂಡ ಮತ್ತೆ ಮಂಡಳಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಕಲ್ಲುಗಳನ್ನು ಕೊಡುಗೆ ಪಡೆದಿರುವುದಕ್ಕೆ ಶ್ಲಾಘಿಸಿದ್ದಾರೆ.

2018ರಲ್ಲೇ ಪತ್ರ: ಮೈಸೂರಿನಲ್ಲಿ ನೂತನ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ ಉದ್ಘಾಟನೆಗೊಂಡ ಹಿನ್ನೆಲೆಯಲ್ಲಿ ಹಳೆ ಜಿಲ್ಲಾಧಿಕಾರಿ ಕಟ್ಟಡವನ್ನು ವಾರ್ ಮ್ಯೂಸಿಯಂ ಮಾಡುವುದಕ್ಕಾಗಿ ಮನವಿ ಮಾಡುವ ನಿಟ್ಟಿನಲ್ಲಿ ಪತ್ರ ಬರೆಯಲಾಗಿದೆ. ಮೈಸೂರು ಉಪವಿಭಾಗಾಧಿಕಾರಿಯಾಗಿದ್ದ ವೇಳೆ ಕೆಎಎಸ್ ಹಿರಿಯ ಅಧಿಕಾರಿ ಸಿ.ಎಲ್.ಆನಂದ್ ಅವರು ಯುದ್ಧ ಸ್ಮಾರಕದ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಿ ಯಶಸ್ಸು ಕಂಡಿದ್ದರು. ಬಳಿಕ ಬಾಗಲಕೋಟೆಗೆ ವರ್ಗಾವಣೆಯಾಗಿದ್ದ ಸಿ.ಎಲ್.ಆನಂದ್ ಅವರು 2018ರಲ್ಲಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ವಾರ್ ಮ್ಯೂಸಿಯಂ ಮಾಡುವುದಕ್ಕೆ ಸಂಬಂಧಿಸಿದಂತೆ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಮಂಡಳಿ ನಿರ್ದೇಶಕ ನಿವೃತ್ತ ಬ್ರಿಗೇಡಿಯರ್ ಎಸ್.ಬಿ.ಸಜ್ಜನ್ ಅವರಿಗೆ ಪತ್ರ ಬರೆದಿದ್ದರು. ಈ ಪತ್ರದ ಆಧಾರದ ಮೇಲೆ ಎಸ್.ಬಿ.ಸಜ್ಜನ್ ಅವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಇ.ವಿ.ರಮಣ ರೆಡ್ಡಿ ಅವರಿಗೆ ಪತ್ರ ಬರೆದು ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ವಾರ್ ಮ್ಯೂಸಿಯಂ ಮಾಡುವುದಕ್ಕೆ ನೀಡುವಂತೆ ಕೋರಿದ್ದರು. ಇದೀಗ ವಾರ್ ಮ್ಯೂಸಿಯಂ ಸ್ಥಾಪನೆಗೆ ಬೇಡಿಕೆ ಹೆಚ್ಚಾಗಿದ್ದು, ಸರ್ಕಾರದ ತೀರ್ಮಾನದ ಮೇಲೆ ಎಲ್ಲರ ದೃಷ್ಟಿ ಬಿದ್ದಿದೆ.

ಸೈನಿಕರ ಕಲ್ಯಾಣ ಹಾಗೂ ಪುನರ್ವಸತಿ ಮಂಡಳಿಯಿಂದ ನಿರ್ವಹಣೆ: ಸರ್ಕಾರ ವಾರ್ ಮ್ಯೂಸಿಯಂ ಹಾಗೂ ವಾರ್ ಲೈಬ್ರರಿ ಸ್ಥಾಪನೆಗೆ ಹಳೆ ಜಿಲ್ಲಾಧಿಕಾರಿ ಕಟ್ಟಡವನ್ನು ನೀಡಿದರೆ, ಮ್ಯೂಸಿಯಂ ಹಾಗೂ ಲೈಬ್ರರಿಯನ್ನು ಸೈನಿಕರ ಕಲ್ಯಾಣ ಹಾಗೂ ಪುನರ್ವಸತಿ ಮಂಡಳಿ ನಿಯಮಾನುಸಾರ ಸ್ಥಾಪಿಸಿ, ನಿರ್ವಹಿಸಲಿದೆ. ಇದರಿಂದ ಶಿಸ್ತು ಎದ್ದು ಕಾಣಲಿದೆ. ಕಟ್ಟಡದ ನೆಲಮಹಡಿಯಲ್ಲಿ ವಾರ್ ಮ್ಯೂಸಿಯಂ ಸ್ಥಾಪಿಸಿ, ಮೊದಲ ಮಹಡಿಯಲ್ಲಿ ರಕ್ಷಣಾ ಗ್ರಂಥಾಲಯ ನಿರ್ಮಿಸಲಾಗುತ್ತದೆ. 30 ಸಾವಿರ ಚದರ ಅಡಿ ವಿಸ್ತೀರ್ಣದ ಈ ಕಟ್ಟಡದಲ್ಲಿ 27 ದೊಡ್ಡ ಕೊಠಡಿಗಳಿದ್ದು, ಅವುಗಳನ್ನು ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಬಳಸಬಹುದಾಗಿದೆ.

ಮೈಸೂರು ವಿವಿಯಲ್ಲಿ ಡಿಫೆನ್ಸ್ ಕೋರ್ಸ್ ಆರಂಭಕ್ಕೂ ಮನವಿ: ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಡಿಫೆನ್ಸ್ ಕೋರ್ಸ್ ಆರಂಭಿಸುವುದಕ್ಕೂ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಮನವಿ ಮಾಡಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದನೆ ಸಿಕ್ಕಿದೆ. ಅಲ್ಲದೆ, ಆರ್ಮ್‌ಡ್ ಫೋರ್ಸ್ ಮೆಡಿಕಲ್ ಕಾಲೇಜು ಸ್ಥಾಪನೆಗೂ ಮನವಿ ಸಲ್ಲಿಸಲಾಗಿದೆ. ಈಗಾಗಲೇ 1948ರಲ್ಲಿ ಪುಣೆಯಲ್ಲಿ ಸ್ಥಾಪನೆ ಮಾಡಲಾಗಿರುವ ಆರ್ಮ್‌ಡ್ ಫೋರ್ಸ್ ಮೆಡಿಕಲ್ ಕಾಲೇಜು ಕಾರ್ಯ ನಿರ್ವಹಿಸುತ್ತಿದ್ದು, ಅದೇ ಮಾದರಿಯಲ್ಲಿ ಮೈಸೂರಲ್ಲಿ ನಿರ್ಮಿಸಲು ಒತ್ತಾಯ ಕೇಳಿ ಬಂದಿದೆ.

ಟೊಮೆಟೊ ಬಳಿಕ ಇದೀಗ ಈರುಳ್ಳಿ ಸರದಿ

ಪರಿಶೀಲಿಸಲಾಗುತ್ತಿದ್ದು, ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಬೆಂಗಳೂರಿನ ಈರುಳ್ಳಿ ವರ್ತಕರ ಸಂಘದ ಕಾರ್ಯದರ್ಶಿಯೂ ಆಗಿರುವ ಎಪಿಎಂಸಿ ಯಾರ್ಡ್ ವ್ಯಾಪಾರಿ ರವಿಶಂಕರ್ ಬಿ ಮಾತನಾಡಿ, ಮುಂಗಾರು ಮಳೆ ಹಿನ್ನೆಲೆಯಲ್ಲಿ ಚಿತ್ರದುರ್ಗ, ದಾವಣಗೆರೆ ಹಾಗೂ ಕರ್ನಾಟಕದ ಇತರೆಡೆಯಿಂದ ದಾಸ್ತಾನು ಲಭ್ಯವಿಲ್ಲ. ಈ ಪ್ರದೇಶಗಳಿಂದ ಈರುಳ್ಳಿ ಸರಬರಾಜಿನಲ್ಲಿ ವಿಳಂಬವಾಗಬಹುದು, ಇದರಿಂದಾಗಿ ಬೆಲೆಗಳು ತೀವ್ರವಾಗಿ ಏರಿಕೆಯಾಗಬಹುದು. ಸರ್ಕಾರವು ಮಾರುಕಟ್ಟೆಗೆ ಬಫರ್ ಸ್ಟಾಕ್‌ಗಳನ್ನು ಬಿಡುಗಡೆ ಮಾಡಿದರೆ, ಸಮಸ್ಯೆ ಪರಿಹರಿಸಬಹುದು ಎಂದು ಹೇಳಿದ್ದಾರೆ. ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ರಾಜ್ಯದಲ್ಲಿ ಸುಮಾರು 4,000 ಹೆಕ್ಟೇರ್‌ನಲ್ಲಿ ಬೆಳೆ ಕೊರತೆಯಾಗುವ ನಿರೀಕ್ಷೆಯಿದೆ. ಮುಂಗಾರು ಮಳೆ ವಿಳಂಬವಾಗಿರುವುದರಿಂದ ಸುಮಾರು 6–8 ವಾರಗಳ ಕೊಯ್ಲು ವಿಳಂಬವಾಗಿದೆ. ಮಹಾರಾಷ್ಟ್ರದ ನಾಸಿಕ್ ನಲ್ಲಿಯೂ ಇದೇ ರೀತಿಯ ಸಮಸ್ಯೆಯಾಗಿದೆ. ಹೀಗಾಗಿ ಬೆಳೆ ಉತ್ಪಾದನೆಯಲ್ಲಿ ಕೊರತೆಗಳು ಎದುರಾಗಿದೆ ಎಂದು ತಿಳಿಸಿದ್ದಾರೆ.

ಐದು ರಾಜ್ಯಗಳಲ್ಲಿ NIA ದಾಳಿ

ಬಿಹಾರದ ಕತಿಹಾರ್‌ನಲ್ಲಿ ಎನ್‌ಐಎ ದಾಳಿ ನಡೆಸಿದೆ. 'ಭಯೋತ್ಪಾದನೆ, ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳ ಮೂಲಕ 2047ರ ವೇಳೆಗೆ ಭಾರತದಲ್ಲಿ ಇಸ್ಲಾಮಿಕ್ ಆಡಳಿತವನ್ನು ಸ್ಥಾಪಿಸಲು ಸಶಸ್ತ್ರ ಕೇಡರ್ ಅನ್ನು ರಚಿಸಲು ಕಈಖ ಮತ್ತು ಅದರ ಉನ್ನತ ನಾಯಕತ್ವದ ಪ್ರಯತ್ನಗಳನ್ನು ಬಹಿರಂಗಪಡಿಸಲು ಮತ್ತು ತಡೆಯಲು NIA ಕೆಲಸ ಮಾಡುತ್ತಿದೆ. ಸಮಾಜದ ಕೆಲವು ವರ್ಗಗಳ ವಿರುದ್ಧ ಸಮರ ಸಾರುವ ಮೂಲಕ ತಮ್ಮ ಭಾರತ ವಿರೋಧಿ ಹಿಂಸಾತ್ಮಕ ಅಜೆಂಡಾವನ್ನು ಮುಂದುವರಿಸಲು ಮತೀಯ ಯುವಕರನ್ನು ಆಮೂಲಾಗ್ರಗೊಳಿಸಲು ಮತ್ತು ಅವರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲು ಪಿಎಫ್‌ಐ ಪಿತೂರಿ ನಡೆಸುತ್ತಿದೆ ಎಂದು ಅವರು ಹೇಳಿದರು. ತರಬೇತುದಾರರು, ವಿವಿಧ ರಾಜ್ಯಗಳಲ್ಲಿ ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು ತಮ್ಮ ಅತ್ಯಂತ ಮೂಲಭೂತವಾದ ಕೇಡರ್‌ಗಾಗಿ ನಡೆಸುತ್ತಿದ್ದಾರೆ. ಈ ಸಂಚು ವಿಫಲಗೊಳಿಸಲು ಎನ್‌ಐಎ ದಾಳಿ ನಡೆಸುತ್ತಿದೆ ಎಂದರು.

ಸ್ವಾತಂತ್ರ್ಯ ದಿನಾಚರಣೆ ಕವಾಯತಿಗೆ ತಾಲೀಮು

ಜಿಲ್ಲಾ ಪೊಲೀಸ್, ಸಶಸ್ತ್ರ ಮೀಸಲು ಪಡೆ, ಸಂಚಾರಿ ಪೊಲೀಸ್, ಹೋಂ ಗಾರ್ಡ್, ಅಗ್ನಿಶಾಮಕ ದಳ, ಮಹಿಳಾ ಪೊಲೀಸ್, ಕೆಎಸ್‌ಆರ್‌ಪಿ, ಎನ್‌ಸಿಸಿಯ ನೌಕಾದಳ, ವಾಯುದಳ, ಭೂದಳದ ತಂಡ, ಸೇವಾ ದಳದ ಬಾಲಕ–ಬಾಲಕಿಯರ ತಂಡ, ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳ ತಂಡ ಸೇರಿದಂತೆ ಒಟ್ಟು 23 ತಂಡಗಳು ಪಥ ಸಂಚಲನದಲ್ಲಿ ಪಾಲ್ಗೊಂಡು ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಲಿದ್ದಾರೆ. ಶುಕ್ರವಾರ ಮತ್ತು ಶನಿವಾರವೂ ತಾಲೀಮನ್ನು ನಡೆಸಲಾಗಿತ್ತು ಭಾನುವಾರವಾದ ಇಂದು ಅಂತಿಮ ತಾಲೀಮನ್ನು ಆಯೋಜಿಸಲಾಗಿತ್ತು. ತೆರೆದ ವಾಹನದಲ್ಲಿ ಡಿಸಿಪಿ ಎಂ.ಮುತ್ತುರಾಜ್ ಅವರು ತಾಲೀಮು ವೀಕ್ಷಿಸಿ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ನಡೆಸುವ ಪರೇಡ್ ಶಿಸ್ತಿನಿಂದ ಕೂಡಿರಬೇಕು. ಪಥ ಸಂಚಲನದಲ್ಲಿ ಪಾಲ್ಗೊಳ್ಳುವ ಎಲ್ಲಾ ಪೊಲೀಸ್, ಎನ್‌ಸಿಸಿ, ಶಾಲಾ ವಿದ್ಯಾರ್ಥಿಗಳು ತಮ್ಮ ಸಮವಸ್ತ್ರವನ್ನು ಸ್ವಚ್ಛವಾಗಿ ಇಟ್ಟುಕೊಂಡಿರಬೇಕು. ಶೂಗೆ ಪಾಲೀಶ್ ಮಾಡಿರಬೇಕು. ಮೈದಾನದಲ್ಲಿ ಇದ್ದ ವೇಳೆ ಶಿಸ್ತು ಕಾಯ್ದುಕೊಳ್ಳಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ: ಧ್ವಜಾರೋಹಣ ಹಾಗೂ ಪಥ ಸಂಚಲನ ನೆರವೇರಿದ ಬಳಿಕ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಈ ಬಾರಿ 1700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೂರು ಗೀತೆಗಳಿಗೆ ಪ್ರತ್ಯೇಕವಾಗಿ ನೃತ್ಯ ಪ್ರದರ್ಶಿಸುವ ಗಮನ ಸೆಳೆಯಲಿದ್ದಾರೆ. ಇಂದು ನಡೆದ ತಾಲೀಮಿನಲ್ಲಿ ಸೆಂಟ್ ಆನ್ಸ್ ಶಾಲೆಯ 700 ಮಕ್ಕಳು ಹಾಗೂ ಸೆಂಟ್ ಮಥಾಯಿಸ್ ಶಾಲೆಯ 500 ಮಕ್ಕಳು ದೇಶಭಕ್ತಿ ಗೀತೆಗೆ ಪ್ರತ್ಯೇಕವಾಗಿ ನೃತ್ಯ ಪ್ರದರ್ಶಿಸಿದರು. ಬಳಿಕ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಶಾಲೆಯ 300 ವಿದ್ಯಾರ್ಥಿಗಳು ಹಾಗೂ ಕೆಪಿ ಕಾನ್ವೆಂಟ್‌ನ 200 ವಿದ್ಯಾರ್ಥಿಗಳು ಒಂದುಗೂಡಿ ಸಂಗೊಳ್ಳಿ ರಾಯಣ್ಣನ ಗೀತೆಗೆ ನೃತ್ಯ ಪ್ರದರ್ಶಿಸಿದರಲ್ಲದೆ, ಸಂಗೊಳ್ಳಿ ರಾಯಣ್ಣನ ಪರಾಕ್ರಮದ ಬಗ್ಗೆ ಕೂಡ ಬೆಳಕು ಚೆಲ್ಲುವಂತಹ ಪ್ರಯತ್ನ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ರೈತರ ಬೆಳೆಗಾಗಿ ಹಾರಂಗಿಯಿಂದ ಕಟ್ಟು ಪದ್ಧತಿಯಲ್ಲಿ ನಾಲೆಗೆ ನೀರು

ಹಾರಂಗಿ ನೀರಾವರಿ ಸಲಹಾ ಸಮಿತಿ ತೀರ್ಮಾನ



ಮೈಸೂರು, ಆ.13(ಎಸ್‌ಬಿಡಿ)– ರೈತರ ಬೆಳೆಗಾಗಿ ಕೊಡಗಿನ ಹಾರಂಗಿ ಜಲಾಶಯದಿಂದ ಈಗಿನಿಂದಲೇ ಕಟ್ಟು ನೀರು ಪದ್ಧತಿಯಲ್ಲಿ ನಾಲೆಗಳಿಗೆ ನೀರು ಹರಿಸಲು ತೀರ್ಮಾನಿಸಲಾಗಿದೆ.

ಮೈಸೂರಿನ ಕಾಡಾ ಕಟ್ಟಡದಲ್ಲಿರುವ ನೀರಾವರಿ ಇಲಾಖೆ ದಕ್ಷಿಣ ವಲಯ ಮುಖ್ಯ ಇಂಜಿನಿಯರ್ ಕಚೇರಿಯಲ್ಲಿ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಹಾರಂಗಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಈಗಿನಿಂದಲೇ ಕಟ್ಟು ನೀರು ಪದ್ಧತಿ (ತಿಂಗಳಲ್ಲಿ 15 ದಿನ ನೀರು ಹರಿಸಿ, 15 ದಿನ ನಿಲ್ಲಿಸುವುದು)ಯಲ್ಲಿ ಹಾರಂಗಿ ಜಲಾಶಯದ ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ಮುಂಗಾರು ಹಂಗಾಮಿನ ನೀರು ಒದಗಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಅವರ ಸಮ್ಮುಖದಲ್ಲಿ ಹಾರಂಜಿ ಜಲಾಶಯದಲ್ಲಿನ ಸ್ಥಿತಿಗತಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಚರ್ಚಿಸಲಾಗಿದೆ. ಸದ್ಯ ಮುಂಗಾರು ವೈಫಲ್ಯದಿಂದ ಜಲಾಶಯಕ್ಕೆ ನೀರಿನ ಒಳಹರಿವು ಕಡಿಮೆಯಾಗಿದೆ. ಪ್ರಸ್ತುತ ಸಂಗ್ರಹವಿರುವ ನೀರಿನ ಪ್ರಮಾಣ, ಹಿಂದಿನ ವರ್ಷಗಳ ಕನಿಷ್ಠ ಒಳಹರಿವಿನ ಪ್ರಮಾಣ, ಹಂಚಿಕೆಯನ್ವಯ ಅಗತ್ಯವಿರುವ ನೀರಿನ ಪ್ರಮಾಣ ಇನ್ನಿತರ ಅಂಶಗಳನ್ನು ಅವಲೋಕಿಸಿ ಕಟ್ಟು ನೀರು ಪದ್ಧತಿಯಲ್ಲಿ ನಾಲೆಗಳಿಗೆ ನೀರು ಬಿಡಲು ಸಲಹಾ ಸಮಿತಿ ತೀರ್ಮಾನಿಸಿದೆ ಎಂದು ತಿಳಿಸಿದರು. ಸಭೆಯಲ್ಲಿ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಎ.ಮಂಜು, ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಕೊಡಗು ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನೀರಾವರಿ ಇಲಾಖೆ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ಆರ್.ಎಲ್. ವೆಂಕಟೇಶ್, ಹಾರಂಗಿ ಜಲಾಶಯ ನೀರು ಬಳಕೆದಾರರ ಸಂಘದ ಅಧ್ಯಕ್ಷರು, ಪೊಲೀಸ್ ಅಧಿಕಾರಿಗಳು, ನೀರಾವರಿ ಇಲಾಖೆ ಎಂಜಿನಿಯರ್‌ಗಳು, ಕೃಷಿ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಹಾರಂಗಿ ಸ್ಥಿತಿಗತಿ: ಜಲಾಶಯದ ನೀರಿನ ಗರಿಷ್ಠ ಮಟ್ಟ 2859 ಅಡಿಗಳಿದ್ದು, ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ 8.50 ಟಿಎಂಸಿ. ಇದರಲ್ಲಿ ಉಪಯುಕ್ತ ಸಂಗ್ರಹಣಾ ಸಾಮರ್ಥ್ಯ 7.75 ಟಿಎಂಸಿ. ಕಳೆದ 20 ವರ್ಷಗಳ ಕನಿಷ್ಠ ಒಳಹರಿವನ್ನ ಆಧರಿಸಿ ನವೆಂಬರ್ ಅಂತ್ಯದವರೆಗೆ 6.57 ಟಿಎಂಸಿ ನೀರು ಜಲಾಶಯಕ್ಕೆ ಹರಿದುಬರಬಹುದೆಂದು ಅಂದಾಜಿಸಲಾಗಿದೆ. ಹಾರಂಗಿ ಜಲಾಶಯದ ಎಡದಂಡೆ ಹಾಗೂ ಬಲದಂಡೆ ನಾಲೆ ವ್ಯಾಪ್ತಿಯ ಒಟ್ಟು 1,04,895 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬೇಕಾಗಿದೆ. ಕಾವೇರಿ ನ್ಯಾಯಾಧೀಕರಣ ಅಂತಿಮ ತೀರ್ಪಿನಂತೆ ಹಾರಂಗಿ ಯೋಜನೆಗೆ 8.60 ಟಿಎಂಸಿ ನೀರು ಹಂಚಿಕೆಯಾಗಿದೆ. ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗೆ 1.63 ಟಿಎಂಸಿ ನೀರು ಹಂಚಿಕೆಯಾಗಿದೆ. ಹಾರಂಗಿ ಜಲಾಶಯದ ನಾಲೆಗಳ ವಿನ್ಯಾಸಿತ ಪ್ರಮಾಣದ 1936 ಕ್ಯುಸೆಕ್ ನೀರನ್ನು ಹರಿಸಿದ್ದಲ್ಲಿ ಹಂಚಿಕೆಯಾಗಿರುವ 8.60 ಟಿಎಂಸಿ ನೀರು ಕೇವಲ 51 ದಿನಗಳವರೆಗೆ ಮಾತ್ರ ಹರಿಸಬಹುದಾಗಿರುತ್ತದೆ.

ಹಾರಂಗಿ ಯೋಜನೆ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ 292 ಸಣ್ಣ ನೀರಾವರಿ ಕೆರೆಗಳಿದ್ದು, 2.92 ಟಿಎಂಸಿ ಸಂಗ್ರಹಣಾ ಸಾಮರ್ಥ್ಯವಿದೆ. ಕೆರೆಗಳಿಗೆ ಶೇ.50ರಷ್ಟು ನೀರು ತುಂಬಿಸಲು 1.50 ಟಿಎಂಸಿ ನೀರಿನ ಅವಶ್ಯಕತೆ ಇದೆ. ಸದರಿ ಕೆರೆಗಳಿಗೆ 21,901 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ನೀರಾವರಿ ಕಲ್ಪಿಸಲು 4.134 ಟಿಎಂಸಿ ನೀರಿನ ಅಗತ್ಯವಿದೆ. ಅವಶ್ಯವಿರುವ ನೀರಿನ ಪ್ರಮಾಣ ಹಂಚಿಕೆಯಾದ ನೀರಿನ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮಳೆ ಕೊರತೆಯಿಂದ ನಾಲೆಗಳಲ್ಲಿ ಸತತವಾಗಿ ನೀರು ಹರಿಸಲು ಸಾಧ್ಯವಿಲ್ಲ. ಹಾಗಾಗಿ ಈಗಿನಿಂದ ನವೆಂಬರ್ ಅಂತ್ಯದವರೆಗೆ ಕಟ್ಟುನೀರು ಪದ್ಧತಿ ಆಧಾರದಲ್ಲಿ 60 ದಿನ ನಾಲೆಗೆ ನೀರು ಹರಿಸಬಹುದು ಎಂದು ಸಭೆಯ ಆರಂಭದಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

ಕೆ.ಆರ್.ಮಿಲ್ ಕಾರ್ಮಿಕರಿಗೆ ಸೂಕ್ತ ಪರಿಹಾರಕ್ಕೆ ಒತ್ತಾಯ

ಮೈಸೂರು, ಆ.13–ಮೈಸೂರು–ಬೆಂಗಳೂರು ರಸ್ತೆಯಲ್ಲಿದ್ದ ಇತಿಹಾಸ ಪ್ರಸಿದ್ಧ ಶ್ರೀ ಕೃಷ್ಣರಾಜೇಂದ್ರ ಮಿಲ್ 6.5.1984 ರಲ್ಲಿ ಮುಚ್ಚಲ್ಪಟ್ಟಿತು. ಈ ಸಂಸ್ಥೆಯಲ್ಲಿ ಸುಮಾರು 2800 ಕಾರ್ಮಿಕರು ಕೆಲಸ ಮಾಡುತ್ತಿದ್ದು, ಈ ಕಾರ್ಮಿಕರಿಗೆ ಇಂದಿಗೂ ಯಾವುದೇ ಪರಿಹಾರದ ಹಣ ಸಂದಾಯವಾಗಿಲ್ಲ ಎಂದು ಮೈಸೂರು ಡಿವಿಷನ್ ಜನರಲ್ ಎಂಪ್ಲಾಯೀಸ್ ಅಸೋಸಿಯೇಷನ್ ಆರೋಪಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅಸೋಸಿಯೇಷನ್ ಉಪಾಧ್ಯಕ್ಷ ಬಿ.ಮರಿಸ್ವಾಮಿ, 2800 ಕಾರ್ಮಿಕರ ಪೈಕಿ ಈಗಾಗಲೇ 1000ಕ್ಕೂ ಹೆಚ್ಚು ಕಾರ್ಮಿಕರು ನಿಧನ ಹೊಂದಿದ್ದಾರೆ. 40 ವರ್ಷವಾಗಿದ್ದರೂ ಇಲ್ಲಿನ ಕಾರ್ಮಿಕರು ಯಾವುದೇ ಪರಿಹಾರದ ಹಣ ಬಂದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿಯೂ ವಿಳಂಬ ಆಗುತ್ತಿದೆ. ಆದ್ದರಿಂದ ಸರ್ಕಾರ ಕೂಡಲೇ ಕಾನೂನು ಕ್ರಮ ತೆಗೆದುಕೊಂಡು ಕಾರ್ಮಿಕರಿಗೆ ಪರಿಹಾರದ ಹಣ ಕೊಡಿಸುವಂತೆ ಒತ್ತಾಯಿಸಿದ್ದಾರೆ. ತಪ್ಪಿದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಮುಚ್ಚಿರುವ ಕೆಆರ್. ಮಿಲ್ ಆಸ್ತಿ ಮುಟ್ಟುಗೋಲು ಹಾಕಿ ಕೊಂಡು 2800 ಕಾರ್ಮಿಕರಿಗೂ ನಿವೇಶನ ಮಾಡಿ, ವಿತರಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ದಸರಾ ಪೂರ್ವಭಾವಿ ಮಟ್ಟಿ ಕುಸ್ತಿ

ಮೈಸೂರು, ಆ.13(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಪೂರ್ವಭಾವಿಯಾಗಿ ಮೈಸೂರಿನ ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ವತಿಯಿಂದ ಭಾನುವಾರ 60 ಜೊತೆ ಮಟ್ಟಿ ಕುಸ್ತಿ ನಡೆಸಲಾಯಿತು. ದೊಡ್ಡಕೆರೆ ಮೈದಾನ, ಸಾಹುಕಾರ್ ಎಸ್.ಚನ್ನಯ್ಯ ಕ್ರೀಡಾಂಗಣದ ನವೀಕೃತ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡದಲ್ಲಿ 10 ಜೊತೆ ಮಹಿಳೆ ಹಾಗೂ 50 ಜೊತೆ ಪುರುಷ ಕುಸ್ತಿಪಟುಗಳು ಸೆಣಸಾಡಿದರು. ಅಖಾಡದ ಸುತ್ತ ನೆರೆದಿದ್ದ ಕುಸ್ತಿ ಪ್ರೇಮಿಗಳು ಶಿಳ್ಳೆ, ಕೇಕೆ ಮೂಲಕ ಕ್ರೀಡಾಳುಗಳನ್ನು ಹುರಿದುಂಬಿಸಿದರು. ಚಾತುರ್ಮಾಸ್ಯ ವ್ರತದಲ್ಲಿರುವ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಸ್ವಯಂ ಪ್ರೇರಣೆಯಿಂದ ಆಗಮಿಸಿ, ಒಂದು ಗಂಟೆಗೂ ಹೆಚ್ಚು ಕಾಲ ಕುಸ್ತಿ ವೀಕ್ಷಿಸಿ, ದೇಸಿ ಕ್ರೀಡೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಮಟ್ಟಿ ಪೂಜೆಯ ನಂತರ ಉದ್ಯಮಿ ಜಯದೀಪ್ ಭಾಲೇರಾವ್ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದರು. ಖ್ಯಾತ ವಕೀಲರಾದ ಓ.ಶಾಮಭಟ್, ಶ್ರೀ ವೀರಾಂಜನೇಯ ಗರಡಿ ಸೇವಾ ಟ್ರಸ್ಟ್ ಅಧ್ಯಕ್ಷ ಪೈಲ್ವಾನ್ ಮಂಜು, ಕೆ.ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾ



ಲಯದ ಅಧ್ಯಕ್ಷ ಎಂ.ಗಣೇಶ್, ಕಾರ್ಯದರ್ಶಿ ಜಿ.ಎನ್. ಅನಂತವರ್ಧನ, ಲೆಕ್ಕ ಪರಿಶೋಧಕ ಗಂಗಾಧರ ಗೌಡ, ಶ್ರೀ ಜಯಚಾಮರಾಜ ಗರಡಿ ಸಂಘದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಎಸ್.ಮಹದೇವ್, ಜಂಟಿ ಕಾರ್ಯದರ್ಶಿ ಸಿ.ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು. ಪುಟ್ಟಸಿದ್ದನಾಯಕ, ಅನಂತಪದ್ಮನಾಭ, ವಿಜಯಕುಮಾರ, ಎಂ.ಗಣೇಶ ಹಾಗೂ ಈಶ್ವರ್ ಕ್ರೀಡಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು.

ಒಡೆಯರ್ ಫೌಂಡೇಶನ್ ನೆರವು: ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘ 1948ರಲ್ಲಿ ಸ್ಥಾಪನೆಗೊಂಡಿದ್ದು, ಸಾಹುಕಾರ್ ಎಸ್.ಚನ್ನಯ್ಯ ಅಧ್ಯಕ್ಷ ಹಾಗೂ ಪೈ.ಎ.ಶಿವನಂಜಪ್ಪ ಕಾರ್ಯದರ್ಶಿಯಾಗಿದ್ದಾಗ ಅಂದು ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ದೊಡ್ಡಕೆರೆ ಮೈದಾನದಲ್ಲಿ ಕುಸ್ತಿ ಅಖಾಡವನ್ನು 1962ರಲ್ಲಿ ಲೋಕಾರ್ಪಣೆ ಮಾಡಿದರು. 1968ರಿಂದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸಂಘದ ಗೌರವಾಧ್ಯಕ್ಷರಾಗಿದ್ದರು. ಕುಸ್ತಿ ಅಖಾಡವನ್ನು ಮಳೆ, ಬಿಸಿಲಿನಿಂದ ರಕ್ಷಿಸುವ ಉದ್ದೇಶದಿಂದ ಪ್ರಮೋದಾದೇವಿ ಒಡೆಯರ್ ಅವರು ಹೆಚ್.ಹೆಚ್.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ವತಿಯಿಂದ ಮೇಲ್ಛಾವಣಿ ನಿರ್ಮಿಸಿ ಕೊಟ್ಟಿದ್ದು, ಈ ನವೀಕೃತ ಅಖಾಡದಲ್ಲಿ ಮೊದಲಿಗೆ ಇಂದು ಕುಸ್ತಿ ಪಂದ್ಯಾವಳಿ ನಡೆಸಲಾಯಿತು.

ಯುವಕರು ದೇಶ ಸೇವೆ ಮಾಡುವ ಬಗ್ಗೆ ಚಿಂತಿಸಿ

ಕೇಂದ್ರ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಭಿಮತ



ಮೈಸೂರು,ಆ.13(ಎಸ್‌ಪಿಎನ್)– ಪ್ರಸ್ತುತ ಯುವಕರು ದೇಶ ನನಗಾಗಿ ಏನು ಮಾಡಿದೆ ಎಂಬುದರ ಬದಲು, ನಾನು ದೇಶಕ್ಕಾಗಿ ಏನು ಮಾಡಿದ್ದೇನೆ ಎಂದು ಚಿಂತಿಸಬೇಕು ಎಂದು ಕೇಂದ್ರ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನ ವಿಜಯ ವಿಠಲ ವಿದ್ಯಾಸಂಸ್ಥೆ ಆವರಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಸ್ವರಾಜ್ಯ–ಸುರಾಜ್ಯ' ಕವಿಗೋಷ್ಠಿಯಲ್ಲಿ ಮಾತನಾಡಿದರು.

ಆದಿ ಕವಿ ಪಂಪ, ಪಶ್ಚಿಮ ಬಂಗಾಳದ ಬಂಕಿಮ್ ಚಂದ್ ಚಟರ್ಜಿ ಅವರು ತಮ್ಮ ವಿಚಾರಧಾರೆಗಳ ಮೂಲಕ ದೇಶಕ್ಕಾಗಿ ನಾನು ಏನು ಮಾಡಿದ್ದೇನೆ? ಏನು ಮಾಡಬೇಕು? ಹಾಗೂ ವ್ಯಕ್ತಿ ಎಷ್ಟೇ ಎತ್ತರಕ್ಕೆ ಬೆಳೆದರೂ ನಾವು ಹುಟ್ಟಿ ಬೆಳೆದ ನೆಲವನ್ನು ಮರೆಯಬಾರದು ಎಂಬದನ್ನು ತೋರಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಸ್ವಾಜ್ಯ ಪರಿಕಲ್ಪನೆ ಹೇಗಿರಬೇಕು ಎಂಬುದಕ್ಕೆ ನಮ್ಮ ಸಂವಿಧಾನದಲ್ಲಿ ಅಡಕವಾಗಿದೆ. ಆದರೆ, ಸುರಾಜ್ಯ ಹೇಗಿರಬೇಕು ಎಂಬುದಕ್ಕೆ ಆದಿಕವಿ ಪಂಪ, ಬಂಕಿಮ ಚಂದ್ ಚಟರ್ಜಿ ಸೇರಿದಂತೆ ಇತರೆ ಗಣ್ಯಮಾನ್ಯರು ತಮ್ಮ ಬರಹಗಳಲ್ಲಿ ಉಲ್ಲೇಖ ಮಾಡಿದ್ದಾರೆ. ಇದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದರು.

ಸುಮತಿ ಸುರೇಶ್, ಆರತಿ ರಘುವೀರ್, ಎಸ್.ಕುಮಾರಸ್ವಾಮಿ, ಸೇ.ಆ. ಗಫೂರ್, ಇಂದಿರಾ ಪಾಟೀಲ್, ಡಾ. ಶ್ಯಾಮಲ, ಎನ್.ಸುಧೀರ್‌ಕುಮಾರ್, ಎಸ್.ಪ್ರಕಾಶ್, ಎಸ್.ಎನ್.ದರ್ಶನ್, ಅನಿಲ್ ರಾಜ್, ರಾ.ರಮಾಕಾಂತ, ಸಿ.ಚಾಮ ಶೆಟ್ಟಿ, ನವೀನ್‌ಕುಮಾರ್, ಆಲ್ವಿನ್ ಪವನ್, ಎನ್. ಶಿಲ್ಪ (ಹಿಂದಿ), ಎಂ.ಎನ್.ಜಯಂತಿ, ಎನ್.ಚೇತನಶರ್ಮಾ, ರತ್ನಚಂದ್ರ ಶೇಖರ್, ದಿಲೀಪ ಹೊನ್ನವಳ್ಳಿ, ಸತೀಶ್ ಎಸ್.ದಳವಾಯಿ, ಸಿ.ವಾಣಿ ರಾಘವೇಂದ್ರ, ಐಸಿರಿ, ಕಾಂತಿ (ಹಿಂದಿ), ಪುಣ್ಯ, ಎಸ್.ಆರ್. ಮಂಜುನಾಥ್, ರಂಗಲಕ್ಷ್ಮಿ ಜಾಗದೇಶಿ, ಪ್ರಭಾಶಾಸ್ತ್ರಿ, ಡಿ.ಲೋಕೇಶ್ ಕಳಲೆ, ಎಚ್.ಜಿ.ನಿತ್ಯಾ, ಡಾ.ಎಚ್.ಎಂ. ಅಂಕಯ್ಯ, ಪ್ರೀತಂ ಎಸ್.ರಾವ್, ವಾಣಿ ಸುಬ್ಬಯ್ಯ, ಕೆ.ಟಿ.ಶ್ರೀಮತಿ, ಸಾರಂಗ, ಜಿ.ವಿನೋದ ಕುಮಾರ್, ಗೌರಮ್ಮ, ಮಂಜುಳ ದೇವ್ ಅವರ ಸ್ವರಚಿತ ಕವಿತೆ ವಾಚನ ಮಾಡಿದರು. ಈ ವೇಳೆ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾಧ್ಯಕ್ಷ ಪ್ರೊ.ಜಿ. ರಾಮರತನ್, ವಿಜಯವಿಠಲ ಪಿಯು ಕಾಲೇಜು ಪ್ರಾಂಶುಪಾಲ ಸತ್ಯಪ್ರಸಾದ್, ಅಭಾಸಪ ಕರ್ನಾಟಕ ವಲಯ ಪ್ರಮುಖ್ ಡಾ.ವಿ.ರಂಗನಾಥ್, ಸುಬ್ರಹ್ಮಣ್ಯ ಇದ್ದರು.

ಆ.20, ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು,ಆ.13–ಜೆಎಸ್‌ಎಸ್ ವಿವಾಹ ವೇದಿಕೆ ಆಶ್ರಯದಲ್ಲಿ ಆ.20ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ. ಸಮಾವೇಶ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಆಸಕ್ತರು ದೂ. 0821–2430322, ಮೊ. 9611070674 ಸಂಪರ್ಕಿಸಬಹುದು.

ಇಂದು ಮುದ್ರಾ ಪ್ರಾಣಾಯಾಮ ಶಿಬಿರ

ಮೈಸೂರು,ಆ.13–ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾಪ್ರಾಣಾಯಾಮ ರಿಸರ್ಚ್ ಸೆಂಟರ್ ವತಿಯಿಂದ ಮೈಸೂರಿನ ಮಹಿಳಾ ಸಮಾಜದಲ್ಲಿ ಆ.14ರಂದು ಬೆಳಗ್ಗೆ 6.30ರಿಂದ 7.30 ಹಾಗೂ ಸಂಜೆ 6.30ರಿಂದ 7.30ರವರೆಗೆ ಮುದ್ರಾಪ್ರಾಣಾಯಾಮ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ.9945614565.

ಯುವ ದಿನಾಚರಣೆ ಪ್ರಯುಕ್ತ ಆರೋಗ್ಯ, ಯೋಗಕ್ಷೇಮ, ಕ್ರೀಡೆ ಕುರಿತು ಕಾರ್ಯಕ್ರಮ

ಆರೋಗ್ಯ, ಯೋಗ, ಕ್ರೀಡೆಗೆ ಮೈಸೂರಲ್ಲಿ ಪ್ರೋತ್ಸಾಹ ಸಿಕ್ಕಿದೆ

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಮೈಸೂರು,ಆ.13(ಪಿಎಂ)– ಆರೋಗ್ಯ, ಯೋಗ ಮತ್ತು ಕ್ರೀಡಾ ವಲಯಕ್ಕೆ ಮೈಸೂರಿನಲ್ಲಿ ಹಿಂದಿನಿಂದಲೂ ಒಳ್ಳೆಯ ಪ್ರೋತ್ಸಾಹ ದೊರೆತಿದೆ ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಜಿ–20 ಅಡಿ ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಸಹಕಾರದೊಂದಿಗೆ ಅಂತಾರಾಷ್ಟ್ರೀಯ ಯುವ ದಿನಾಚರಣೆ (ಪ್ರತಿ ವರ್ಷ ಆಗಸ್ಟ್ 12) ಪ್ರಯುಕ್ತ ಯುವ ಜನತೆ ಕೇಂದ್ರೀಕರಿಸಿ ಭಾನುವಾರ ಹಮ್ಮಿಕೊಂಡಿದ್ದ 'ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆಗಳು' ಕುರಿತ ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಮೈಸೂರು ಸಂಸ್ಥಾನದ ವತಿಯಿಂದ ಆರೋಗ್ಯ, ಯೋಗ ಮತ್ತು ಕ್ರೀಡೆಗೆ ಮೈಸೂರಿನಲ್ಲಿ ಉತ್ತೇಜನ ದೊರೆತಿದೆ. ಮೈಸೂರು ಸಂಸ್ಥಾನವು ಆರೋಗ್ಯ ಸೇವೆಗೆ ಭದ್ರ ಬುನಾದಿ ಹಾಕಿತು. ಮೈಸೂರು ವೈದ್ಯಕೀಯ ಕಾಲೇಜು ಸ್ಥಾಪನೆ ಮೂಲಕ ಅಲೋಪತಿ ವೈದ್ಯಶಾಸ್ತ್ರ ಉತ್ತೇಜನ ನೀಡಲಾಯಿತು. ಅಲ್ಲದೆ, ಭಾರತೀಯ ಪರಂಪರೆಯ ವೈದ್ಯಕೀಯ ಪದ್ಧತಿಗೂ ಪ್ರೋತ್ಸಾಹ ನೀಡಲಾಯಿತು. ಹೀಗೆ ಎರಡು ವೈದ್ಯ ಪದ್ಧತಿಗಳಿಗೂ ಉತ್ತೇಜನ ನೀಡಿ, ಜನತೆಯ ಸೇವೆಗೆ ಪೂರಕವಾಗಿ ಬಳಸಿಕೊಳ್ಳಲಾಯಿತು ಎಂದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೈಸೂರು ಉಪ ವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಮಾತನಾಡಿ, ಇಲ್ಲಿ ನೆರೆದಿರುವ ಯುವ ಜನರನ್ನು ನೋಡಿ ನನಗೆ ಅತೀವ ಸಂತಸ ಉಂಟಾಗಿದೆ. ಇತರೆ ಎಲ್ಲಾ ದೇಶಗಳಿಗಿಂತಲೂ ಭಾರತ ಹೆಚ್ಚಿನ ಸಂಖ್ಯೆಯ ಯುವ ಜನರನ್ನು ಹೊಂದಿದೆ. ದೇಶದ ಜನಸಂಖ್ಯೆಯಲ್ಲಿ ಶೇ.50ರಷ್ಟು ಯುವ ಜನರು ನಮ್ಮ ದೇಶದಲ್ಲಿದ್ದಾರೆ. ಹಾಗಾಗಿ ಭಾರತ ಭವ್ಯ ಭವಿಷ್ಯವು ನಮ್ಮ ಯುವ ಜನರ ಕೈಯಲ್ಲಿ ಸುಭದ್ರವಾಗಿರಲಿದೆ ಎಂದು ಹೇಳಿದರು.

ಇಂದು ನಮ್ಮ ಸಮಾಜದಲ್ಲಿ ನಕಾರಾತ್ಮಕ ಚಿಂತನೆ ತಾಂಡವವಾಡುತ್ತಿದೆ. ಇದರಿಂದ ಎಲ್ಲರಲ್ಲೂ ಅಶಾಂತಿ ಮನೆ ಮಾಡಿದೆ. ಯುವ ಜನತೆ ಸೇರಿದಂತೆ ಪ್ರತಿಯೊಬ್ಬರು ಸಕಾರಾತ್ಮಕ ಚಿಂತನೆ ಅಳವಡಿಸಿಕೊಂಡು ನೆಮ್ಮದಿಯಿಂದ ಜೀವನ ಸಾಗಿಸಬೇಕು. ಈ ನಿಟ್ಟಿನಲ್ಲಿ ನೆಮ್ಮದಿ ಬದುಕು ಮಾಡುವ ಬಗ್ಗೆ ನಮ್ಮ ವಿದ್ಯಾಲಯದಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ಮುಂಬೈನ ಸಮಾಲೋಚಕ ಡಾ.ಇ.ವಿ.ಸ್ವಾಮಿನಾಥನ್ 'ಯೋಗಕ್ಷೇಮ ಎಂಬ ವಿಜ್ಞಾನ' ಕುರಿತು ವಿಚಾರ ಮಂಡಿಸಿದರು. ಬಳಿಕ 'ಸಮೃದ್ಧ ಪರಿಸರಕ್ಕಾಗಿ ಹಸಿರು ಕೌಶಲಗಳು ಹಾಗೂ ಭವಿಷ್ಯದ ಸಾಧ್ಯತೆಗಳು' ಕುರಿತು ಸಂವಾದ ನಡೆಯಿತು. ಇದೇ ವೇಳೆ ಜು.21ರಿಂದ ಆ.12ರವರೆಗೆ ಶಾಲಾ–ಕಾಲೇಜು ಮತ್ತು ಯುವ ಸಂಘಟನೆಗಳಿಗಾಗಿ ಹಮ್ಮಿಕೊಂಡಿದ್ದ ಪೋಸ್ಟರ್ ಮೇಕಿಂಗ್, ಸಣ್ಣ ಕಥೆ ರಚನೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಯುವ ಜನತೆ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಲ್ಲಿ ಶಾಂತಿ ನಡಿಗೆಗೆ ಸಂಚಾರ ಪೊಲೀಸ್ ಎಸಿಪಿ ಹೆಚ್.ಪರಶುರಾಮಪ್ಪ ಚಾಲನೆ ನೀಡಿದರು. ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಚಿಕ್ಕ ಗಡಿಯಾರ ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮೂಲಕ ಕಲಾಮಂದಿರ ಆವರಣದಲ್ಲಿ ನಡಿಗೆ ಅಂತ್ಯಗೊಂಡಿತು. ಇದರಲ್ಲಿ ಯುವ ಜನರು ಮತ್ತು ನಾಗರಿಕರು ಸೇರಿದಂತೆ 250ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ವ್ಯವಸ್ಥಾಪಕಿ ಡಾ.ಶಿಲ್ಪಿ ಅಗರವಾಲ್, ಭಾರತ್ ಕ್ಯಾನ್ಸರ್ ಆಸ್ಪತ್ರೆ ವೈದ್ಯ ಡಾ.ಆರ್.ರಕ್ಷಿತ್ ಶೃಂಗೇರಿ, ಅಪೋಲೋ ಆಸ್ಪತ್ರೆಯ ವೈದ್ಯೆ ಡಾ.ಕವಿತಾ ಪ್ರಕಾಶ್, ನೆಹರು ಯುವ ಕೇಂದ್ರದ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್, ಚಲನಚಿತ್ರ ನಟಿ ರೇಖಾ ರೋಹಿತ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆಗಳು' ಕುರಿತ ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು ಆಧುನಿಕ ಯೋಗದ ಜನ್ಮಸ್ಥಳ....

ಆಧುನಿಕ ಯೋಗ ವಿಧಾನ ಜನ್ಮ ತಾಳಿದ್ದು ಮೈಸೂರಿನಲ್ಲೇ. ಟಿ.ಕೃಷ್ಣಮಾಚಾರ್ಯ ಅವರ ಮೂಲಕ ಈ ಯೋಗ ವಿಧಾನ ಪ್ರಗತಿ ಹೊಂದಿತು. ಮೈಸೂರಿನ ಸಂಸ್ಕೃತ ಪಾಠಶಾಲೆ ಯೋಗ ಚಟುವಟಿಕೆಯ ತಾಣವಾಗಿತ್ತು. ಯೋಗ ತತ್ವಶಾಸ್ತ್ರದ ಪುನರುಜ್ಜೀವನವೂ ಮೈಸೂರಿನಲ್ಲೇ ನಡೆಯಿತು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಇಂದು ಇಂತಹ ಉತ್ತಮ ಕಾರ್ಯಕ್ರಮ ಮೂಲಕ ಯುವ ಜನತೆಗೆ ಮಾರ್ಗದರ್ಶನ ನೀಡುತ್ತಿರುವುದು ಶ್ಲಾಘನೀಯ.

–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್

ಆ.16, ಬನ್ನೂರಲ್ಲಿ ಕಾಂಗ್ರೆಸ್ ಕೃತಜ್ಞತಾ ಸಮಾರಂಭ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿ ಹಲವರು ಭಾಗಿ



ತಿ.ನರಸೀಪುರ, ಆ.13– ಕಳೆದ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗರ ಪ್ರಾಬಲ್ಯವಿರುವ ಬನ್ನೂರು ಭಾಗದ ಜನರು ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಗೆಲ್ಲಿಸಿ ಸಚಿವರನ್ನಾಗಿ ಮಾಡಲು ಕಾರಣರಾಗಿರುವುದರಿಂದ ಆ.16ರಂದು ಬುಧವಾರ ಬನ್ನೂರಿನಲ್ಲಿ ಹೋಬಳಿ ಮತದಾರರಿಗೆ ಕೃತಜ್ಞತಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕಿ ಜೆ. ಸುನೀತಾ ವೀರಪ್ಪಗೌಡ ತಿಳಿಸಿದ್ದಾರೆ.

ತಾಲೂಕಿನ ಬನ್ನೂರು ಪಟ್ಟಣದ ಎಪಿಎಂಸಿ ಆವರಣದಲ್ಲಿ ಭಾನುವಾರ ಕೃತಜ್ಞತಾ ಸಮಾರಂಭ ನಡೆಯುವ ಸ್ಥಳದ ಸಿದ್ಧತಾ ಕಾರ್ಯವನ್ನು ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಪರಿಶೀಲಿಸಿ ಮಾತನಾಡಿದ ಅವರು ಈಗಾಗಲೇ ನರಸೀಪುರ ಕ್ಷೇತ್ರದ ಮೂರು ಹೋಬಳಿಯ ವ್ಯಾಪ್ತಿಯ ಮತದಾರರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೃತಜ್ಞತೆ ಸಲ್ಲಿಸಿದ್ದು, ಬನ್ನೂರು ಭಾಗದ ಜನರಿಗೂ ಕೃತಜ್ಞತೆ ಸಲ್ಲಿಸಲು ಬುಧವಾರ ಆಗಮಿಸುತ್ತಿದ್ದು, ಬೃಹತ್ ಸಮಾವೇಶ ನಡೆಸಲು ಸಿದ್ಧತೆ ಆರಂಭಿಸಲಾಗಿದೆ ಎಂದರು.

ವಿಧಾನಸಭೆ ಅಧಿವೇಶನ ಹಾಗೂ ಗ್ರಾಪಂ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಇದ್ದುದ್ದರಿಂದ ಸಮಾವೇಶ ವಿಳಂಬವಾಗಿದೆ. ಸಚಿವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೆಡಿಪಿ ಸದಸ್ಯ ಸುನೀಲ್ ಬೋಸ್ ಸೇರಿದಂತೆ ವಿಧಾನಪರಿಷತ್ ಸದಸ್ಯರು, ಮಾಜಿ ಶಾಸಕರು ಹಾಗೂ ಪಕ್ಷದ ಪ್ರಮುಖ ಮುಖಂಡರು ಭಾಗವಹಿಸಲಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯ ವೇಳೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿ ಮತ್ತೊಂದು ಸಮಾವೇಶವನ್ನು ಆಯೋಜಿಸಲಾಗುವುದು. ಹೋಬಳಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜೆ. ಸುನೀತಾ ವೀರಪ್ಪಗೌಡ ಮನವಿ ಮಾಡಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಕೆ.ವಜ್ರೇಗೌಡ ಮಾತನಾಡಿ, ಬನ್ನೂರು ಹೋಬಳಿಯ ಮತದಾರರು ಕಾಂಗ್ರೆಸ್‌ಗೆ ರಾಜಕೀಯ ಶಕ್ತಿಯನ್ನು ನೀಡಿರುವುದರಿಂದ ಕೃತಜ್ಞತೆ ಸಲ್ಲಿಸಲು ಮೈಸೂರು ಮಳವಳ್ಳಿ ರಸ್ತೆಯಲ್ಲಿರುವ ಎಪಿಎಂಸಿ ಆವರಣದಲ್ಲಿ ಸಮಾರಂಭ ಆಯೋಜಿಸಲಾಗುತ್ತಿದೆ. ಸಾವಿರಾರು ಜನರು ಭಾಗವಹಿಸುತ್ತಿರುವುದು ವಿಶೇಷವಾಗಿದ್ದು, ಮೂರು ದಿನದಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಕಾರ್ಯಕರ್ತರು ಹಾಗೂ ಮುಖಂಡರು ಕಾರ್ಯಪ್ರವೃತ್ತರಾಗಿದ್ದೇವೆ ಎಂದರು.

ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎ.ಎನ್.ಸ್ವಾಮಿ ಮಾತನಾಡಿ, ಒಕ್ಕಲಿಗರು ಸೇರಿದಂತೆ ಸಮಸ್ತ ಹಿಂದುಳಿದ ವರ್ಗಗಳು ಕೂಡ ಕಾಂಗ್ರೆಸ್ ಬೆಂಬಲಿಸಿವೆ. ಈ ಹಿನ್ನೆಲೆಯಲ್ಲಿ ಹೋಬಳಿಯ ಹಿಂದುಳಿದ ವರ್ಗಗಳ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಪುರಸಭೆ ಮಾಜಿ ಸದಸ್ಯ ಎಸ್. ಸಿದ್ದೇಗೌಡ, ತಾಪಂ ಮಾಜಿ ಅಧ್ಯಕ್ಷ ಕೆಬ್ಬೆ ಶಿವಸ್ವಾಮಿ, ಲಕ್ಷ್ಮೀನಾರಾಯಣ, ಮಹೇಶ್ ಪಿಳ್ಳೈ, ಗ್ರಾಪಂ ಮಾಜಿ ಅಧ್ಯಕ್ಷ ಟಿ.ವಿ.ಚಂದ್ರೇಗೌಡ, ಮುಖಂಡರಾದ ಮಲಿಯೂರು ದೊಳ್ಳಯ್ಯ, ಕೈಯಂಬಳ್ಳಿ ಸುರೇಶ್, ಕಗ್ಗಲಿಪುರ ನಾಗೇಂದ್ರ, ಹುಣಸಗಹಳ್ಳಿ ಸಿದ್ಧಯ್ಯ, ಎಸ್.ಎಲ್.ವೀರಭದ್ರೇಗೌಡ, ಚಂದ್ರು, ಜಗದೀಶ್, ಆನಂದ, ಬೆನಕನಹಳ್ಳಿ ಚಂದ್ರು, ಪುಟ್ಟಸ್ವಾಮಿಗೌಡ, ಪ್ರದೀಪ ಹಾಗೂ ಇನ್ನಿತರರು ಹಾಜರಿದ್ದರು.



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಗೆ ಸುಮಾರು 35 ಸಾವಿರ ಮೌಲ್ಯದ ಧ್ವನಿವರ್ಧಕ ಸೆಟ್ ಅನ್ನು ಕೊಡುಗೆಯಾಗಿ ನೀಡಿದ ಉದ್ಯಮಿ ಕೆ.ಪಿ.ನಿಂಗರಾಜು ಅವರನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸದಾಶಿವ, ಮುಖ್ಯ ಶಿಕ್ಷಕ ಮಹದೇವಯ್ಯ ನೆನಪಿನ ಕಾಣಿಕೆ ನೀಡಿ, ಸನ್ಮಾನಿಸಿದರು.

ಯುಜಿಡಿ ಕಾಮಗಾರಿ ಅವಾಂತರ: ಉರುಳಿದ ಲಾರಿ

ಬನ್ನೂರು: ಪಟ್ಟಣದಲ್ಲಿ ನಡೆಯುತ್ತಿರುವ ಯುಜಿಡಿ ಕಾಮಗಾರಿ ಅವಾಂತರದಿಂದ ಎಲ್ಲಾ ರಸ್ತೆಗಳು ಗುಂಡಿಮಯವಾಗಿದ್ದು, ಅದನ್ನು ಸರಿಪಡಿಸುವ ಕಾರ್ಯ ಮಾತ್ರ ಮಂದಗತಿಯಲ್ಲಿ ಸಾಗಿದೆ. ಯುಜಿಡಿಗಾಗಿ ತೆಗೆದ ಗುಂಡಿ ಸಮರ್ಪಕವಾಗಿ ಮುಚ್ಚದೆ ಸಾರ್ವಜನಿಕರಿಗೆ ತೊಂದರೆಯಾಗಿದೆ.

ಇದಕ್ಕೆ ನಿದರ್ಶನ ಎಂಬಂತೆ ಯುಜಿಡಿಗೆ ತೆಗೆದ ಮುಚ್ಚಿದ ಗುಂಡಿಯ ಮೇಲೆ ಕಬ್ಬು ತುಂಬಿದ ಲಾರಿ ಹರಿದ ಪರಿಣಾಮ ರಸ್ತೆಯಲ್ಲಿ ಲಾರಿ ಮಗುಚಿಕೊಂಡಿದೆ. ಅದೃಷ್ಟವಶಾತ್ ಅಲ್ಲಿ ಯಾರೂ ಇಲ್ಲದ್ದರಿಂದ ಪ್ರಾಣಾಪಾಯ ತಪ್ಪಿದೆ. ಅದರೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಗೂಡ್ಸ್ ಆಟೋ, ದ್ವಿಚಕ್ರ ವಾಹನ ನಜ್ಜುಗುಜ್ಜಾಗಿದೆ.

ಲಾರಿಯು ಸ್ಥಳೀಯ ರೈತರ ಕಬ್ಬನ್ನು ತುಂಬಿಕೊಂಡು ಮದ್ದೂರಿನ ಸಕ್ಕರೆ ಕಾರ್ಖಾನೆಗೆ ಹೊರಟಿತ್ತು ಎನ್ನಲಾಗಿದೆ.



ಮುಖ್ಯರಸ್ತೆಯಲ್ಲಿ ಸಾಗುವಾಗ ಎಸ್‌ಬಿಎಂ ಬ್ಯಾಂಕ್ ಹತ್ತಿರ ಯುಜಿಡಿ ಗುಂಡಿಗೆ ಅಗೆದಂತ ರಸ್ತೆಯಲ್ಲಿ ಮುಗುಚಿಕೊಂಡಿದೆ. ಇದು ಬಿದ್ದಂತ ಜಾಗ ಜನನಿಬಿಡ ಪ್ರದೇಶವಾಗಿದ್ದು, ಪಕ್ಕದಲ್ಲಿ ಚಿತ್ರಮಂದಿರ, ಎಸ್‌ಬಿಎಂ ಬ್ಯಾಂಕ್, ಶಾಮಿಯಾನ ಅಂಗಡಿ, ಹೋಟೆಲ್, ಚಿಲ್ಲರೆ ಅಂಗಡಿ ಇದ್ದು, ಇಂದು ಭಾನುವಾರ ಆದ್ದರಿಂದ ಸ್ವಲ್ಪ ಜನಸಂದಣಿ ಕಡಿಮೆ ಇತ್ತು. ಇಲ್ಲವಾದಲ್ಲಿ ಪ್ರಾಣಾಪಾಯವಾಗುತ್ತಿತ್ತು.

ಅಭಿವೃದ್ಧಿ ಹೆಸರಿನಲ್ಲಿ ಹಾಳು ಮಾಡಿ, ಅದನ್ನು ಸರಿ ಪಡಿಸುವಂತ ಕೆಲಸದಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಕಾರಣ ಇಂತಹ ಅನಾಹುತಗಳು ನಡೆಯುತ್ತಿದೆ.

ಭುವನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಬೆಟ್ಟದಪುರ: ಸಮೀಪದ ಭುವನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪಿ.ದೇವರಾಜು, ಉಪಾಧ್ಯಕ್ಷರಾಗಿ ಮಮತಾ ಮಂಜುನಾಥ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ದೇವರಾಜು.ಪಿ, ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸದಾನಂದ ಕೆ.ಎಸ್. ಸಲ್ಲಿಸಿದ್ದು, ದೇವರಾಜು.ಪಿ ಅವರು 12 ಮತ ಪಡೆಯುವುದರ ಮೂಲಕ ಜಯಶೀಲರಾದರು. ಸದಾನಂದ 9 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಮತಾ ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆಯ ಸೋಮಯ್ಯ ಘೋಷಣೆ ಮಾಡಿದರು.

ಸದಸ್ಯರಾದ ದೀಪೂ, ಶಿವಕುಮಾರ್, ನಂದಿನಿ, ಬಸವರಾಜು, ಮಂಜುನಾಥ್, ಪವಿತ್ರ, ರಂಜಿತಾ, ಜಗದೀಶ್, ಜ್ಯೋತಿ, ರುಕ್ಕಣ್ಣ, ರಮೇಶ್, ಸರೋಜಾ, ಮಾನಸಾ, ಸರಿತಾ, ಚಂದ್ರ, ರಾಣಿ, ತೋಪೆಗೌಡ, ಪಿಡಿಒ ದೇವರಾಜೇಗೌಡ, ಸಿಬ್ಬಂದಿ ಸೀನಾ, ಸತ್ಯಣ್ಣ, ಮುಖಂಡರಾದ ರಹಮದ್ ಜಾನ್ ಬಾಬು, ಪುಟ್ಟರಾಜು, ಬಿ.ಟಿ ಸಣ್ಣಸ್ವಾಮಿಗೌಡ, ಈರೇಗೌಡ, ಲೋಕೇಶ್, ರಮೇಶ್, ರಾಜಶೇಖರಯ್ಯ, ವೆಂಕಟೇಶ್ ಇದ್ದರು.

ಹಸಿರು ನಮ್ಮ ಉಸಿರು

ಮುತ್ತಿನ ಮುಳಸೋಗೆ ಡೈರಿಯಲ್ಲಿ ಜೆಡಿಎಸ್ ಜಯಭೇರಿ



ಬೆಟ್ಟದಪುರ, ಆ.13– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮುತ್ತಿನ ಮುಳಸೋಗೆ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಎಲ್ಲಾ 12 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕರು ಆಯ್ಕೆಯಾಗಿದ್ದು ಸತತ 3ನೇ ಬಾರಿಯೂ ಎಂ.ಎಸ್. ಚಂದ್ರಶೇಖರ್ ಅವರ ತಂಡ ಪ್ರಚಂಡ ಬಹುಮತದಿಂದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ಚುಕ್ಕಾಣಿ ಹಿಡಿದಿದೆ.

ಈ ಕುರಿತು ಮಾತನಾಡಿದ ಅಧ್ಯಕ್ಷ ಎಂ.ಎಸ್. ಚಂದ್ರಶೇಖರ್, ನಮ್ಮ ಸಂಘಕ್ಕೆ ಬಿಎಂಸಿ ಕೇಂದ್ರವನ್ನು ತಂದು ಎಲ್ಲ ರೈತರಿಗೂ ಸರ್ಕಾರದ ಸೌಲಭ್ಯ ಮತ್ತು ಅನುದಾನಗಳನ್ನು ಕಲ್ಪಿಸಲಾಗುತ್ತಿದೆ. ನಮ್ಮ ಸಂಘವು ಸುಮಾರು 60 ಲಕ್ಷ ರೂ. ಆದಾಯದಲ್ಲಿದ್ದು, ಈ ಹಾಲು ಉತ್ಪಾದಕರ ಸಹಕಾರ ಸಂಘವು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ ಎಂದರು.

ಇಂದು ನೂತನವಾಗಿ ಬಸಪ್ಪ ದಾಕ್ಷಾಯಿಣಿ, ರವಿ, ಮಂಜುಶೆಟ್ಟಿ ಕುಮಾರಿ, ಮಹದೇವಮ್ಮ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಮೂರನೇ ಬಾರಿಗೆ ಜಯಭೇರಿ ಬಾರಿಸಿದ ಎಂ.ಎಸ್. ಚಂದ್ರಶೇಖರ್ ಅವರನ್ನು ಮಾಜಿ ಶಾಸಕ ಕೆ.ಮಹಾದೇವ್, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಹಾಗೂ ಪಕ್ಷದ ಮುಖಂಡರು ಅಭಿನಂದಿಸಿದ್ದಾರೆ.

ಮುಳ್ಳೂರು ಗ್ರಾಪಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ



ಸರಗೂರು, ಆ.13– ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಕಾಂಗ್ರೆಸ್ ತೆಕ್ಕೆಗೆ ಒಳಗಾಗಿದ್ದು, ಅಧ್ಯಕ್ಷರಾಗಿ ಚಿನ್ನಮ್ಮ ರಾಮನಾಯಕ, ಉಪಾಧ್ಯಕ್ಷರಾಗಿ ಬಿರ್ವಾಳು ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಂಚಾಯಿತಿ ಆವರಣದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಚಿನ್ನಮ್ಮರಾಮನಾಯಕ, ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಬಿರ್ವಾಳು ಶಿವಣ್ಣ ಅವರನ್ನು ಬಿಟ್ಟರೆ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅಧ್ಯಕ್ಷರಾಗಿ ಚಿನ್ನಮ್ಮರಾಮನಾಯಕ, ಉಪಾಧ್ಯಕ್ಷರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಜನಾರ್ಧನ್, ಪಿಡಿಒ ಹನುಮಯ್ಯ ಘೋಷಿಸಿದರು.

ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಅವರ ಸಹಕಾರದಿಂದಾಗಿ ಕಾಂಗ್ರೆಸ್ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಇದಲ್ಲದೆ ಜೆಡಿಎಸ್, ಬಿಜೆಪಿ ಪಕ್ಷದ ಮುಖಂಡರು ಚುನಾವಣೆಯಲ್ಲಿ ಗೆಲ್ಲಲು ನಿರ್ಮಿಸಿದ್ದ ಚಕ್ರವ್ಯೂಹವನ್ನು ಭೇದಿಸುವಲ್ಲಿ ಸ್ಥಳೀಯ ಮುಖಂಡರಾದ ಟ್ರಬಲ್ ಶೂಟರ್ ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, (ವಾಣಿ) ಯಶಸ್ವಿಯಾಗಿದ್ದಾರೆ.

ಬಿರ್ವಾಳು ಬಸವರಾಜು, ಮುಖಂಡರಾದ ಚಿಕ್ಕಣ್ಣ, ಮುಳ್ಳೂರು ಮಂಜು, ಚಿಕ್ಕ ಮಹಾದೇವಯ್ಯ, ಶಿವಚೆನ್ನಪ್ಪ, ಸಿಂಗೇಗೌಡ, ಚಿನ್ನಸ್ವಾಮಿ, ರಮೇಶ್, ಲೋಕೇಶ್, ಜಿ.ರಾಜಣ್ಣ, ಡ್ರೈವರ್ ಮಹದೇವ್, ಪಾಂಡು, ಕೃಷ್ಣ, ಸಿದ್ದಮಲ್ಲು, ಡಿ.ಪಿ.ನಟರಾಜು, ಶಂಭುಲಿಂಗನಾಯಕ, ನಾಗರಾಜು, ಮಲ್ಲೇಶ್, ಅಯೂಬ್ ಖಾನ್, ಚನ್ನನಾಯಕ, ಬೆಟ್ಟನಾಯಕ, ನಾಗೇಶ್, ಗೋವಿಂದನಾಯಕ, ಡ್ರೈವರ್ ಉಮೇಶ್, ಸೂರಿ ಪಂಚಾಯಿತಿ ಸದಸ್ಯರು ಹಾಜರಿದ್ದರು.

ಗಿರಿಜನ ಕಾಲೋನಿಯಲ್ಲಿ ಮನೆ ಮನೆಗೂ ತ್ರಿವರ್ಣ ಧ್ವಜ



ನಂಜನಗೂಡು, ಆ.13– ತಾಲೂಕಿನ ನಾಗಣಾಪುರ ಗಿರಿಜನ ಕಾಲೋನಿಯಲ್ಲಿ ಭಾನುವಾರ ಪ್ರಧಾನ ಅಂಚೆ ಕಚೇರಿಯ ಅಂಚೆ ಸಹಾಯಕ ಶ್ರೀನಿವಾಸಮೂರ್ತಿ 76 ಗಿರಿಜನ ಕುಟುಂಬಗಳಿಗೆ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ತ್ರಿವರ್ಣ ಧ್ವಜಗಳನ್ನು ವಿತರಣೆ ಮಾಡಿದರು.

ಅಂಚೆ ಕಚೇರಿಯ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆ ತೆರೆಯದ ಕಾಲೋನಿಯ ಹತ್ತು ಮಂದಿ ಹೆಣ್ಣು ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಅವರ ಖಾತೆಯ ಮೊದಲ ಕಂತನ್ನು ತುಂಬುವ ಮೂಲಕ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆ ತೆರೆಯುವಂತೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ನಂಜನಗೂಡು ಪ್ರಧಾನ ಅಂಚೆ ಕಚೇರಿಯ ಇಲಾಖೆಯ ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ಮಹದೇವಪ್ಪ ಅಂಚೆ ಮೇಲ್ವಿಚಾರಕ ಬಿ.ಆರ್.ರವೀಶ್ ಉಪಸ್ಥಿತರಿದ್ದರು.

ಜಿಲ್ಲಾ ಬಿಜೆಪಿ ಸಮಿತಿ ಪುನರ್‌ರಚಿಸಲು ಆಗ್ರಹ



ತಿ.ನರಸೀಪುರ.ಆ.13– ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ಸಮಿತಿಯನ್ನು ತಕ್ಷಣವೇ ಪುನರ್‌ರಚನೆ ಮಾಡಬೇಕೆಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ರಾಜ್ಯ ಸಮಿತಿಯನ್ನು ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಸಮಿತಿ ಬಲಿಷ್ಠವಾಗಿರುವಂತೆ ಮಾಡಬೇಕು. ಆ ನಿಟ್ಟಿನಲ್ಲಿ ಬದಲಾವಣೆಯ ಅವಶ್ಯಕತೆ ಇದೆ ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗ್ರಾಮಾಂತರದಲ್ಲಿ ಪಕ್ಷ ಸೋಲನುಭವಿಸಿದೆ. ನಗರ ಪ್ರದೇಶದಲ್ಲಿ ಶ್ರೀವತ್ಸ ಮಾತ್ರ ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ಗೆದ್ದಿದ್ದಾರೆ. ಅದನ್ನು ಹೊರತುಪಡಿಸಿದರೆ ನಾವು ಜಿಲ್ಲೆಯಲ್ಲಿ ಸಂಪೂರ್ಣವಾಗಿ ಸೋಲನುಭವಿಸಿದ್ದೇವೆ ಹಾಗಾಗಿ ಕೂಡಲೇ ಜಿಲ್ಲಾ ಸಮಿತಿ ಪುನರ್‌ರಚನೆ ಮಾಡಿ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕಿದೆ ಎಂದು.

10 ವರ್ಷದ ಸೇವೆ ಪರಿಗಣಿಸಿ: ಮುಂಬರುವ ಲೋಕಸಭಾ ಚುನಾವಣೆಗೆ ಟಿಕೆಟ್ ನೀಡಲು ಪಕ್ಷದಲ್ಲಿ 10 ವರ್ಷಗಳ ಸೇವೆ ಸಲ್ಲಿಸಿದ್ದರೆ ಅಂತಹವರಿಗೆ ಮಾತ್ರವೇ ಟಿಕೆಟ್ ನೀಡಿ, ಅದನ್ನು ಬಿಟ್ಟು ಪಕ್ಷದ ಸದಸ್ಯನೇ ಅಲ್ಲದವರಿಗೆ ವಿಧಾನಸಭಾ ಟಿಕೆಟ್ ನೀಡುವಂತೆ ಜಿಲ್ಲಾ ಸಮಿತಿ ಶಿಫಾರಸ್ಸು ಮಾಡಿತ್ತು. ಹಾಗಾಗಿ ಸೋಲಿನ ಜವಾಬ್ದಾರಿ ಸಹ ಜಿಲ್ಲಾ ಸಮಿತಿಯದ್ದೇ ಆಗಿದೆ ಎಂದರು.

ಜಿಲ್ಲಾ ಸಮಿತಿ ಎಡವಟ್ಟು : ಬಹು ದೊಡ್ಡ ನಾಯಕ ಪಕ್ಷಕ್ಕೆ ಸೇರ್ಪಡೆಯಾದರೆ, ಆತ ಎಂಎಲ್‌ಎ, ಎಂಪಿ, ಎಂಎಲ್ಸಿ ಆಗಿದ್ದರೆ, ಆತನಿಗೆ ದೊಡ್ಡ ಸ್ಥಾನಮಾನ ಇದ್ದರೆ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಟಿಕೆಟ್ ಕೊಡಬಹುದು. ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸದಸ್ಯನೇ ಅಲ್ಲದ ವ್ಯಕ್ತಿಗೆ ಟಿಕೆಟ್ ಕೊಡಲು ಮೈಸೂರು ಜಿಲ್ಲಾ ಸಮಿತಿ ಶಿಫಾರಸು ಮಾಡಿತ್ತು. ಅವರನ್ನು ಬಲವಂತವಾಗಿ ಸರ್ಕಾರಿ ಹುದ್ದೆಗೆ ರಾಜೀನಾಮೆ ಕೊಡಿಸಿ ಟಿಕೆಟ್ ನೀಡಲಾಯ್ತು, ಅನ್ಯಾಯವಾಗಿ ಅವರ ಕೆಲಸ ಸಹ ಹೋಯ್ತು ಎಂದರು. ಚುನಾವಣೆಯಲ್ಲಿ ಆತ ಮೂರನೇ ಸ್ಥಾನಕ್ಕೆ ಹೋದ, ಪಕ್ಷದವರನ್ನು ಬಿಟ್ಟು ಅಂತಹವರಿಗೆ ಟಿಕೆಟ್ ಕೊಡುವ ಅವಶ್ಯಕತೆ ಏನಿತ್ತು ಎಂದು ಪ್ರಶ್ನಿಸಿದ ರಮೇಶ್, ಮತ್ತೆ ಅಂತಹ ತಪ್ಪು ಮರುಕಳಿಸಬಾರದು ಎಂದು ಆಗ್ರಹಿಸಿದರು.

ಹೆಚ್.ಡಿ.ಕೋಟೆ ವಾಲ್ಮೀಕಿ ಭವನ ಕಾಮಗಾರಿ ವೀಕ್ಷಿಸಿದ ಸಚಿವರು

ಸರ್ಕಾರದಿಂದ 2 ಕೋಟಿ ಹೆಚ್ಚುವರಿ ಹಣ ಕೊಡುವುದಾಗಿ ಭರವಸೆ

ಹೆಚ್.ಡಿ.ಕೋಟೆ, ಆ.13– ಪಟ್ಟಣದ ಗದ್ದಿಗೆ ವೃತ್ತದಲ್ಲಿರುವ ಮಹರ್ಷಿ ವಾಲ್ಮೀಕಿ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಸರ್ಕಾರದಿಂದ 2 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸುವುದಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಸಬಲೀಕರಣ ಹಾಗೂ ಕ್ರೀಡಾ ಸಚಿವ ಸಚಿವ ಬಿ.ನಾಗೇಂದ್ರ ಭರವಸೆ ನೀಡಿದ್ದಾರೆ.

ಇತ್ತೀಚಿಗೆ ಹೆಚ್.ಡಿ.ಕೋಟೆಗೆ ಭೇಟಿ ನೀಡಿದ್ದ ಸಚಿವರು ಪಟ್ಟಣದ ವಾಲ್ಮೀಕಿ ಸಮುದಾಯ ಭವನಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿ, ಭವನ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಎರಡು ಕೋಟಿ ಅನುದಾನ ಬೇಕಿದ್ದು, ತಕ್ಷಣಕ್ಕೆ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಒಂದು ಕೋಟಿ ರೂ. ಬಿಡುಗಡೆ ಮಾಡಿಸುವೆ. ಕೊನೆ ಹಂತದಲ್ಲಿ ಇನ್ನೂ ಒಂದು ಕೋಟಿ ರೂ. ಕೊಡಿಸುವುದಾಗಿ ಭರವಸೆ ನೀಡಿದರು. ಭವನವನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಉದ್ಘಾಟನೆಗೆ ರಾಜನಹಳ್ಳಿ ಮಠದ ಶ್ರೀ ಪ್ರಸನ್ನನಂದಾಪುರಿ ಸ್ವಾಮೀಜಿ, ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಅವರುಗಳನ್ನು ಆಹ್ವಾನಿಸಿ ಶಾಸಕ ಅನಿಲ್ ಚಿಕ್ಕಮಾದು ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಮಾಡೋಣ ಎಂದು ಸಮಾಜದ ಮುಖಂಡರಿಗೆ ತಿಳಿಸಿದರು.



ಹೆಚ್.ಡಿ.ಕೋಟೆ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಸಮುದಾಯ ಭವನದ ಕಾಮಗಾರಿಯನ್ನು ವೀಕ್ಷಿಸಲು ಆಗಮಿಸಿದ್ದ ಸಚಿವ ಬಿ.ನಾಗೇಂದ್ರ ಅವರನ್ನು ಸಮುದಾಯದ ವತಿಯಿಂದ ಸನ್ಮಾನಿಸಲಾಯಿತು.



ಇದೇ ಸಂದರ್ಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ತಾಲೂಕು ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ತಾಲೂಕು ನಾಯಕರ ಸಂಘದ ಮಾಜಿ ಅಧ್ಯಕ್ಷ ಶಂಭುಲಿಂಗನಾಯಕ, ಎಸ್ ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಮುಖಂಡರಾದ ಪುರದಕಟ್ಟೆ ಬಸವರಾಜು, ದಾಸನಾಯಕ ಬಿದರಳ್ಳಿ ರಾಜು ಮರಿತಿಮ್ಮನಾಯಕ ಬಿಪಿ, ಸಿದ್ದನಾಯಕ ಬೈರನಾಯಕ ಸಿದ್ದನಾಯಕ ವೇಣು ಅಂಕನಾಯಕ ತುಂಬಸೋಗೆ ನಾಗರಾಜು, ಮಣಿ, ಗೋವಿಂದನಾಯಕ, ಮುಂತಾದವರು ಇದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಷ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬೇಬಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೇಬಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೋಳಾಶಂಕರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಬೋಳಾಶಂಕರ (ತೆ)	4 ಪ್ರದರ್ಶನಗಳು
ಸಂಗಂ	
ಗದರ್ –2 (ಹಿಂ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಳಾಶಂಕರ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು



ಹುಣಸೂರು ತಾಲೂಕಿನ ಕರ್ಣಕುಪ್ಪೆ ಗ್ರಾಪಂ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹರೀಶ್ ಅವರನ್ನು ಗೆಳೆಯರ ಬಳಗದಿಂದ ಸನ್ಮಾನಿಸಲಾಯಿತು. ಈ ವೇಳೆ ಶ್ರೀಕಾಂತ್, ದಿನೇಶ್, ರಘು, ಹರೀಶ್, ಮಂಜುನಾಥ್, ಪಲ್ಲವಿ, ಶಿಲ್ಪ, ಕಾವೇರಿ, ಮಂಜುನಾಥ್ ಉಪಸ್ಥಿತರಿದ್ದರು.

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯರಾಗಿ ಮನೋಹರ್ ಗೌಡ ನೇಮಕ



ನಂಜನಗೂಡು, ಆ.13– ಮೈಸೂರು ಗ್ರಾಮಾಂತರ ಜಿಲ್ಲೆ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ನಂಜನಗೂಡಿನ ಮನೋಹರ್ ಗೌಡ ಅವರನ್ನು ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್ ಅವರು ನೇಮಕ ಮಾಡಿದ್ದಾರೆ.

ವಳಗೆರೆ ಗ್ರಾಮದಲ್ಲಿ ಕ್ರಿಕೆಟ್ ಪಂದ್ಯಾವಳಿ



ಮಲ್ಕುಂಡಿ, ಆ.13– ಆಟದಲ್ಲಿ ಸೋಲನ್ನೆ ಗೆಲುವು ಎಂದು ತಿಳಿದು ಆಟ ಆಡಿದರೆ ಮುಂದೆ ಗೆಲುವು ಖಚಿತ ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಹೇಳಿದರು.

ನಂಜನಗೂಡು ತಾಲೂಕಿನ ವಳಗೆರೆ ಗ್ರಾಮದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಯುವಕರು ಕ್ರಿಕೆಟ್ ಆಟದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಇದರಿಂದ ಅವರ ಆರೋಗ್ಯ ಉತ್ತಮವಾಗಿರುತ್ತದೆ ಎಂದು ತಿಳಿಸಿದರು.

ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಗ್ರಾಪಂ ಉಪಾಧ್ಯಕ್ಷ ಮದನ್ ಕುಮಾರ್, ಸದಸ್ಯ ಚನ್ನಬಸಪ್ಪ, ಸೇರಿದಂತೆ ಪ್ರಮುಖರು ಹಾಜರಿದ್ದರು.

ರಾಜ್ಯಮಟ್ಟದ ವಕೀಲರ ಸಮ್ಮೇಳನದ ಸಮಾರೋಪ

ಸಂವಿಧಾನದ ಆಶಯ ಈಡೇರಿಕೆಗೆ ವಕೀಲರ ಪಾತ್ರ ಹಿರಿದು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ



ಮೈಸೂರು, ಆ.13(ಎಂಕೆ)– ಭಾರತ ಸ್ವಾತಂತ್ರ್ಯದ ಉದ್ದೇಶಗಳು, ಸಂವಿಧಾನದ ಆಶಯಗಳನ್ನು ಈಡೇರಿಸುವ ಹಾಗೂ ಪ್ರಜಾಪ್ರಭುತ್ವದ ಬಲವರ್ಧನೆಗೆ ವಕೀಲರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ ಹೇಳಿದರು.

ನಗರದ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹಾಗೂ ಮೈಸೂರು ವಕೀಲರ ಸಂಘದ ಸಹಯೋಗದೊಂದಿಗೆ ನಡೆದ ರಾಜ್ಯ ಮಟ್ಟದ ವಕೀಲರ 10ನೇ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನದ ಸ್ಮರಣ ಸಂಚಿಕೆಯ ಮುಖಪುಟ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಆಧಾರಸ್ತಂಭಗಳಲ್ಲಿ ಒಂದಾದ ನ್ಯಾಯಾಂಗ ವ್ಯವಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ಸ್ವಾತಂತ್ರ್ಯದ ಉದ್ದೇಶ, ಸಂವಿಧಾನದ ಆಶಯವನ್ನು ಈಡೇರಿಸುವ ಮೂಲಕ ರಾಮರಾಜ್ಯ ಸ್ಥಾಪನೆಯಾಗಬೇಕಿದೆ. ರಾಮರಾಜ್ಯ ಪರಿಕಲ್ಪನೆ ಧಾರ್ಮಿಕವಾದದ್ದು. ಇಲ್ಲಿ ರಾಮನ ರಾಜ್ಯ ಬೇರೆ, ರಾಮರಾಜ್ಯ ಬೇರೆ. ಸ್ವಾತಂತ್ರ್ಯ ಹೋರಾಟ ಮತ್ತು ಸಂವಿಧಾನದ ಆಶಯ ರಾಮರಾಜ್ಯವಾಗಿದೆ ಎಂದರು.

ನಾವೆಲ್ಲರೂ ಭಾರತೀಯರು ಎಂದೇಳಲು ಹೆಮ್ಮೆ ಅನಿಸುತ್ತದೆ. ಕಾರಣ ನಾವೆಲ್ಲರೂ ಬುದ್ಧ ಹುಟ್ಟಿದ ನಾಡಿನ ಪ್ರಜೆಗಳು. ಬುದ್ಧ ಎಂದ ಮೇಲೆ ಅವರ ಪಂಚಶೀಲ ತತ್ವಗಳು ಕೂಡ ನಮಗೆಲ್ಲರಿಗೂ ಗೊತ್ತಿರಲೇಬೇಕು. ಹಾಗೆಯೆ ಸಿಂಧೂ ನದಿಯ ಚಾರಿತ್ರ್ಯಿಕ ವಿವರಣೆ, ನಾಗರಿಕತೆಯ ಬದುಕಿನ ಇತಿಹಾಸ ಎಲ್ಲರಿಗೂ ತಿಳಿದಿರ ಬೇಕು. ಹಾಗೆಯೇ ಸ್ವಾತಂತ್ರ್ಯ ನಂತರ ಬಾಬಾ ಸಾಹೇಬ್ ಅಂಬೇಡ್ಕರ್ ಇಡೀ ಭಾರತದ 140 ಕೋಟಿ ಜನರ ರಕ್ಷಣೆಗೆ ಕೊಟ್ಟಂತಹ ಶ್ರೇಷ್ಠ ಸಂವಿಧಾನವನ್ನು ರಕ್ಷಣೆ ಮಾಡುವ ಗುರುತರವಾದ ಜವಾಬ್ದಾರಿ ಹಾಗೂ ನಾಡಿಗೆ ತಿಳಿಸುವಂತಹ ಮಹಾ ಸಮುದಾಯವೆಂದರೆ ಅದು ವಕೀಲರಾಗಿದ್ದಾರೆ ಎಂದು ಪ್ರಶಂಸಿಸಿದರಲ್ಲದೆ, ಅನೇಕ ರಾಷ್ಟ್ರೀಯ ಸಮಸ್ಯೆಗಳನ್ನು ವಕೀಲರು ಕೈಗೆತ್ತಿಕೊಳ್ಳಬೇಕು ಎಂದು ಕರೆ ನೀಡಿದರು.

ದೇಶದಲ್ಲಿ ಎಲ್ಲಾ ಧರ್ಮದ ಜನರಿದ್ದಾರೆ. ಹಾಗಾಗಿ ಇದು ಬಹುತ್ವದ ಭಾರತವಾಗಿದೆ. ಅವರವರ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡಲು ವೈಜ್ಞಾನಿಕವಾಗಿ ಮುಕ್ತ ಅವಕಾಶವಿದೆ. ಆದರೆ ರಾಜಕೀಯ ಪಕ್ಷಗಳು ಇಲ್ಲದ ಅಧಿಕಾರ ಬಳಸಿ ಒಂದು ಧರ್ಮದ ಆಚಾರ–ವಿಚಾರಗಳನ್ನು ಇನ್ನೊಂದು ಧರ್ಮದ ಮೇಲೆ ಹೇರುವುದು ಬಲವಂತದ ಮತಾಂತರಕ್ಕೆ ಸಮ ಎಂದು ಗಾಂಧೀಜಿ ಹೇಳಿದ್ದಾರೆ. ರಾಜಕೀಯ ಪಕ್ಷಗಳು ಧರ್ಮದ ಹೆಸರಿನಲ್ಲಿ ಯಾಕೆ ರಾಜಕಾರಣ ಮಾಡುತ್ತಿವೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದರಲ್ಲದೆ, ಈ ರೀತಿಯ ವೈರುಧ್ಯದ ರಾಜಕೀಯ ನಡವಳಿಕೆಗಳು ಸಂವಿಧಾನದ ಆಶಯ ಈಡೇರಿಸಲು ತೊಡಕಾಗಿವೆ ಮಾನವ ಹಕ್ಕುಗಳ ಆಯೋಗದ ವರದಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ದಲಿತರ ಮೇಲಿನ ಶೋಷಣೆ ಅವಲೋಕಿಸಿದಾಗ ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಂಪೂರ್ಣ ಬೆಂಬಲ: ವಕೀಲರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತ, ಕುವೆಂಪು ಸಾಹಿತ್ಯ ಹೊಂದಿರುವ ಸಾಂಸ್ಕೃತಿಕ ನಗರಿ ಮೈಸೂರು ಅಭಿವೃದ್ಧಿಗೆ, ಸಾಮಾಜಿಕ ನ್ಯಾಯಕ್ಕೆ, ಮೀಸಲಾತಿಗೆ, ಉತ್ತಮ ಆಡಳಿತಕ್ಕೆ ಹೆಸರುವಾಸಿಯಾದ ಸಾಮರಸ್ಯದಿಂದ ಕೂಡಿದ ನಗರ. ಇಂತಹ ನಗರದಲ್ಲಿ ದೊಡ್ಡ ದೊಡ್ಡ ನ್ಯಾಯಪಂಡಿತರು ಸೇರಿ ಸಮ್ಮೇಳನ ನಡೆಸಿದ್ದು ಸಂತೋಷದ ವಿಚಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರೇಟ್ ಜಾಬ್: ಹಿಮಾಚಲ ಪ್ರದೇಶದ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಮಾತನಾಡಿ, ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ ಎಂದರೆ ಅದಕ್ಕೆ ಮುಖ್ಯ ಕಾರಣ ವಕೀಲರಾಗಿದ್ದಾರೆ. ವಕೀಲ ವೃತ್ತಿ ನಿಜಕ್ಕೂ ಗ್ರೇಟ್ ಜಾಬ್. ಇವತ್ತಿಗೂ ನೊಂದವರ ಕಷ್ಟ ಕೇಳುವುದು ಮೊದಲು ವಕೀಲರೇ ಆಗಿರುತ್ತಾರೆ. ಆದ್ದರಿಂದ ವಕೀಲರು ಎಂದಿಗೂ ತಮ್ಮ ಸೇವೆಯನ್ನು ಸ್ಥಗಿತಗೊಳಿಸಬೇಡಿ. ಕೋರ್ಟ್ ಮುಚ್ಚಬೇಡಿ ಎಂದು ಸಲಹೆ ನೀಡಿದರಲ್ಲದೆ ವಕೀಲ ವೃತ್ತಿ ದೇಶದ ಆಸ್ತಿಯಾಗಿದೆ. ಸಮಸಮಾಜ ವ್ಯವಸ್ಥೆ ನಿರ್ಮಾಣವಾಗಬೇಕಾದರೆ ವಕೀಲ ಪಾತ್ರ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ವಕೀಲರ ಮುಖ್ಯವಾಗಿದ್ದು, ವಕೀಲರ ರಕ್ಷಣಾ ಕಾಯ್ದೆ ಜಾರಿಯಾಗಬೇಕು ಎಂದು ಆಗ್ರಹಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎಸ್. ಸಂಗ್ರೇಶಿ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಕರ್ನಾಟಕ ವಕೀಲರ ಪರಿಷತ್ತಿನ ಅಧ್ಯಕ್ಷ ಹೆಚ್.ಎಲ್.ವಿಶಾಲ ರಾಘು, ಮೈಸೂರು ನಗರ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು...

● ವಕೀಲರ ರಕ್ಷಣಾ ಕಾಯ್ದೆ ಜಾರಿಯಾಗಬೇಕು. ● ವಕೀಲರಿಗೆ 15 ಲಕ್ಷ ರೂ. ವಿಮಾ ನಿಗದಿ ● ಜಿಲ್ಲಾ ಮತ್ತು ತಾಲೂಕು ವಕೀಲರ ಸಂಘಗಳಿಗೆ ವಿದ್ಯುತ್ ಬಿಲ್ ಕಡಿತಗೊಳಿಸುವುದು ● ಅರ್ಧಕ್ಕೆ ನಿಂತಿರುವ ಗ್ರಂಥಾಲಯಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವುದು ● ಬಾರ್ ಕೌನ್ಸಿಲ್‌ಗೆ ಶಾಶ್ವತ ಸ್ಥಳ ನೀಡುವುದು ● ಪ್ರತೀ ಜಿಲ್ಲಾ ಮತ್ತು ತಾಲೂಕು ನ್ಯಾಯಾಲಯ ಆವರಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ● ವಕೀಲರ ಶುಲ್ಕ ಕಾಯಿದೆ ಪುನರ್ ವಿಮರ್ಶೆ ಮಾಡುವುದು. ● ನ್ಯಾಯಾಧೀಶರಾಗುವವರು ಕನಿಷ್ಠ ಮೂರು ವರ್ಷ ವಕೀಲರಾಗಿ ಸೇವೆ ಸಲ್ಲಿಸುವುದು ● ವಕೀಲರಿಗೆ ಪ್ರತಿ ತಿಂಗಳೂ 5 ಸಾವಿರ ರೂ. ಸ್ಟೇ ಫಂಡ್ ನೀಡುವುದು ● ಬಜೆಟ್‌ನಲ್ಲಿ ವಕೀಲ ನಿಧಿಗೆ ಹಣ ಬಿಡುಗಡೆ ಮಾಡುವುದು ● ಪ್ರತೀ ತಾಲೂಕು ವಕೀಲರ ಸಂಘಗಳಿಗೆ ಕಟ್ಟಡ ವ್ಯವಸ್ಥೆ ವ್ಯವಸ್ಥೆ ಮಾಡುವುದು ಸೇರಿದಂತೆ 20 ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

> ❝ ವಕೀಲರಿಗೆ ತರಬೇತಿ ನೀಡುವ ಅಕಾಡೆಮಿ ರಾಜ್ಯದಲ್ಲಿ ಸ್ಥಾಪನೆಯಾಗಬೇಕು. ಯಾವ ಸರ್ಕಾರವೂ ಇಂತಹದೊಂದು ಕಾರ್ಯ ಮಾಡುತ್ತೇವೆ ಎಂದರೆ ಬೇಡ ಎನ್ನುವುದಿಲ್ಲ. ಇದಕ್ಕಾಗಿ 20 ಮಂದಿಯ ಕಮಿಟಿಯೊಂದನ್ನು ರಚನೆ ಮಾಡಿ, ವಕೀಲರಿಂದ ದೊರೆಯುವ ಪ್ರೋತ್ಸಾಹದೊಂದಿಗೆ ಸರ್ಕಾರದ ಸಹಕಾರಕ್ಕೆ ಮನವಿ ಮಾಡಿ. ಅಕಾಡೆಮಿ ಸ್ಥಾಪನೆಯಿಂದ ವಕೀಲರು ತಮ್ಮ ವೃತ್ತಿಯಲ್ಲಿ ಪರಿಣಿತಿ ಹೊಂದುವುದರ ಜೊತೆಗೆ ಕಕ್ಷಿದಾರರಿಗೆ ನ್ಯಾಯ ದೊರಕಿಸುವಲ್ಲಿ ಸಹಕಾರಿಯಾಗುತ್ತದೆ.
> –ಕೆ.ಎನ್.ಫಣೀಂದ್ರ, ಉಪಲೋಕಾಯುಕ್ತ

ನ್ಯಾಯಾಧೀಶರ ಆಯ್ಕೆ, ಮುಂಬಡ್ತಿಯಲ್ಲಿ ಪಾರದರ್ಶಕತೆ ಕೊರತೆ: ಶಾಸಕ ಎ.ಎಸ್.ಪೊನ್ನಣ್ಣ ಬೇಸರ

ಮೈಸೂರು, ಆ.13(ಎಂಕೆ)– ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆ, ಮುಂಬಡ್ತಿ ಹಾಗೂ ವರ್ಗಾವಣೆಯಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಬೇಸರ ವ್ಯಕ್ತಪಡಿಸಿದರು.

ನ್ಯಾಯಾಧೀಶರ ಆಯ್ಕೆ, ವರ್ಗಾವಣೆ, ಮುಂಬಡ್ತಿ ಬಗ್ಗೆ ವಕೀಲರ ಪರಿಷತ್ತು ಚಿಂತೆ ಮಾಡುವ ಸಮಯ ಬಂದಿದ್ದು, ನ್ಯಾಯಾಧೀಶರ ಆಯ್ಕೆಯಲ್ಲಿ ಸಾಮಾಜಿಕ ನ್ಯಾಯ ರಕ್ಷಣೆ ಮಾಡುವುದರಲ್ಲಿ ವಿಫಲರಾಗಿದ್ದೇವೆ. ಆಯ್ಕೆ ಪ್ರಕ್ರಿಯೆ ಸಾರ್ವಜನಿಕರಿಗೆ ತಿಳಿಯುವಂತಿರಬೇಕು. ಯಾವುದೇ ಭ್ರಷ್ಟಾಚಾರವಿಲ್ಲದೆ ಆಯ್ಕೆ ಪ್ರಕ್ರಿಯೆ ನಡೆಯುವುದನ್ನು ನ್ಯಾಯಾಂಗ ವ್ಯವಸ್ಥೆ ಪರೀಶೀಲನೆ ನಡೆಸಬೇಕಾಗಿದೆ. ಈ ಮೂಲಕ ಇನ್ನಷ್ಟು ಪಾರದರ್ಶಕವನ್ನಾಗಿಸುವ ಜೊತೆಗೆ ಎಲ್ಲಾ ವರ್ಗದ ಎಲ್ಲಾ ರೀತಿಯ ವಕೀಲರನ್ನು ಒಳಗೊಂಡ ಸಮಗ್ರವಾದ ನ್ಯಾಯಾಂಗ ವ್ಯವಸ್ಥೆ ನಿರ್ಮಾಣವಾಗಬೇಕು ಎಂದರು. ಸಮಾಜದಲ್ಲಿ ಕೆಲವು ಘಟನೆಗಳು ನಡೆದಾಗ ಜನಸಾಮಾನ್ಯರು ವಕೀಲರು ಮತ್ತು ನ್ಯಾಯಾಧೀಶರನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಮರೆಯಬಾರದು. ಅವರ ಮನಸ್ಸಿನಲ್ಲಿ ನಮ್ಮ ಬಗ್ಗೆ ಗೌರವ ಇರಬೇಕು. ಅದನ್ನು ಉಳಿಸಿಕೊಳ್ಳಬೇಕಾದರೆ ವಕೀಲರು ಬಹಳ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಹಾಗೆಯೇ ಇಂತಹ ಸಮ್ಮೇಳನಗಳಲ್ಲಿ ಚರ್ಚೆಗಳು ನಡೆಸಿ, ಸೂಕ್ತ ನಿರ್ಣಯಗಳನ್ನು ಆಗಾಗ ತೆಗೆದುಕೊಳ್ಳುತ್ತಿರಬೇಕು ಎಂದು ಹೇಳಿದರು.



ವಕೀಲರಿಗೆ ನಿವೃತ್ತಿ ಇಲ್ಲ: ನಾವೆಲ್ಲರೂ ವಕಾಲತ್ತನ್ನು ಬಹಳ ಪ್ರೀತಿಯಿಂದ ಆಯ್ಕೆಮಾಡಿಕೊಂಡು ಬಂದಿದ್ದೇವೆ. ಒಬ್ಬ ವಕೀಲನಿಗೆ ನಿವೃತ್ತಿ ಇಲ್ಲ. ಕರಿಕೋಟು ಮತ್ತು ಬ್ಯಾಂಡ್ ಇರುವವರೆಗೂ ವಕಾಲತ್ತು ವಹಿಸುವ ಹಾಗೂ ಕಾನೂನನ್ನು ಅಳವಡಿಸಿಕೊಳ್ಳುವ ಅಧಿಕಾರ ಶಾಶ್ವತವಾಗಿದೆ. ವಕೀಲರಾಗಿ ಗುರ್ತಿಸಿಕೊಂಡ ಬಳಿಕ ಶಾಶ್ವತವಾಗಿ ವಕೀಲರಾಗಿದ್ದರೂ ಬೇರೆ ಬೇರೆ ಕ್ಷೇತ್ರಗಳಿಗೂ ಹೋಗಬಹುದು. ಅದೇ ರೀತಿ ವಕೀಲ ವೃತ್ತಿಯ ಅಧಿಕಾರ ನೊಂದವರ ಹಾಗೂ ಬಡವರ ಪರವಾಗಿರಬೇಕು. ಸಂವಿಧಾನದ ಆಶಯವನ್ನು ಎತ್ತಿ ಹಿಡಿಯಬೇಕಾದ ಬಹಳ ದೊಡ್ಡ ಜವಾಬ್ದಾರಿ ವಕೀಲರ ಮೇಲಿದೆ ಎಂದು ಎಚ್ಚರಿಸಿದರು.

ಕೇಸ್‌ಗಳು ಪೆಂಡಿಂಗ್: ಇವತ್ತು ನ್ಯಾಯಾಂಗ ವ್ಯವಸ್ಥೆಯ ಮೇಲೆ ಬಹಳ ದೊಡ್ಡ ಒತ್ತಡವಿದ್ದು, ಪ್ರಕರಣಗಳು ಇತ್ಯರ್ಥವಾಗದೆ ತಡವಾಗುತ್ತಿದೆ. ಹಲವಾರು ಪ್ರಕರಣಗಳು ಬಾಕಿ ಉಳಿದಿವೆ ಎಂಬುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ನ್ಯಾಯಾಧೀಶರು ಇತ್ಯರ್ಥವಾಗದೆ ಉಳಿಯುತ್ತಿರುವ ಪ್ರಕರಣಗಳು ಹಾಗೂ ಶಾಸಕಾಂಗವಾಗಿ ರೂಪಿಸುವ ಕಾನೂನುಗಳ ಮೇಲೆ ಗಮನ ಹರಿಸಬೇಕಿದೆ. ಅದಕ್ಕಿಂತ ಮುಖ್ಯವಾಗಿ ವಕೀಲರು ಪ್ರಕರಣಗಳ ಇತ್ಯರ್ಥ ತಡವಾಗದಂತೆ ವೇಗವಾಗಿ ಮುಗಿಸುವ ತಂತ್ರಗಾರಿಕೆಯನ್ನು ಕರಗತ ಮಾಡಿಕೊಳ್ಳಬೇಕು. ಪ್ರಕರಣಗಳ ಇತ್ಯರ್ಥ ತಡವಾದಷ್ಟು ನ್ಯಾಯಾಂಗ ವ್ಯವಸ್ಥೆಯ ಮೇಲೆ ಹಾಗೂ ಕಕ್ಷಿದಾರರ ಮೇಲೆ ಒತ್ತಡ ಬೀಳಲಿದೆ. ಆದ್ದರಿಂದ ನಮ್ಮಲ್ಲಿರುವ ಸಂಪೂರ್ಣ ಶಕ್ತಿಯನ್ನು ಕ್ರಮವಹಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಾಗಿದೆ ಎಂದು ಕಿವಿ ಮಾತು ಹೇಳಿದರು.

ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಸಂರಕ್ಷಣಾ ಕಾಯ್ದೆ ಜಾರಿ

ಪ್ರಾಚ್ಯ ವಸ್ತು, ಸಂಗ್ರಹಾಲಯ ಮತ್ತು ಪುರಾತತ್ವ ಇಲಾಖೆ ಉಪ ನಿರ್ದೇಶಕರಾದ ಡಾ.ಮಂಜುಳಾ ಮಾಹಿತಿ

ಮೈಸೂರು, ಆ.13(ಎಸ್‌ಪಿಎನ್)– ರಾಜ್ಯ ಮತ್ತು ಕೇಂದ್ರ ಸರ್ಕಾರ ಗುರುತಿಸಿರುವ ಪಾರಂಪರಿಕ ಕಟ್ಟಡ, ದೇವಸ್ಥಾನ ಹಾಗೂ ಶಾಸನಗಳನ್ನು ಸಂರಕ್ಷಣೆ ಮಾಡಲು ಮುಂದಾಗಿದ್ದು, ಇದಕ್ಕಾಗಿ ಸರ್ಕಾರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿದೆ ಎಂದು ಪ್ರಾಚ್ಯ ವಸ್ತು, ಸಂಗ್ರಹಾಲಯ ಮತ್ತು ಪುರಾತತ್ವ ಇಲಾಖೆ ಉಪ ನಿರ್ದೇಶಕರಾದ ಡಾ.ಸಿ.ಎನ್.ಮಂಜುಳಾ ತಿಳಿಸಿದರು.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ 'ಪಾರಂಪರಿಕ ಕಟ್ಟಡಗಳ ಸಂರಕ್ಷಣೆ' ಕುರಿತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಗ್ರಾಪಂ ಮಟ್ಟದಲ್ಲಿ ಪಾರಂಪರಿಕ ಕುರುಹುಗಳನ್ನು ಕಂಡು ಬಂದರೆ, ಅಂತಹ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲು ಆಯಾಯ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪಿಡಿಒ ಇಲ್ಲವೇ ತಾಪಂ ಕಾರ್ಯ ನಿರ್ವಹಣಾಧಿಕಾರಿ ಮೂಲಕ ನಮ್ಮ ಇಲಾಖೆಗೆ ಸಾರ್ವಜನಿಕರು ಮಾಹಿತಿ ನೀಡಬಹುದು. ಇದರ ಸಂರಕ್ಷಣೆಗೆ ನರೇಗಾ ಯೋಜನೆಯ ಅನುದಾನ ಬಳಸಿ ಸಂರಕ್ಷಣೆ ಮಾಡಲು ಅವಕಾಶವಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ಬಸವ ಕಲ್ಯಾಣ ಸರ್ಕಾರಿ ವಸ್ತು ಸಂಗ್ರಹಾಲಯ, ಚಿತ್ರದುರ್ಗ, ಗದಗ ವಸ್ತು ಸಂಗ್ರಹಾಲಯ, ಶಿವಮೊಗ್ಗದ ಶಿವಪ್ಪನಾಯಕ ಅರಮನೆ, ಮಂಗಳೂರು ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯ, ಶ್ರೀರಂಗಪಟ್ಟಣದ ಶ್ರೀ ಚಾಮರಾಜೇಂದ್ರ ಸರ್ಕಾರಿ ಸಂಗ್ರಹಾಲಯ, ಬೆಂಗಳೂರು ವೆಂಕಟಪ್ಪ ಚಿತ್ರಶಾಲೆ, ರಾಯಚೂರು, ಹೂವಿನಹಡಗಲಿ, ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ, ಯಳಂದೂರು ದಿವಾನ್ ಪೂರ್ಣಯ್ಯ ಸಂಗ್ರಹಾಲಯ, ಮೈಸೂರು ವೆಲ್ಲಿಂಗ್ಟನ್ ಭವನ, ಬೆಂಗಳೂರು ವಸ್ತು ಸಂಗ್ರಹಾಲಯವಿದೆ. ಇದರಲ್ಲಿ ಕೆಲವು ಸಂಗ್ರಹಾಲಯಕ್ಕೆ ಕನಿಷ್ಠ ದರ ಟಿಕೆಟ್ ನಿಗದಿಪಡಿಸಿದ್ದು, ತಿಂಗಳಿಗೆ ಕನಿಷ್ಟವೆಂದರೂ 20 ಲಕ್ಷದವರೆಗೂ ಆದಾಯ ಬರುತ್ತಿದೆ ಎಂದು ತಿಳಿಸಿದರು.

ನಮ್ಮ ಇಲಾಖೆ ವ್ಯಾಪ್ತಿಯಡಿ 4 ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿದ್ದು, ಇದರಲ್ಲಿ ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಸಹ್ಯಾದ್ರಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ರಚನೆ ಮಾಡಲಾಗಿದೆ. ಮೈಸೂರಿನಲ್ಲಿ ಚಾಮುಂಡಿ ಬೆಟ್ಟ, ತಲಕಾಡು, ಮೈಸೂರು ದಸರಾ ಆಚರಣೆಗಳು ಪರಂಪರೆ ವ್ಯಾಪ್ತಿ ಬರಲಿವೆ ಎಂದು ಮಾಹಿತಿ ನೀಡಿದರು.

ರಾಜ್ಯ ಸಂರಕ್ಷಿತ ಪಾರಂಪರಿಕ ಕಟ್ಟಡಗಳನ್ನು 3ಡಿ ಸ್ಕ್ಯಾನಿಂಗ್ ಮಾಡಿ, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗಿದೆ.

ದೇವರಾಜ ಮಾರುಕಟ್ಟೆ ಉಳಿಸುವ ಪ್ರಯತ್ನ: ಮೈಗ್ರಾಪ ಸಭೆಯಲ್ಲಿ ನಿರ್ಣಯ



ಸಲಹೆಗಳು

● ಪಾರಂಪರಿಕ ನಡುಗೆ ಬಗ್ಗೆ ಪ್ರಚಾರ ಮತ್ತಷ್ಟು ಪ್ರಚಾರ ನೀಡುವಂತೆ ಮನವಿ

● ಪಾರಂಪರಿಕ ಕಟ್ಟಡಗಳು ಸಂರಕ್ಷಣೆ ಬಗ್ಗೆ ತಜ್ಞರ ತಂಡದೊಂದಿಗೆ ಸಂಘಟಿತ ಹೋರಾಟಕ್ಕೆ ಮನವಿ

● ಮೈಸೂರು ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಸೇರಿದಂತೆ ಇತರೆ ಪಾರಂಪರಿಕ ಸ್ಥಳಗಳ ಬಗ್ಗೆ ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರದ ಮೇಲೆ ನಿರಂತರ ಒತ್ತಡ ತರುವಂತೆ ಮನವಿ.

ಮೈಸೂರು, ಆ.13(ಎಸ್‌ಪಿಎನ್)–ನಗರದ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಿಭಾಗೀಯ ಪೀಠ ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಪಾರಂಪರಿಕ ಕಟ್ಟಡವಾದ ದೇವರಾಜ ಮಾರುಕಟ್ಟೆಯನ್ನು ಉಳಿಸುವ ನಿಟ್ಟಿನಲ್ಲಿ ಮೈಸೂರು ಗ್ರಾಹಕರ ಪರಿಷತ್ತು (ಮೈಗ್ರಾಪ) ಪದಾಧಿಕಾರಿಗಳು, ಮೈಸೂರು ಜಿಲ್ಲಾಧಿಕಾರಿ, ಪ್ರಾಚ್ಯ ವಸ್ತು ಸಂಗ್ರಾಹಲಯ ಮತ್ತು ಪುರಾತತ್ವ ಇಲಾಖೆಯ ಆಯುಕ್ತರು, ಮೈಸೂರು ನಗರ ಪಾಲಿಕೆ ಆಯುಕ್ತರಿಗೆ ಆಗಸ್ಟ್ ಕೊನೆಯ ವಾರ ಮನವಿ ಸಲ್ಲಿಸಲು ಒಮ್ಮತ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ 'ಪಾರಂಪರಿಕ ಕಟ್ಟಡಗಳ ಸಂರಕ್ಷಣೆ' ಕುರಿತು ಸಂವಾದ ಕಾರ್ಯಕ್ರಮದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ನಿರ್ವಹಣೆ ಕೊರತೆಯಿಂದ ಶಿಥಿಲಾವಸ್ಥೆ ತಲುಪಿತ್ತು. 2016ರಲ್ಲಿ ದೇವರಾಜ ಮಾರುಕಟ್ಟೆಯ ಉತ್ತರ ದ್ವಾರ ಕುಸಿದಿದೆ. ಬಳಿಕ ದೇವರಾಜ ಮಾರುಕಟ್ಟೆಯನ್ನು ಸಂರಕ್ಷಿಸಬಹುದೆ, ಇಲ್ಲವೆ ಎಂದು ವರದಿ ನೀಡುವಂತೆ ಮೈಸೂರಿನ ಎಂಜಿನಿಯರ್ ಡಾ.ಸೈಯಿದ್ ಶಕೀಬ್ ಉರ್ ರೆಹಮಾನ್ ನೇತೃತ್ವದಲ್ಲಿ ಅಂದಿನ ರಾಜ್ಯ ಸರ್ಕಾರ ತಜ್ಞರ ಸಮಿತಿ ರಚಿಸಿತ್ತು. ಈ ಸಮಿತಿ ದೇವರಾಜ ಮಾರುಕಟ್ಟೆಯನ್ನು ನವೀಕರಣಗೊಳಿಸಲು ಸಾಧ್ಯವಿಲ್ಲ. ನೆಲಸಮಗೊಳಿಸಿ ಹೊಸ ಕಟ್ಟಡ ಕಟ್ಟುವುದು ಬಿಟ್ಟು ಬೇರೆ ಮಾರ್ಗವಿಲ್ಲ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು ಎಂದರು. ಅದರಂತೆ ರಾಜ್ಯ ಸರ್ಕಾರ ದೇವರಾಜ ಮಾರುಕಟ್ಟೆಯನ್ನು ನೆಲಸಮಗೊಳಿಸಿ ಹೊಸ ಕಟ್ಟಡ ನಿರ್ಮಾಣಕ್ಕೆ ತೀರ್ಮಾನಿಸಿತ್ತು. ಇದನ್ನು ಮೈಸೂರಿನ ಪಾರಂಪರಿಕ ಪ್ರಿಯ ನಾಗರಿಕರಾದ ರಾಜಚಂದ್ರ, ಪ್ರೊ.ಸಿ.ಜಯದೇವರಾಜೇ ಅರಸ್, ಗೌರಿ ಸತ್ಯ, ಯಶಸ್ವಿನಿ ಶರ್ಮಾ ಹಾಗೂ ನಿರಂಜನ್ ನಿಕ್ಕಂ ಸೇರಿದಂತೆ ಇತರೆ ಸದಸ್ಯರು ದೇವರಾಜ ಮಾರುಕಟ್ಟೆ ನೆಲಸಮ ಮಾಡದಂತೆ ಹೈಕೋರ್ಟ್‌ನಲ್ಲಿ 2020ರಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸಿದ್ದರು. ಇದನ್ನು ಹೈಕೋರ್ಟ್ ವಜಾಗೊಳಿಸಿರುವುದು ಬೇಸರ ಸಂಗತಿ ಎಂದು ಹಲವು ಮೈಗ್ರಾಪ ಸದಸ್ಯರು ಅಭಿಪ್ರಾಯಪಟ್ಟರು.

ಪಾರಂಪರಿಕ ತಜ್ಞ ಪ್ರೊ.ರಂಗರಾಜು ಮಾತನಾಡಿ, ದೇವರಾಜ ಮಾರುಕಟ್ಟೆ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳನ್ನು ನಿರ್ವಹಣೆ ಮಾಡುವುದು ಸರ್ಕಾರದ ಕರ್ತವ್ಯ. ಆದರೆ, ಕೆಲವು ತಜ್ಞರು ಮಾಡುವ ಎಡವಟ್ಟುಗಳಿಂದ ಈ ರೀತಿಯ ತೀರ್ಪುಗಳು ಬರುತ್ತವೆ ಎಂದು ಸದಸ್ಯರ ಪ್ರಶ್ನೆಗೆ ಉತ್ತರಿಸುವ ವೇಳೆ ಬೇಸರ ವ್ಯಕ್ತಪಡಿಸಿದರು. ಮತ್ತೊಬ್ಬ ಸದಸ್ಯರು ಮಾರುಕಟ್ಟೆ ಸಂರಕ್ಷಣೆ ಮಾಡುವುದು ಒಂದು ಕಡೆಯಾದರೆ, ಅಲ್ಲಿನ ವ್ಯಾಪಾರಿಗಳಾದ ಮೂಲ ಬಾಡಿಗೆದಾರರು ಮತ್ತು ಹಾಲಿ ಅನುಭವದಲ್ಲಿ ಬಾಡಿಗೆದಾರರನ್ನು ಒಕ್ಕಲೆಬ್ಬಿಸಿದರೆ, ಅವರಿಗೆ ಪರ್ಯಾಯ ವ್ಯವಸ್ಥೆ ಏನು? ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಪ್ರೊ.ರಂಗರಾಜು, ಇದು ಬೇರೆ ವಿಷಯ ಇದನ್ನು, ಈ ಸಂದರ್ಭದಲ್ಲಿ ಸೇರಿಸುವುದು ಬೇಡ ಎಂದು ಚುಟುಕಾಗಿ ಉತ್ತರಿಸಿದರು.

ಜನಪ್ರತಿನಿಧಿಗಳ ನಡೆಗೆ ಬೇಸರ: ಮೈಸೂರು ನಗರ ಪಾಲಿಕೆಯ 65 ಸದಸ್ಯರು ಪಾರಂಪರಿಕ ಕಟ್ಟಡವಾದ ದೇವರಾಜ ಮಾರುಕಟ್ಟೆಯನ್ನು ಕೆಡವಿ, ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಕೌನ್ಸಿಲ್‌ನಲ್ಲಿ ಒಪ್ಪಿಗೆ ಸೂಚಿಸಿದ್ದಾರೆ. ಇವರಿಗೆ ಮೈಸೂರಿನ ಪಾರಂಪರಿಕತೆ ಹಾಗೂ ಪರಂಪರೆ ಬಗ್ಗೆ ಯಾರಿಗೂ ತಿಳಿವಳಿಕೆ ಇಲ್ಲ. ಕನಿಷ್ಠ ಇದರ ಬಗ್ಗೆ ತಿಳಿದುಕೊಳ್ಳುವ ವ್ಯವದಾನವೂ ಇಲ್ಲ. ನೂರಾರು ವರ್ಷದ ಪಾರಂಪರಿಕ ಕಟ್ಟಡಗಳನ್ನು ಕೆಡವಲು ಒಪ್ಪಿಗೆ ನೀಡಿರುವುದು ದುರುದೃಷ್ಟಕರ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಾಚ್ಯ ವಸ್ತು, ಸಂಗ್ರಹಾಲಯ ಮತ್ತು ಪುರಾತತ್ವ ಇಲಾಖೆ ವತಿಯಿಂದ ಹಲವು ಪಾರಂಪರಿಕ ಕಟ್ಟಡ, ದೇವಸ್ಥಾನ, ಶಾಸನಗಳನ್ನು ಸಂರಕ್ಷಣೆ ಮಾಡಿರುವ ಕುರಿತು ಉಪ ನಿರ್ದೇಶಕಿ ಡಾ.ಸಿ.ಎನ್.ಮಂಜುಳಾ ಅವರು, ಪೂರ್ಣ ವಿವರ ನೀಡಿದ್ದು, ಅದರ ಬಗ್ಗೆ ಮತ್ತೆ ಸಭೆಗೆ ತಿಳಿಸುವ ಅಗತ್ಯವಿಲ್ಲ ಎಂದು ತಿಳಿಸಿದರು.

ಸರ್ಕಾರದ ಮೇಲೆ ಒತ್ತಡ ತರಬೇಕು: ಇದೀಗ ನಮ್ಮ ಮುಂದೆ ದೇವರಾಜ ಮಾರುಕಟ್ಟೆ ಕೆಡವಿ ಹೊಸದಾಗಿ ಕಟ್ಟುವಂತೆ ಹೈಕೋರ್ಟ್ ವಿಭಾಗೀಯ ಪೀಠ ತೀರ್ಪು ನೀಡಿದೆ. ಇದನ್ನು ವಿರೋಧಿಸಿ ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ಪಾರಂಪರಿಕ ಕಟ್ಟಡವಾದ ದೇವರಾಜ ಮಾರುಕಟ್ಟೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮೈಗ್ರಾಪ ಸದಸ್ಯರು ಸಂಬಂಧಪಟ್ಟ ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಮನವಿ ಮಾಡಿದರು. ಈ ವೇಳೆ ಮೈಸೂರು ಗ್ರಾಹಕರ ಪರಿಷತ್ತು ಸದಸ್ಯರಾದ ಬಾಮಿ ವಿ.ಶಣೈ, ಕೊ.ಸು.ನರಸಿಂಹಮೂರ್ತಿ, ಸಿ.ಎನ್.ಮಂಜುಳಾ, ವಿ.ಎಸ್.ಸೇತುರಾಂ, ಜಿ.ಶ್ರೀಧರ್, ಎಸ್.ಶೋಭನಾ, ಉಷಾ, ರಾಘವೇಂದ್ರ, ಎಸ್.ವಿ.ಶಂಕರ್, ಅರುಣ್ ಕುಮಾರ್ ಶೆಟ್ಟಿ, ಹೆಚ್.ವಿ.ಸುಬ್ಬೇಗೌಡ, ಸಿ.ಆರ್. ಅಶ್ವತ್ ನಾರಾಯಣ, ಎನ್.ಮಂಜುನಾಥ, ಬಿ.ಶರತ್‌ಚಂದ್ರ, ಕೃಷ್ಣ ಜಂಬೂರ್, ಎಂ.ಅಂಜುಂ, ರವಿಶಂಕರ್, ಡಿ.ವಿ. ದಯಾನಂದ ಸಾಗರ್, ಲೀಲಾ ವೆಂಕಟೇಶ್, ರಾಜೇಂದ್ರ ಪ್ರಸಾದ್, ಕಿರಣ್ ಸೇರಿದಂತೆ ಇತರರಿದ್ದರು.